# ಅಧ್ಯಯನ 16 Study XVI

# ನೂತನ ಸೃಷ್ಟಿಯ ಪ್ರಸ್ತುತ ಪಾರಂಪರ್ಯಬಾಧ್ಯತೆಗಳು

## THE PRESENT INHERITANCE OF THE NEW CREATION

**ಆತ್ಮನ ಪ್ರಪ್ರಥಮ ಫಲ – ಸತ್ಯ ನಿರೀಕ್ಷೆಯ ಪ್ರತಿಯಾಗಿ ಸುಳ್ಳು ನಿರೀಕ್ಷೆಗಳು – ನಮ್ಮ ನಿರೀಕ್ಷೆ – ಪರದೈಸಿನಲ್ಲೊಬ್ಬ ಕಳ್ಳ – ಸಂತ ಪೌಲನ ಶ್ರದ್ಧಾಪೂರ್ವಕ ಅಭಿಲಾಷೆ –"ನಮ್ಮ ಈ ಲೋಕದ ಮನೆ' ಮತ್ತು "ಪರಲೋಕದಿಂದ ಕೊಡಲ್ಪಡುವ ನಮ್ಮ ಮನೆ' – ರೂಪಾಂತರ ದೃಶ್ಯ – ಸತ್ತವರೊಳಗಿಂದ ಮೊದಲಿಗೆ ಎದ್ದುಬರಬೇಕಾದವರು – ನೂತನ ಸೃಷ್ಟಿಯ ಪ್ರಸ್ತುತ ಆನಂದಗಳು – "ಬೇಡಿಕೊಳ್ಳಿರಿ, ನಿಮಗೆ ಸಿಕ್ಕುವುದು; ಆಗ ನಿಮ್ಮ ಆನಂದವು ಪರಿಪೂರ್ಣವಾಗುವುದು" – ವಿಶ್ವಾಸವು ಆತ್ಮನ ಫಲವೂ ಮತ್ತು ನೂತನ ಸೃಷ್ಟಿಯ ಬಾಧ್ಯತೆಯ ಪಾಲೂ ಆಗಿದೆ.**

ಪರದೆಯ ಆಚೆ ಕಡೆಯ ಭವಿಷ್ಯತ್ತಿನ ಎಲ್ಲಾ ಆಶೀರ್ವಾದಗಳೂ ನೂತನ ಸೃಷ್ಟಿಗೆ ಸಂಬಂಧಿಸಿರುವುದಿಲ್ಲ. ಆತ್ಮನ ಪ್ರಥಮ ಫಲವು, ಬರಲಿರುವ ಆಶೀರ್ವಾದಗಳ ಮುನ್‍ರುಚಿಯಾಗಿ ನೂತನ ಸೃಷ್ಟಿಗೆ ಪ್ರಸ್ತುತದಲ್ಲಿ ದಯಪಾಲಿಸಲಾಗಿದೆ. ಈ ಪ್ರಥಮ ಫಲಗಳಲ್ಲಿ ಪವಿತ್ರಾತ್ಮನ ವಿವಿಧ ಫಲಗಳೂ ಮತ್ತು ಕೃಪೆಯೂ ಆದ ನಂಬಿಕೆ, ನಿರೀಕ್ಷೆ, ಆನಂದ, ಶಾಂತಿ, ಪ್ರೀತಿ ಮುಂತಾದವುಗಳನ್ನು ನಮೂದಿಸಬಹುದು. ಕೆಲವರು ಇವುಗಳು ಅಲಭ್ಯವಾದವುಗಳು ಮತ್ತು ಕೈಗೂಡಲಾರದವುಗಳು ಎಂದು ಹೇಳುತ್ತಾರೆ. ಆದರೆ ಇವುಗಳು ನೂತನ ಸೃಷ್ಟಿಗಳಷ್ಟೇ ಸತ್ಯವಾದವುಗಳು ಎಂದು ನಾವು ಉತ್ತರಿಸುತ್ತೇವೆ; ನೂತನ ಸೃಷ್ಟಿಯು ಬೆಳೆಯುವ ಅನುಪಾತದಲ್ಲಿಯೇ ಆತನ ಈ ಅನುಭವಗಳ ಮೂಲವಸ್ತುಗಳು, ಆಶೀರ್ವಾದಗಳು ಮತ್ತು ಅಭಿವೃದ್ಧಿಯು ಹೆಚ್ಚುತ್ತಾ ಹೋಗುತ್ತವೆ. ಲೌಕಿಕ ಸಂಗತಿಗಳಿಗೆ ಅನ್ವಯಿಸುವ ಇದೇ ಗುಣಗಳು ಪ್ರಾಕೃತ ಮನುಷ್ಯನಿಗೆ ಅತ್ಯುತ್ತಮ ಆಶೀರ್ವಾದಗಳಾಗಿವೆ ಎಂದು ಒಪ್ಪಿಕೊಳ್ಳಬಹುದು. ಇದರ ಗುಣಲಕ್ಷಣಗಳು ಆತನಿಗೆ ಉನ್ನತ ಮಟ್ಟದ ಆಶೀರ್ವಾದಗಳನ್ನು, ಮತ್ತು ಅನುಕೂಲತೆಗಳನ್ನು ಒದಗಿಸುತ್ತವೆ. ಕ್ರಿಸ್ತನಲ್ಲಿನ ನೂತನ ಸೃಷ್ಟಿಗಳು ತಮ್ಮ ಈ ಲೋಕದ ನಿರೀಕ್ಷೆಗಳನ್ನು, ಸೌಕರ್ಯಗಳನ್ನು ಮತ್ತು ಪ್ರೀತಿಯನ್ನು ಪರಲೋಕದವುಗಳೊಂದಿಗೆ ವಿನಿಮಯಿಸಿಕೊಂಡಾಗ ಎರಡನೆಯವು ತಾವು ಒಪ್ಪಿಸಿದವುಗಳಿಗಿಂತ ಬಹಳಷ್ಟು ಅಮೂಲ್ಯವಾದವುಗಳು ಎಂದು ಕಂಡುಕೊಳ್ಳುತ್ತಾರೆ. ಈ ಲೋಕದ ಪ್ರೀತಿಯು ಕೆಲವೊಮ್ಮೆ ಚಂಚಲವಾದುದು ಮತ್ತು ಸಾಮಾನ್ಯವಾಗಿ ಸ್ವಾರ್ಥತೆಯಿಂದ ಕೂಡಿದ್ದೂ ಆಗಿರುತ್ತದೆ. ಲೌಕಿಕ ನಿರೀಕ್ಷೆಗಳು ಸಾಮಾನ್ಯವಾಗಿ ನಶ್ವರವಾದವುಗಳೂ, ಭ್ರಾಂತಿಕಾರಕವೂ ಆಗಿರುತ್ತವೆ. ಈ ಲೋಕದ ಸಂತೋಷವು ಹೆಚ್ಚೆಂದರೆ ಅಲ್ಪಕಾಲೀನವಾದವುಗಳು ಮತ್ತು ಆಳವಿಲ್ಲದ ಈ ಲೋಕದ ಹಂಬಲಗಳು ಅಪರೂಪವಾಗಿ ತೃಪ್ತಿಗೊಳಿಸುತ್ತವೆ ಮತ್ತು ಸಿಹಿಯೊಂದಿಗೆ ಕಹಿಯಿಂದಲೂ ಕೂಡಿರುತ್ತವೆ. ಆದರೆ, ಇಂಥಹ ಹಂಬಲಗಳನ್ನು, ಸಂತೋಷಗಳನ್ನು, ನಿರೀಕ್ಷೆಗಳನ್ನು, ಪ್ರೀತಿಯನ್ನು ಹೊಂದಿಕೊಳ್ಳಬೇಕೆಂದು ಇಡೀ ಲೋಕವು ಹೆಣಗುತ್ತದೆ. ಅವರ ಅತಿಮುಖ್ಯವಾದ ಸಂತೋಷವನ್ನು ಇನ್ನೂ ಬೆನ್ನಟ್ಟಬೇಕಾಗಿದೆ ಎಂಬುದಕ್ಕೆ ನಾವೇ ಸಾಕ್ಷಿಗಳು. ಅವುಗಳಲ್ಲಿ ಯಾವುದನ್ನು ಹೊಂದಿಕೊಳ್ಳಬೇಕಾದರೂ ಸಾಕಷ್ಟು ನಿರಾಶೆಯೂ ಇರುತ್ತದೆ.

ನೂತನ ಸೃಷ್ಟಿಯ ಬಗ್ಗೆ ಹಾಗಿಲ್ಲ. ಅವರ ನಿರೀಕ್ಷೆಗಳು, ಅವರ ಸಂತೋಷಗಳು, ಅವರ ಪ್ರೀತಿ ಮತ್ತು ಹಂಬಲಗಳು ನಿರಂತರವಾಗಿ ಬೆಳೆಯುತ್ತಾ ಹೋಗುತ್ತವೆ ಮತ್ತು ದೇವರ ವಾಕ್ಯದ ಅತಿ ಮಹತ್ತಾದ ಮತ್ತು ಅಮೂಲ್ಯ ವಾಗ್ದಾನಗಳಿಂದ ಪೋಷಿಸಲ್ಪಡುತ್ತವೆ. ಅವುಗಳು ಯಾವುದೇ ನಿರಾಶೆಯನ್ನು ಉಂಟುಮಾಡುವುದಿಲ್ಲ. ಆದರೆ ಅವರ ವಿಶ್ವಾಸದ ಕಣ್ಣುಗಳು ಕರ್ತನಾದ ಯೇಸುಕ್ರಿಸ್ತನ ಮೂಲಕ ಅವರ ಜೊತೆವಾರಸುದಾರರಾಗಿರುವವರಿಗೆ ದೇವರ ಜ್ಞಾನ ಮತ್ತು ಪ್ರೀತಿಯ ಆಳ ಮತ್ತು ಉದ್ದಗಲಗಳನ್ನು ಗ್ರಹಿಸುವಂತೆ ಬಹು ವಿಸ್ತಾರವಾಗಿ ತೆರೆಯಲ್ಪಡುವಾಗ ಎಲ್ಲಾ ಗ್ರಹಿಕೆಯನ್ನು ಮೀರಿದ ದೇವರ ಶಾಂತಿಯು ಅವರ ಹೃದಯಕ್ಕೆ ಹೆಚ್ಚು ಹೆಚ್ಚಾಗಿ ಹರಿದುಬರುತ್ತವೆ.

ಈ ವಾಗ್ದತ್ತ ದೇಶವು ನೂತನ ಸೃಷ್ಟಿಗಳು ಸಾಂಕೇತಿಕವಾಗಿ ಅವರ ಸಂಪೂರ್ಣ ಪ್ರತಿಷ್ಠೆ ಆದ ಕೂಡಲೆ ಹಾಗೂ ಅವರು ಪವಿತ್ರಾತ್ಮ ಶಕ್ತಿಯನ್ನು ಹೊಂದಿ ಪ್ರವೇಶಿಸುವ ಕ್ಷಣದಲ್ಲಿ ಹಾಲೂ ಮತ್ತು ಜೇನೂ ಹರಿಯುವ ದೇಶವಾಗಿರುತ್ತದೆ; ಮತ್ತು ಇದು ಅನೇಕ ಶೋಧನೆಗಳಿದ್ದರೂ, ಅನೇಕ ಗೆಲುವುಗಳನ್ನು ಪಡೆದಿದ್ದರೂ, ಆಂತರಿಕ ಹೊಡೆದಾಟಗಳಿದ್ದರೂ, ಇಲ್ಲದಿದ್ದರೂ; ಅವರು ಗಳಿಸಿರುವ ವಿಜಯಗಳಿಂದ ಸಂತೋಷ, ಸಮಾಧಾನಗಳಿದ್ದರೂ ಸಹಾ ದೈವೀಕ ಬೋಧನೆ ಮತ್ತು ಮಾರ್ಗದರ್ಶನದ ಅಡಿಯಲ್ಲಿ ಅವರ ಸೋಲುಗಳು ನಂಬಿಕೆ ನಿರೀಕ್ಷೆ, ಮತ್ತು ಸಂತೋಷಗಳ ಮೂಲಗಳಾಗಿ ಪರಿಣಮಿಸುವುದು. ಆತನಿಂದಲೇ ಅಂದರೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ.

### ಸತ್ಯ ನಿರೀಕ್ಷೆಯ ಪ್ರತಿಯಾಗಿ ಸುಳ್ಳು ನಿರೀಕ್ಷೆಗಳು

### True Versus False Hopes

ಸೈತಾನನು ತಾನೊಬ್ಬ ದೇವದೂತ, ಪ್ರಕಾಶದ ದೂತನೆಂದು ತೋರಿಸಿಕೊಂಡು ನೂತನ ಸೃಷ್ಟಿಗಳಿಗೆ ಹಾನಿಯನ್ನುಂಟು ಮಾಡಲು ಬಯಸುತ್ತಾನೆಂಬುದರ ಬಗ್ಗೆ ಅಪೊಸ್ತಲನು ನಮ್ಮ ಗಮನವನ್ನು ಸೆಳೆಯುತ್ತಾನೆ. ಯಾರಾದರೂ ತಾವು ಬೆಳಕಿನಿಂದ, ಸತ್ಯದಿಂದ, ಪವಿತ್ರಾತ್ಮನಿಂದ ಹುಟ್ಟಿದವರೆಂದು ಅರಿಕೆಮಾಡಿದಾಗ ತನ್ನಿಂದ ಮಾನವ ಜಾತಿಯನ್ನು ಆವರಿಸಿದ್ದ ಅಂಧಕಾರದಿಂದ, ಮೂಢ ನಂಬಿಕೆಗಳಿಂದ ಮತ್ತು ವಂಚನೆಗಳಿಂದ ತಪ್ಪಿಸಿಕೊಳ್ಳುವ ಹಾದಿಯಲ್ಲಿ ಇದ್ದಾರೆಂದು ವಿರೋಧಿಯು ಗ್ರಹಿಸಿಕೊಳ್ಳುತ್ತಾನೆ. ನಂತರದಲ್ಲಿ, ಆತನು ನೇರವಾಗಿ ಅವರನ್ನು ಮೂಢನಂಬಿಕೆಗಳಿಗೆ, ಅಂಧಕಾರಕ್ಕೆ ತಳ್ಳಲು ಪ್ರಯತ್ನಿಸದೆ ತನ್ನನ್ನು ರೂಪಾಂತರಗೊಳಿಸಿಕೊಂಡು ನಾಯಕನಂತೆ ಹೆಚ್ಚು

ಬೆಳಕು ಬೀರಲು ಪ್ರಯತ್ನಿಸುತ್ತಾನೆ. ಪ್ರಸ್ತುತ ಸಮಯದಲ್ಲಿ ಇನ್ನೂ ಸ್ಪಷ್ಟವಾದ ಬೆಳಕು ಇದ್ದು ಈ ದಿಸೆಯಲ್ಲಿ ವಿಶೇಷವಾಗಿ ಎಚ್ಚರಿಕೆಯಿಂದಿರುವಾಗಲೂ ಅಪೋಸ್ತಲನು ಈ ಮಾತುಗಳನ್ನು ಬರೆದಾಗಿನಿಂದಲೂ ಆತನು ಇದೇ ಕ್ರಮದಲ್ಲಿ ಉತ್ಸುಕನಾಗಿದ್ದಾನೆ ಎಂಬುದನ್ನು ನಾವು ಮರೆಯಲಾಗದು. ಕ್ರೈಸ್ತ ಪ್ರಪಂಚದ ವಿವಿಧ ವಿಶ್ವಾಸ ಸೂತ್ರಗಳಲ್ಲಿ ನಾವು ಇದಕ್ಕೆ ನಿದರ್ಶನಗಳನ್ನು ಕಂಡುಕೊಳ್ಳಬಹುದಾಗಿದೆ. ಇವುಗಳು ಕತ್ತಲೆಯಿಂದ ಹೊರಬರುವ ಸಾಹಸಗಳನ್ನು ಗುರುತಿಸುತ್ತವೆ, ಆದರೆ ತಪ್ಪು ಸೂತ್ರಗಳಿಂದ, ಭ್ರಷ್ಟ ಗುಣದಿಂದ ಕೂಡಿದ ತಪ್ಪು ನಿರೀಕ್ಷೆಗಳಿಂದ ತುಂಬಿಹೋಗಿವೆ. ಇವುಗಳು ಕ್ರೈಸ್ತರಿಗೆ ಸಹಾಯ ಮಾಡುತ್ತವೆಂದು, ದೇವರನ್ನು ಗೌರವಿಸುತ್ತವೆಂದು, ಆತನ ಮಾತುಗಳನ್ನು ವ್ಯಾಖ್ಯಾನ ಮಾಡುತ್ತವೆಂದು ಹೇಳಿಕೊಂಡಾಗ್ಯೂ ಅವುಗಳು ನಿಜವಾಗಿಯೂ, ಸತ್ಯದ ಸರಿಯಾದ ಕಲ್ಪನೆಗೆ ಅಡಚಣೆಯನ್ನುಂಟು ಮಾಡುವಂತೆ ನಮ್ಮನ್ನು ಪೇಚಿನಲ್ಲಿ ಸಿಕ್ಕಿಸಿಹಾಕುವ ಪಾಶದಂತಿವೆ. ದೇವರ ಅದ್ಭುತ ಹಂಚಿಕೆಗಳಾದ ಪ್ರೀತಿ ಮತ್ತು ಕರುಣೆಯು ಎಲ್ಲವುಗಳು ನಿರ್ಧಿಷ್ಟವಾಗಿ ಸಮಂಜಸವಾಗಿದ್ದರೂ ವಿರೋಧಿಯಿಂದ ನೇರವಾಗಿ ಮಾತ್ರವಲ್ಲ, ಕರ್ತನ ಜನರ ಮುಂದೆ ಅವರ ಅಸಮರ್ಪಕ ನಿರ್ಣಯಗಳಿಗೆ ತಕ್ಕಂತೆ, ಮೊದಲಿಗೆ ಸತ್ಯವು ಸಿದ್ಧಪಡಿಸುವುದಕ್ಕಿಂತ ಹೆಚ್ಚು ಭವ್ಯವಾದ ನಿರೀಕ್ಷೆ ಮತ್ತು ಪ್ರತೀಕ್ಷೆಗಳಿರುವುದಾಗಿ ಕಂಡುಬರುವಂತೆ ಮಾಡುವುದರ ಮೂಲಕ ಪರೋಕ್ಷವಾಗಿಯೂ ವಿರೋಧಿಸುತ್ತದೆ. ಆದರೆ, ತಪ್ಪು ಧೋರಣೆಗಳ ಒಲವು ಸತ್ಯದಿಂದ, ದೇವರ ಯೋಜನೆಯಿಂದ, ಸತ್ಯವೇದದ ಸರಳತೆಯಿಂದ ದೂರ ದೂರಕ್ಕೆ ಸರಿಯುವಂತೆ ಹಾಗೂ ಭಾವನೆಗಳ ಗೊಂದಲತೆಗೆ, ಮೂಢನಂಬಿಕೆ ಮತ್ತು ಪಾದ್ರಿವರ್ಗದ ಅತ್ಯಾಸೆಯ ಐಹಿಕ ಧೋರಣೆಗೆ ನಡಿಸುತ್ತದೆ.

ಈ ಭ್ರಮೆಗಳ ನಿರೀಕ್ಷೆಗಳಲ್ಲಿ ಮನುಷ್ಯರು ಮರಣಿಸಿದಾಗ ಅವರು ನಿಜವಾಗಿಯೂ ಸಾಯುವುದಿಲ್ಲ – ಅವರು ಮರಣಿಸಿದಾಗ ಅವರು ಹಿಂದಿನಂತೆಯೇ ಜೀವಂತರಾಗಿರುತ್ತಾರೆ ಎಂಬ ಸುಳ್ಳು ನಿರೀಕ್ಷೆಯನ್ನು ಸತ್ಯವೇದದಲ್ಲಿನ ಸತ್ತವರ ಪುನರುತ್ಥಾನದ ವಿಷಯವಾಗಿ ವಿರೋಧ ಉಂಟಾಗುವಂತೆ ವಿರೋಧಿಯು ಪರಿಚಯಿಸಿದ್ದಾನೆ. ಇದರಲ್ಲಿ ಒಂದಲ್ಲ ಮತ್ತೊಂದು ನಿರೀಕ್ಷೆಯು ಸುಳ್ಳಾಗಿದೆ. ವಿರೋಧಿಯು ಕ್ರೈಸ್ತ ಪ್ರಪಂಚದಲ್ಲಿ ತನ್ನ ಸುಳ್ಳು ನಿರೀಕ್ಷೆಯು ಚೊಕ್ಕವಾದುದು ಎಂದು ಸಾಧಿಸುವಲ್ಲಿ ಗಮನಾರ್ಹವಾಗಿ ಜಯಶೀಲನಾಗಿದ್ದಾನೆ. ಆದರೆ ಇದನ್ನು ದೇವರ ವಾಕ್ಯವು ಬೆಂಬಲಿಸುವುದಿಲ್ಲ ಮತ್ತು ಇದು ಪುನರುತ್ಥಾನಕ್ಕೆ ಸಂಬಂಧಿಸಿದ ದೇವರ ವಾಕ್ಯಗಳೊಂದಿಗೆ ನೇರವಾದ ಘರ್ಷಣೆ ಹೊಂದಿದೆ. ಸಾಯುವವರು ಯಾರೂ ಇಲ್ಲದಿದ್ದರೆ 'ಪುನರುತ್ಥಾನವಾದರೂ ಎಲ್ಲಿಂದ'?

ಇಂತಹ ಮತ್ತೊಂದು ತಪ್ಪಾದ ನಿರೀಕ್ಷೆಯು ಕರ್ತನ ನಿಷ್ಠಾವಂತರಿಗೆ ದೊರೆಯುವ ಪ್ರತಿಫಲ ನೀಡುವ ಕಾಲದ ಬಗ್ಗೆ, ವಿರೋಧಿಯು ನಾಮಾಂಕಿತ ಸಭೆಯವರನ್ನು ಈ ವಿಷಯದಲ್ಲಿ ಭ್ರಮೆಗೊಳಿಸುವಲ್ಲಿ ಜಯಶಾಲಿಯಾಗಿದ್ದಾನೆ. ಸತ್ತವರ ಪುನರುತ್ಥಾನದ ಸಮಯದವರೆಗೆ ಕಾಯುವ ಬದಲಾಗಿ, ಮೊದಲನೆಯ ಪುನರುತ್ಥಾನದಲ್ಲಿ ಪಾಲುಹೊಂದಿ ಪ್ರತಿಫಲವನ್ನು ನಿರೀಕ್ಷಿಸುವ ಬದಲಾಗಿ ನಾವು ಮರಣಿಸಿದವರು (ಅವರು ಸತ್ತವರಲ್ಲ, ಆದರೆ) ದೇವರ ವಾಕ್ಯದಲ್ಲಿ ಹೇಳಿದಂತೆ ಪುನರುತ್ಥಾನದ ದ್ವಾರದ ಬದಲಾಗಿ ಸಾವಿನ ದ್ವಾರದ ಮೂಲಕವಾಗಿ ಅವರ ಪ್ರತಿಫಲವನ್ನು ತಲಪುತ್ತಾರೆ ಎಂಬ ಸುಳ್ಳು ನಂಬಿಕೆಯನ್ನು ಅವರಲ್ಲಿ ಬಿತ್ತುತ್ತಾನೆ. ಈ ಸುಳ್ಳು ನಿರೀಕ್ಷೆಗಳು ಎಷ್ಟೇ ಆಹ್ಲಾದಕರವೆಂದು ಕ್ಷಣಿಕವಾಗಿ ಕಂಡು ಬಂದರೂ ಉಳಿದೆಲ್ಲ ಸುಳ್ಳು ಸಂಗತಿಗಳಂತೆ ಹಾನಿಕರವಾದವುಗಳು. ದೇವರವಾಕ್ಯಗಳು ಮಾತ್ರವೇ ನಮ್ಮ ಮಾರ್ಗದರ್ಶನವಾಗಬೇಕು. ಭವಿಷ್ಯದಲ್ಲಿನ ನಮ್ಮ ಆಶೀರ್ವಾದಗಳು, ಸಂತೋಷ ಮುಂತಾದವುಗಳೆಲ್ಲವೂ ಸತ್ತವರ ಪುನರುತ್ಥಾನದಲ್ಲಿ ಅಡಕವಾಗಿದೆ ಎಂದು ದೇವರ ವಾಕ್ಯವು ನಮಗೆ ಬೋಧಿಸುತ್ತದೆ.

ಹಿಂದಿನವುಗಳ ತಪ್ಪಾದ ನಿರೀಕ್ಷಣೆಗಳು, ಸಾಯುವ ಕ್ಷಣವು ಪರಲೋಕ ಭಾಗ್ಯದ ಪ್ರಾರಂಭದ ಕ್ಷಣ ಎಂಬುದು ಮಾನವರ ಮನಸ್ಸಿಗೆ ನಿರೂಪಿಸಬಹುದಾದ (ಎಲ್ಲಾ ಸತ್ಯಸಂಗತಿಗಳಿಗೆ, ಸಂಧರ್ಭಗಳಿಗೆ ವ್ಯತಿರಿಕ್ತವಾಗಿದೆ. ಮಾತ್ರವಲ್ಲ, ಪುನರುತ್ಥಾನಕ್ಕೆ ಸಂಬಂಧಿಸಿದ ಅಸಂಖ್ಯಾತ ದೇವರ ವಾಕ್ಯದ ನಿದರ್ಶನಗಳಿಗೆ ತದ್ವಿರುದ್ಧವಾಗಿದೆ. ಈ ವಾಕ್ಯಗಳು ಅದನ್ನು ನೆರವೇರಿಸಲಿಕ್ಕಾಗಿ ಬರಲಿರುವ ನಮ್ಮ ಕರ್ತನ ಎರಡನೆಯ ಬರುವಿಕೆಗೆ ಕಾಯುತ್ತವೆ.) ಇವುಗಳು ಕರ್ತನ ಜನರಿಗೆ ಹಾನಿಕಾರಕವಾಗಿವೆ. ಇದರಲ್ಲಿ ಅವುಗಳು ದೇವರ ವಾಕ್ಯದಿಂದ, ಒತ್ತಿಹೇಳುವ ನಿರೀಕ್ಷೆಗಳಿಂದ, ಮತ್ತು ಇವುಗಳು ದೃಢವಾದ ಕಾರಣಗಳಿಗೆ ಸಂಪೂರ್ಣವಾಗಿ ಹೊಂದಿಕೊಳ್ಳುವುದರಿಂದ ಮತ್ತು ಅದರಲ್ಲಿ ನಮಗೆ ಕಂಡುಬರುವ ಎಲ್ಲಾ ಸತ್ಯಸಂಗತಿಗಳಿಂದ ಕರ್ತನ ಜನರನ್ನು ಬಹುದೂರಕ್ಕೆ ಕೊಂಡೊಯ್ಯುವುದಾಗಿದೆ.

ಮರಣ ಹೊಂದಿದ ಕ್ಷಣಮಾತ್ರದಲ್ಲಿ ಪರಲೋಕದ ಪರಿಸ್ಥಿತಿಗಳಿಗೆ ಬದಲಾಗುವ ಈ ನಿರೀಕ್ಷೆಯು ನೂತನ ಸೃಷ್ಟಿಯ ಕಡೆಯ ಸದಸ್ಯರುಗಳಿಗೆ ಮಾತ್ರವೇ ಆಗಿದ್ದು ಈ ಕಾರ್ಯದಲ್ಲಿ ಪ್ರತಿಪಾದಿಸಲ್ಪಡುವ ಬಹುವಾದ ನಿರೀಕ್ಷೆಯಾಗಿದೆ. ಇದು ಸತ್ಯವಾಗಿದೆ. ಪ್ರಸ್ತುತ ಸಮಯದಲ್ಲಿ ಇಂತಹ ನಿರೀಕ್ಷೆಯನ್ನು ಬೆಂಬಲಿಸಲು ನಮಗೆ ಕಾರಣ ಉಂಟು. ಇದನ್ನು 1878ರ ಮೊದಲು ಉಲ್ಲೇಖಿಸಲು ಸಾಧ್ಯವಿದ್ದಿಲ್ಲ. ಈ ದಿನಾಂಕದಿಂದ ನಿರೀಕ್ಷೆಯ ವಿಸ್ತರಣೆಯು ಪ್ರಾರಂಭವಾಗುತ್ತದೆಂದು ನಾವು ಹಕ್ಕಿನಿಂದ ಹೇಳುತ್ತೇವೆ. ಸುಗ್ಗಿಕಾಲದಲ್ಲಿ ನೂತನ ಸೃಷ್ಟಿಯ ನಿರೀಕ್ಷೆಯು ಈ ವಿಸ್ತರಣೆಯು ಸಂಪೂರ್ಣವಾಗಿ ಸತ್ಯವೇದಕ್ಕನುಸಾರವಾಗಿದೆ. ಎಲ್ಲಾ ಜನರು, ಈ ಕಾಲದವರೆಗಿನ ನೂತನ ಸೃಷ್ಟಿಯ ಸದಸ್ಯರುಗಳು ಸಹಾ ಅವರ ಮರಣದ ಕ್ಷಣದಲ್ಲಿ ಬದಲಾದ ರೆಂಬುದು ನಮ್ಮ ಆಲೋಚನೆಯಲ್ಲ, ಆದರೆ ಸತ್ಯವೇದವು ಹೇಳುವಂತೆ ಅವರೆಲ್ಲರೂ ಕ್ರಿಸ್ತ ಯೇಸುವಿನಲ್ಲಿ ನಿದ್ರೆಹೋದವರಾಗಿದ್ದಾರೆ ಎಂಬುದನ್ನು ನಾವು ಎತ್ತಿಹಿಡಿಯುತ್ತೇವೆ. ಅದೇ ಅಧಿಕಾರದಲ್ಲಿ ದೇವರು ಅವರನ್ನು ಎಬ್ಬಿಸುತ್ತೇನೆಂದು ಮಾಡಿದ ವಾಗ್ದಾನವು ನೂತನ ದಿನದಲ್ಲಿ, ಅಂದರೆ ಮಿಲೇನಿಯಂ ದಿನದಂದು ನೆರವೇರುವುದು ಎಂಬುದನ್ನು ಸಹಾ ನಾವು ಎತ್ತಿ ಹಿಡಿಯುತ್ತೇವೆ. ನಮ್ಮ ಈ ನಿರೀಕ್ಷೆಯು ದೇವರ ವಾಕ್ಯದ ಸಾಕ್ಷಿಯ ಮೇಲೆ ಆಧಾರಗೊಂಡಿದೆ. ನಾವು ಈಗಾಗಲೇ ಈ ನೂತನ ದಿನದ ಅರುಣೋದಯದಲ್ಲಿ ಇದ್ದೇವೆ; ಇಮ್ಮಾನುವೇಲನು ಈಗಾಗಲೇ ನಮ್ಮ ಮಧ್ಯದಲ್ಲಿ ಇದ್ದು ತನ್ನ ರಾಜ್ಯವನ್ನು ಸ್ಥಾಪಿಸುತ್ತಿದ್ದಾನೆ;

ಇದರ ಮೊದಲನೆಯ ಭಾಗವಾಗಿ ಆತನ ಸೇವಕರೊಂದಿಗೆ ಎಣಿಕೆಮಾಡಿಕೊಳ್ಳುವುದು. ಇದನ್ನು ಆತನು ಈ ಲೋಕದಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸುವಾಗ ಕೈಕೊಳ್ಳಬೇಕಾದ ಕಾರ್ಯಗಳ ಬಗ್ಗೆ ನೀಡಿದ ಸಾಮ್ಯಗಳಲ್ಲಿ ಆತನು ವಿಶಿಷ್ಟವಾಗಿ ಅಗ್ರಹಪಡಿಸಿದ್ದಾನೆ. ಸಾಮ್ಯವೊಂದರಲ್ಲಿ ಆತನು ತಲಾಂತುಗಳನ್ನು ಒಪ್ಪಿಸಿಕೊಟ್ಟಿದ್ದ ತನ್ನ ಸ್ವಂತ ಸೇವಕರುಗಳನ್ನು ಕರೆಯುತ್ತಾನೆ. ಲೋಕದವರೊಂದಿಗೆ ಎಣಿಕೆ ಮಾಡಿಕೊಳ್ಳುವ ಮೊದಲು ಆತನು ಇವರನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಾನೆ (ಲೂಕ 19:15 ಮತ್ತಾ. 25:14)

ಈ ಕಾರ್ಯವು ಮೊದಲಿಗೆ ದೇವರ ಮನೆಯಿಂದಲೇ ನೂತನ ಸೃಷ್ಟಿಯಿಂದಲೇ ಪ್ರಾರಂಭಗೊಳ್ಳುತ್ತದೆ ಮತ್ತು ಈಗಾಗಲೇ ಸೂಚಿಸಿರುವಂತೆ* *( Vol.II Chapter vii ನೋಡಿರಿ.) ಕ್ರಿ.ಶ. 1878 "ಕ್ರಿಸ್ತನಲ್ಲಿ ಮರಣಹೊಂದಿದವರು" ಮೊದಲಿಗೆ ಎದ್ದು ಬರುವ ಸಮಯವಾಗಿದೆ. ಇದು ದೇವರ ಪರಿಶುದ್ಧ ಗ್ರಂಥಗಳೊಡನೆ ಪೂರ್ಣ ಸಾಮರಸ್ಯ ಹೊಂದಿದೆ. ಆದುದರಿಂದ, ಅಪೋಸ್ತಲರು ಮತ್ತು ಸಮಗ್ರ ಯುಗದ ಎಲ್ಲಾ ಭಕ್ತಜನರೂ ನಮ್ಮ ದಿನದ ವರೆಗೂ ಈಗಾಗಲೇ ಮಹಿಮೆ ಹೊಂದಿದ್ದಾರೆ. ಈಗಾಗಲೇ ಅವರಿಗೆ ವಾಗ್ದಾನ ಮಾಡಲಾಗಿದ್ದ ಮಹಿಮೆಯುಳ್ಳ ಪವಿತ್ರವಾದ ದೇಹಗಳನ್ನು ಧರಿಸಿಕೊಂಡಿದ್ದಾರೆ, ಆದರೆ ಮಾರ್ಪಟ್ಟವರಾಗಿ ಪ್ರಭುವಿನಂತೆ ಆಗಿರುವುದರಿಂದ, ಆತ್ಮೀಕರಂತೆ, ತೆರೆಯ ಆಚೆಬದಿಯಲ್ಲಿ ಮಾನವ ದೃಷ್ಟಿಗೆ ಅಗೋಚರವಾಗಿದ್ದಾರೆ. ದೇವರ ವಾಕ್ಯದಿಂದ ಕಟ್ಟಲ್ಪಟ್ಟ ನಿರೀಕ್ಷೆಗಳಿಗೆ ಸಂಪೂರ್ಣವಾಗಿ ಒಗ್ಗಿಕೊಂಡು ದೇಹದಲ್ಲಿರುವ ನೂತನ ಸೃಷ್ಟಿಯ ಪ್ರತಿಯೊಬ್ಬ ಸದಸ್ಯನು ಈಗ "ನಿದ್ರೆಮಾಡುವ" ಅವಶ್ಯವಿಲ್ಲ, ಅವರು ದೇವರ ರಾಜ್ಯದ ಸ್ಥಾಪನೆಯ ಸಮಯಕ್ಕಾಗಿ ಕಾಯಲಿ ಎಂದು ನಾವು ಬೋಧಿಸಬಹುದು. ಯಾಕೆಂದರೆ, ರಾಜನೂ, ರಾಜ್ಯವೂ ಈಗಾಗಲೇ ಇಲ್ಲಿದ್ದಾರೆ. ನೂತನ ದೈವೇಚ್ಛೆಯ ಜೀವ ನೀಡುವ ಕಾರ್ಯವು ಈಗಾಗಲೇ ಪ್ರಾರಂಭವಾಗಿದೆ. ಆಯ್ಕೆಗೊಂಡ ನೂತನ ಸೃಷ್ಟಿಯ ಹೆಚ್ಚಿನ ಜನರು ಈಗಾಗಲೇ ಮಹಿಮೆ ಹೊಂದಿಕೊಂಡಿದ್ದಾರೆ ಮತ್ತು ಜೀವಿಸುತ್ತಿರುವವರಿಗೆ ಮೆರಗನ್ನು ಮತ್ತು ಅವರ ಸ್ಥಾನಕ್ಕೆ ಯುಕ್ತವಾಗುವಂತ ತರಬೇತಿಯನ್ನು ಪಡೆದುಕೊಳ್ಳುತ್ತಿದ್ದಾರೆ ಮತ್ತು ಪ್ರಥಮ ಪುನರುತ್ಥಾನಕ್ಕೆ ಹೊಂದಿಕೊಂಡು ಅವರ ಪಾಲನ್ನು ಪಡೆದುಕೊಳ್ಳುವ – ತಕ್ಷಣದಲ್ಲಿ "ಕೊಂಡೊಯ್ಯುವಂತೆ", ಕಣ್ಣುರೆಪ್ಪೆ ಬಡಿಯುವಷ್ಟರಲ್ಲಿ ರೂಪಾಂತರಗೊಳ್ಳುವಂತೆ ದೇಹದ ಮರಣಾನಂತರದ ಕ್ಷಣದಲ್ಲಿ ಅದನ್ನು ನೂತನ ದೇಹವೆಂಬ ಗುಡಾರವನ್ನಾಗಿ, ಆತ್ಮೀಕ ಶರೀರವನ್ನಾಗಿ ತೊಡಗಿಸಿಕೊಳ್ಳುವ ಸಿದ್ಧತೆಗಳನ್ನು ನಡೆಸುತ್ತಿದ್ದಾರೆ. (2 ಕೊರಿಂಥ 5:1, 1 ಥೆಸ. 4:17)

ನಾವು ಈ ಸಂಗತಿಗಳನ್ನು ಪರಿಗಣಿಸುವಾಗ. ಸುಗ್ಗಿ ಕಾಲದ ಈ ವಿಶೇಷ ನಿರೀಕ್ಷೆಗಳು ಮಾತ್ರವೇ ಅಲ್ಲ, ವ್ಯಾಪಕವಾಗಿ ಎಲ್ಲಾ ಸಹೋದರರುಗಳ, ನೂತನ ಸೃಷ್ಟಿಗಳ ಎಲ್ಲಾ ನಿರೀಕ್ಷೆಯಾಗಿರುವ ಮತ್ತು ಸುವಾರ್ತೆಗಳು ನಮ್ಮ ಮುಂದೆ ಇಡಲ್ಪಟ್ಟಿರುವ ನಿರೀಕ್ಷೆಗಳು ಸಹಾ ನಮ್ಮ ಮುಂದಿರಬೇಕಾಗುತ್ತದೆ. ಸ್ಪೂರ್ತಿದಾಯಕ ವಾಕ್ಯಗಳು ಈ ನಿರೀಕ್ಷೆಗಳನ್ನು ಪ್ರಕಟಿಸಲಿ ಮತ್ತು ಕ್ರೈಸ್ತ ಪ್ರಪಂಚದವರು ಎಂದು ಕರೆಯಲ್ಪಡುವವರು ಸಾಮಾನ್ಯವಾಗಿ ಮಾನ್ಯಮಾಡುವ ನಿರೀಕ್ಷೆಗಳಿಗಿಂತ ಇವುಗಳು ವಿಭಿನ್ನವಾಗಿವೆ ಎಂಬ ಸತ್ಯವು ನಮಗೆ ಯಾವುದೇ ಚಿಂತೆಯನ್ನು ಉಂಟು ಮಾಡದಿರಲಿ. ನಿಜವಾಗಿಯೂ, ಕ್ರೈಸ್ತ ಪ್ರಪಂಚವು ಅದರ ವಿಶ್ವಾಸ ಸೂತ್ರಗಳಲ್ಲಿ ಕ್ರಿಸ್ತನ ಎರಡನೆಯ ಬರೋಣದ ಬಗ್ಗೆ ಮತ್ತು ಸತ್ತವರ ಪುನರುತ್ಥಾನದ ಬಗ್ಗೆ ತನ್ನ ನಂಬಿಕೆಯನ್ನು ವ್ಯಕ್ತಪಡಿಸುತ್ತದೆ. ಆದರೆ ಇವುಗಳು ಕೇವಲ ಬಾಯಿಮಾತಿನ ಹೇಳಿಕೆಗಳಾಗಿದ್ದು ಇದರ ಮೂಲಕವಾಗಿ ಅದು ಪರಿಶುದ್ಧ ಗ್ರಂಥಗಳೊಡನೆ ಸ್ವಲ್ಪಮಟ್ಟಿಗೆ ತನ್ನ ಸಂಬಂಧವನ್ನು ಕಾಪಾಡಿಕೊಳ್ಳಲು ಬಯಸುತ್ತದೆ. ಇವುಗಳು ಕ್ರೈಸ್ತ ಪ್ರಪಂಚದ, ಹೆಸರಿಗೆ ಮಾತ್ರದ ಕ್ರೈಸ್ತ ಸಭೆಗಳ ನಿರೀಕ್ಷೆಗಳಾಗಿರುವುದಿಲ್ಲ. ಬದಲಾಗಿ ಅವುಗಳು ನಿಜವಾಗಿಯೂ ಅವರಿಗೆ ಭೀತಿಯುಂಟು ಮಾಡುವವುಗಳಾಗಿವೆ. ಅವರು ಕ್ರಿಸ್ತನ ದ್ವಿತಿಯಾಗಮನದ ಬಗ್ಗೆ ನಿರೀಕ್ಷೆಯನ್ನಿಡುವುದರ ಬದಲಾಗಿ ಭೀತಿ ಪಡುವವರಾಗಿದ್ದಾರೆ. ಸತ್ತವರ ಪುನರುತ್ಥಾನವನ್ನು ನಿರೀಕ್ಷಿಸುವವರಾಗಿರದೆ ಅದಕ್ಕೆ ಹೆದರುತ್ತಾರೆ. ಯಾಕೆಂದರೆ, ಅವರುಗಳಿಗೆ ದೇವರ ಗುಣಲಕ್ಷಣ ಮತ್ತು ಯೋಜನೆಗಳ ಬಗ್ಗೆ ತಪ್ಪು ತಿಳುವಳಿಕೆಗಳನ್ನು ನೀಡಿ ವಿರೋಧಿಯು ಅವರ ದಾರಿತಪ್ಪಿಸಿರುತ್ತಾನೆ. ಹೀಗಾಗಿ ಅವರು ಕ್ರಿಸ್ತನ ಎರಡನೆಯ ಬರೋಣವನ್ನು ನಿರೀಕ್ಷೆಯ ಅಂತ್ಯ, ಪರೀಕ್ಷೆಯ ಅಂತ್ಯ, ಕರುಣೆಯ ಅಂತ್ಯ ಎಂದು ಸಾಮಾನ್ಯವಾಗಿ ನಂಬುತ್ತಾರೆ. ಸತ್ಯವೇದವು ತಿಳಿಸುವಂತೆ ದೇವರು ಬಹಳ ಹಿಂದೆ ವಾಗ್ದಾನ ಮಾಡಿದಂತೆ ಅದು ಈ ಭೂಲೋಕದ ಎಲ್ಲಾ ಕುಟುಂಬಗಳ ಆಶೀರ್ವಾದದ ಪ್ರಾರಂಭವಾಗಿದ್ದು ನಾಲ್ಕು ಸಾವಿರ ವರ್ಷಗಳಿಂದ ಅದರ ಸಿದ್ಧತೆ ನಡೆದಿದೆ ಎಂಬುದನ್ನು ಅವರು ಅರ್ಥಮಾಡಿಕೊಳ್ಳಲಾಗದೇ ಹೋಗಿದ್ದಾರೆ.

ಪುನರುತ್ಥಾನವು ಸಹಾ ಬಹಳ ಭೀತಿಯೊಂದಿಗೆ ಎದುರುನೋಡುವ ಗಣನೆಗೆ ತೆಗೆದುಕೊಳ್ಳಲಾಗಿದೆ. ಯಾಕೆಂದರೆ ಆತ್ಮ ಅಥವ ಜೀವದ ಉಸಿರಿಗೆ ದೇಹವಿಲ್ಲದ ಪ್ರಜ್ಞೆಯಿದೆಯೆಂತಲೂ ಮತ್ತು ದೇಹವು ಒಂದು ರೀತಿಯಲ್ಲಿ ಅದನ್ನು ಕೂಡಿಹಾಕುವ ಸೆರೆಮನೆಯಂತಿದ್ದು ಅದರಿಂದ ಈ ಆತ್ಮವು ಬಿಡುಗಡೆ ಹೊಂದಿಕೊಳ್ಳಲು ಸಂತೋಷಿಸುತ್ತದೆಯೆಂತಲೂ ಇದಕ್ಕೆ ಹಿಂತಿರುಗುವುದು ಒಂದು ರೀತಿಯ ಶಿಕ್ಷೆಯ ರೂಪದಲ್ಲಿದೆ ಎಂಬಿತ್ಯಾದಿ ತಪ್ಪು ಬೋಧನೆಗಳೇ ಇದಕ್ಕೆ ಕಾರಣ. ಈ ರೀತಿಯಲ್ಲಿ ಮಾನವ ಸಂಪ್ರದಾಯಗಳು ಈ ಲೋಕದ ದೇವರಾದ ಮಹಾ ವಿರೋಧಿಯ ಪ್ರಭಾವದಿಂದ ದೇವರ ವಾಕ್ಯವನ್ನು ನಿರರ್ಥಕವನ್ನಾಗಿ ಮಾಡಿವೆ. ಆತನು ಈಗ ಅನೇಕರನ್ನು ಕುರುಡರನ್ನಾಗಿ ಮಾಡಿದ್ದಾನೆ. ಆದರೆ ನಾವು ಈ ವಿಷಯದಲ್ಲಿ ದೇವರ ವಾಕ್ಯದ ಸಾಕ್ಷಿಗಳನ್ನು ನೋಡೋಣ. ಅವುಗಳು ಎಷ್ಟು ಸ್ಪಷ್ಟವಾಗಿ, ಕೂಲಂಕುಶವಾಗಿ ಪ್ರತಿಯೊಂದು ಸಂಧರ್ಭದಲ್ಲಿಯೂ ಕ್ರಿಸ್ತನ ದ್ವಿತೀಯಾಗಮನವನ್ನು ಮತ್ತು ಪುನರುತ್ಥಾನವನ್ನು ಮೊದಲನೆಯದಾಗಿ ಸಭೆಯ, ನೂತನ ಸೃಷ್ಟಿಯ ನಿರೀಕ್ಷೆಯಾಗಿದೆ ಮತ್ತು ಎರಡನೆಯದಾಗಿ ಈ ಲೋಕದ ನಿರೀಕ್ಷೆಯಾಗಿದೆ ಎಂದು ಸೂಚಿಸುತ್ತವೆ ಎಂಬುದನ್ನು ಕಂಡುಕೊಳ್ಳೋಣ :–

**"ಆದುದರಿಂದ, ಮನಸ್ಸಿನ ನಡುವನ್ನು ಕಟ್ಟಿಕೊಂಡು ಸ್ವಸ್ಥಚಿತ್ತರಾಗಿದ್ದು ಯೇಸುಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ**

ದೊರಕುವ ಭಾಗ್ಯದ ಮೇಲೆ ನಿಮ್ಮ ನಿರೀಕ್ಷೆಯನ್ನು ಸಂಪೂರ್ಣವಾಗಿ ಇಡಿರಿ" (1 ಪೇತ್ರ 1:13)

"ಇದು ಮಾತ್ರವಲ್ಲದೆ ಪ್ರಥಮಫಲವಾಗಿರುವ ಪವಿತ್ರಾತ್ಮವರವನ್ನು ಹೊಂದಿದ ನಾವಾದರೋ ದೇವಪುತ್ರರ ಪದವಿಯನ್ನು ಅಂದರೆ ದೇಹಕ್ಕೆ (ಸಭೆ, ಕ್ರಿಸ್ತನ ದೇಹ) ಬರಬೇಕಾದ ವಿಮೋಚನೆಯನ್ನು (ಬಿಡುಗಡೆ) ಎದುರು ನೋಡುತ್ತಾ ನಮ್ಮೊಳಗೆ ನರಳುತ್ತೇವೆ. ನಾವು ರಕ್ಷಣೆಯನ್ನು ಹೊಂದಿದವರಾದರೂ ಇನ್ನು ಎದುರು ನೋಡುವವರಾಗಿದ್ದೇವೆ." ಯಾಕೆಂದರೆ ನಾವುಗಳು ನಿರೀಕ್ಷೆಯಿಂದ ರಕ್ಷಣೆ ಹೊಂದಿದ್ದೇವೆ (ನಿಜವಾಗಿ ಇನ್ನೂ ರಕ್ಷಣೆ ಹೊಂದಿಲ್ಲ, ಆದರೆ ಕೇವಲ ನಿರೀಕ್ಷಣಾ ಅರ್ಥದಲ್ಲಿ ಮಾತ್ರವೇ ರಕ್ಷಣೆ ಹೊಂದಿದ್ದೇವೆ ) (ರೋಮಾ. 8:23,24)

"ನಮ್ಮ ಕರ್ತನಾದ ಯೇಸುಕ್ರಿಸ್ತನ ತಂದೆಯೂ ದೇವರೂ ಆಗಿರುವಾತನಿಗೆ ಸ್ತೋತ್ರವಾಗಲಿ. ಆತನು ಯೇಸುಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ತನ್ನ ಮಹಾಕರುಣಾ ನುಸಾರವಾಗಿ ನಮ್ಮನ್ನು ತಿರುಗಿ ಜೀವಿಸುವಂತೆ ಮಾಡಿ ಜೀವಕರವಾದ ನಿರೀಕ್ಷೆಯನ್ನು ನಮ್ಮಲ್ಲಿ ಹುಟ್ಟಿಸಿ ನಮ್ಮನ್ನು ಲಯ ಕಳಂಕ ಕ್ಷಯುಗಳಿಲ್ಲದ ಭಾಧ್ಯತೆಯನ್ನು ಎದುರು ನೋಡುವವರನ್ನಾಗಿ ಮಾಡಿದನು. ಆ ಭಾಧ್ಯತೆಯು ನಿಮಗೋಸ್ಕರ ಪರಲೋಕದಲ್ಲಿ ಇಟ್ಟಿರುವುದು. ಅಂತ್ಯಕಾಲದಲ್ಲಿ ಪ್ರತ್ಯಕ್ಷವಾಗುವುದಕ್ಕೆ ಸಿದ್ಧವಾಗಿರುವ ರಕ್ಷಣೆಯು ನಂಬುವವರಾದ ನಿಮಗೆ ದೊರೆಯಬೇಕೆಂದು ದೇವರು ನಿಮ್ಮನ್ನು ತನ್ನ ಬಲದಿಂದ ಕಾಯುತ್ತಾನೆ. ನೀವು ಸಧ್ಯಕ್ಕೆ ಸ್ವಲ್ಪಕಾಲ ದೇವರ ಚಿತ್ತಾನುಸಾರ ನಾನಾ ಕಷ್ಟದಲ್ಲಿದ್ದು ದುಃಖಿಸುವವರಾಗಿದ್ದರೂ ಆ ಪದವಿಯನ್ನು ಆಲೋಚಿಸಿ ಹರ್ಷಿಸುವವರಾಗಿದ್ದೀರಿ. ಬಂಗಾರವು ನಾಶವಾಗುವಂಥದ್ದಾಗಿದ್ದರೂ ಅದನ್ನು ಬೆಂಕಿಯಲ್ಲಿ ಪುಟಾಹಾಕಿ ಶೊಧಿಸುವುದುಂಟಷ್ಟೆ. ಬಂಗಾರಕ್ಕಿಂತ ಅಮೂಲ್ಯವಾಗಿರುವ ನಿಮ್ಮ ನಂಬಿಕೆಯು ಈ ಕಷ್ಟಗಳಿಂದ ಶೋಧಿತವಾಗಿ ಯೇಸುಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ ಕೀರ್ತಿ ಪ್ರಭಾವ ಮಾನಗಳನ್ನು ಉಂಟು ಮಾಡುವುದು" ( 1 ಪೇತ್ರ 1: 3–7)

"ನೀತಿವಂತರಿಗೆ ದೊರೆಯುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ; ಅದನ್ನು ನೀತಿಯುಳ್ಳ ನ್ಯಾಯಧಿಪತಿಯಾದ ಕರ್ತನು ಆ ದಿನದಲ್ಲಿ ನನಗೆ ಕೊಡುವನು; ನನಗೆ ಮಾತ್ರವಲ್ಲದೆ ತನ್ನ ಪ್ರತ್ಯಕ್ಷತೆಯನ್ನು ಪ್ರೀತಿಸುವವರೆಲ್ಲರಿಗೂ ಕೊಡುವನು" (2 ತಿಮೋ. 4:8)

"ಇದರ ನಿಮಿತ್ತದಿಂದಲೇ ಈ ಶ್ರಮೆಗಳನ್ನು ಅನುಭವಿಸುತ್ತಾ ಇದ್ದೇನೆ; ಆದರೂ ನಾನು ನಾಚಿಕೆಪಡುವುದಿಲ್ಲ; ನಾನು ನಂಬಿರುವಾತನನ್ನು ಬಲ್ಲೆನು; ಆತನು ನನ್ನ ವಶದಲ್ಲಿರುವುದನ್ನು ಆತನು ಆ ದಿನಕ್ಕಾಗಿ ಕಾಪಾಡುವುದಕ್ಕೆ ಶಕ್ತನಾಗಿದ್ದಾನೆಂದು ದೃಢವಾಗಿ ನಂಬಿದ್ದೇನೆ"(2 ತಿಮೋ. 1:12)

"ನಾವು ಭಕ್ತಿಹೀನತೆಯನ್ನೂ ಲೋಕದ ಆಸೆಗಳನ್ನೂ ವಿಸರ್ಜಿಸಿ ಭಾಗ್ಯಕರವಾದ ನಿರೀಕ್ಷೆಯನ್ನು ಅಂದರೆ ಮಹಾ ದೇವರ ಮತ್ತು ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಪ್ರಭಾವದ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ ಇಹಲೋಕದಲ್ಲಿ ಸ್ವಸ್ಥಚಿತ್ತರಾಗಿಯೂ ನೀತಿವಂತರಾಗಿಯೂ ಭಕ್ತಿಯುಳ್ಳವರಾಗಿಯೂ ಬದುಕಬೇಕೆಂದು ಅದು ನಮಗೆ ಬೋಧಿಸುತ್ತದೆ. ಆತನು ನಮ್ಮನ್ನು ಸಕಲ ಅಧರ್ಮದಿಂದ ವಿಮೋಚಿಸುವುದಕ್ಕೂ ಸತ್ಕ್ರಿಯೆಗಳಲ್ಲಿ ಆಸಕ್ತರಾದ ಸ್ವಕೀಯ ಜನರನ್ನು ತನಗಾಗಿ ಪರಿಶುದ್ಧಮಾಡುವುದಕ್ಕೂ ತನ್ನನ್ನು ಒಪ್ಪಿಸಿಕೊಟ್ಟನು" (ತೀತ 2:12–14)

"ಒಂದನ್ನು ಮಾತ್ರ ನಿನ್ನ ಮುಂದೆ ಒಪ್ಪಿಕೊಳ್ಳುತ್ತೇನೆ. ಅದೇನೆಂದರೆ – ಇವರು ಪಾಷಂಡ ಮತವೆಂದು ಹೇಳುವ ಮಾರ್ಗಕ್ಕನುಸಾರವಾಗಿ ನಾನು ನನ್ನ ಪಿತೃಗಳ ದೇವರನ್ನು ಸೇವಿಸುವವನಾಗಿದ್ದೇನೆ. ಧರ್ಮಶಾಸ್ತ್ರಕ್ಕನುಗುಣವಾಗಿರುವ ಮತ್ತು ಪ್ರಾವಾದಿಗಳ ಗ್ರಂಥದಲ್ಲಿ ಬರೆದಿರುವ ಎಲ್ಲಾ ವಿಷಯಗಳನ್ನೂ ನಂಬುತ್ತೇನೆ. ಇದಲ್ಲದೆ ನೀತಿವಂತರಿಗೂ ಅನೀತಿವಂತರಿಗೂ ಪುನರುತ್ಥಾನವಾಗುವುದೆಂದು ಇವರು ದೇವರಲ್ಲಿ ನಿರೀಕ್ಷೆಯಿಟ್ಟ ಪ್ರಕಾರವೇ ನಾನೂ ನಿರೀಕ್ಷೆಯುಳ್ಳವನಾಗಿದ್ದೇನೆ" (ಅಪೋಸ್ತಲರ ಕೃತ್ಯಗಳು 24: 14–15)

"ಯಾಕೆಂದರೆ ನೀವು ಸತ್ತಿರಲ್ಲಾ, ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ. ನಮಗೆ ಜೀವವಾಗಿರುವ ಕ್ರಿಸ್ತನು ಪ್ರತ್ಯಕ್ಷನಾಗುವಾಗ ನೀವು ಸಹ ಆತನ ಜೊತೆಯಲ್ಲಿ ಪ್ರಭಾವದಿಂದ ಕೂಡಿದವರಾಗಿ ಪ್ರತ್ಯಕ್ಷರಾಗುವಿರಿ" (ಕೊಲೊಸ್ಸೆ 3: 3–4)

"ಸತ್ತವರೆದ್ದುಬರುವರು ಎಂಬ ನಿರೀಕ್ಷೆಯ ವಿಷಯವಾಗಿ ನನ್ನನ್ನು ವಿಚಾರಣೆ ಮಾಡುತ್ತಾರೆ " (ಅಪೋಸ್ತಲರ ಕೃತ್ಯಗಳು 23: 6)

"ಯೇಸು ಅಕೆಗೆ – ನಾನೇ ಪುನರುತ್ಥಾನವೂ, ಜೀವವೂ ಆಗಿದ್ದೇನೆ; ನನ್ನನ್ನು ನಂಬುವವನು ಸತ್ತರೂ ಬದುಕುವನು; ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವುದಿಲ್ಲ" ಎಂದನು (ಯೋಹಾನ 11: 25–26)

"ಅದಕ್ಕೆ ಆಶ್ಚರ್ಯಪಡಬೇಡಿರಿ, ಸಮಾಧಿಗಳಲ್ಲಿರು ವವರೆಲ್ಲರು ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ. ಒಳ್ಳೇದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವುದು (ಮೊದಲನೆಯ ಪುನರುತ್ಥಾನ) ಕೆಟ್ಟದ್ದನ್ನು ನಡಿಸಿದವರಿಗೆ (ಪ್ರಸ್ತುತ ಜೀವನದಲ್ಲಿನ ಅವರ ಕ್ರಮವು ನಿತ್ಯಜೀವಕ್ಕಾಗಿ ದೇವರ ಅನುಮತಿ ಪಡೆಯಲು ವಿಫಲವಾಗಿದೆ) ತೀರ್ಪಿಗಾಗಿ ಪುನರುತ್ಥಾನವಾಗುವುದು (ಶಿಸ್ತಿನ ಮತ್ತು ಬಹುಮಾನದ ಅಡಿಯಲ್ಲಿ ಮಿಲೇನಿಯಂನಲ್ಲಿ ಆಗುವ ಕ್ರಮೇಣವಾದ ಪುನರುತ್ಥಾನ) (ಯೋಹಾನ 5:28–29)

"ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಅವೆ; ಇಲ್ಲದಿದ್ದರೆ ನಿಮಗೆ ಹೇಳುತ್ತಿದ್ದೆನು; ನಿಮಗೆ ಸ್ಥಳವನ್ನು ಸಿದ್ಧ ಮಾಡುವುದಕ್ಕೆ ಹೋಗುತ್ತೇನೆಲ್ಲಾ. ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರುಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು; ಯಾಕೆಂದರೆ ನಾನಿರುವಲ್ಲಿ ನೀವು ಸಹ ಇರಬೇಕು" (ಯೋಹಾನ 14: 2–3)

"ಮನುಷ್ಯಕುಮಾರನು ತನ್ನ ತಂದೆಯ ಪ್ರಭಾವದೊಡನೆ ತನ್ನ ದೂತರ ಸಮೇತವಾಗಿ ಬರುವನು; ಆವಾಗ ಅವನು ಒಬ್ಬೊಬ್ಬನಿಗೆ ಅವನವನ ನಡತೆಗೆ ತಕ್ಕ ಫಲವನ್ನು ಕೊಡುವನು" (ಮತ್ತಾಯ 16:27)

"ಇಗೋ, ಬೇಗ ಬರುತ್ತೇನೆ; ನಾನು ಪ್ರತಿಯೊಬ್ಬನಿಗೆ ಅವನವನ ನಡತೆಯ ಪ್ರಕಾರ ಕೊಡತಕ್ಕ ಪ್ರತಿಫಲವು ನನ್ನ ಕೈಯಲ್ಲಿ ಅದೆ " (ಪ್ರಕಟನೆ 22:12)

**"ಇಗೋ, ನಿನ್ನ ರಕ್ಷಣೆಯು ಸಮೀಪವಾಯಿತು, ಯೆಹೋವನು ದಯಪಾಲಿಸುವ ಬಹುಮಾನವು ಆತನೊಂದಿಗಿದೆ" (ಯೆಶಾಯ 62:11)**

**"ಸಹೋದರರೇ, ಕರ್ತನು ಪ್ರತ್ಯಕ್ಷನಾಗುವ ತನಕ ದೀರ್ಘಶಾಂತಿಯಿಂದಿರಿ,...ನಿಮ್ಮ ಹೃದಯಗಳನ್ನು ದೃಢಪಡಿಸಿಕೊಳ್ಳಿರಿ. ಕರ್ತನ ಪ್ರತಕ್ಷತೆಯು ಹತ್ತಿರವಾಯಿತು" (ಯಾಕೋಬ 5: 7–8)**

**"ಭಯಭ್ರಾಂತ ಹೃದಯರಿಗೆ – ಬಲಗೊಳ್ಳಿರಿ, ಹೆದರ ಬೇಡಿರಿ, ಇಗೋ, ನಿಮ್ಮ ದೇವರು ಮುಯ್ಯಿ ತೀರಿಸುವುದಕ್ಕೂ ದೈವಿಕ ಪ್ರತಿಫಲವನ್ನು ಕೊಡುವುದಕ್ಕೂ ಬರುವನು; ತಾನೇ ಬಂದು ನಿಮ್ಮನ್ನು ರಕ್ಷಿಸುವನು ಎಂದು ಹೇಳಿರಿ. ಆಗ ಕುರುಡರ ಕಣ್ಣು ಕಾಣುವದು, ಕಿವುಡರ ಕಿವಿ ಕೇಳುವದು, ಕುಂಟನು ಜಿಂಕೆಯಂತೆ ಹಾರುವನು, ಮೂಕನ ನಾಲಿಗೆಯು ಹರ್ಷಧ್ವನಿಗೈಯುವದು; ಅರಣ್ಯದಲ್ಲಿ ಒರತೆಗಳು ಒಡೆಯುವವು ಒಣನೆಲದಲ್ಲಿ ನದಿಗಳು ಹುಟ್ಟಿ ಹರಿಯುವವು.' (ಯೆಶಾಯ 35:4–6)**

**"ಆಗ ನಿನ್ನ ಜನರೊಳಗೆ ಯಾರ ಹೆಸರುಗಳು [ಜೀವ ಭಾಧ್ಯರ] ಪಟ್ಟಿಯಲ್ಲಿ ಸಿಕ್ಕುವವೋ ಅವರೆಲ್ಲರೂ ರಕ್ಷಿಸಲ್ಪಡುವರು. ಧೂಳಿನ ನೆಲದೊಳಗೆ ಧೀರ್ಘನಿದ್ರೆ ಮಾಡುವವರಲ್ಲಿ ಅನೇಕರು ಎಚ್ಚತ್ತು ಕೆಲವರು ನಿತ್ಯಜೀವವನ್ನು, (ಪ್ರಥಮ ಪುನರುತ್ಥಾನ) ಕೆಲವರು ನಿಂದನ ನಿತ್ಯತಿರಸ್ಕಾರಗಳನ್ನು ಅನುಭವಿಸುವರು. ಜ್ಞಾನಿಗಳು (ಚಿಕ್ಕ ಹಿಂಡು, ಬುದ್ಧಿವಂತ ಕನ್ಯೆಯರು) ತೇಜೋಮಯವಾದ ಆಕಾಶಮಂಡಲದಂತೆ ಪ್ರಕಾಶಿಸುವರು; (ಸೂರ್ಯನಂತೆ– ಮತ್ತಾಯ 13:43) ಬಹು ಜನರನ್ನು ಸದ್ಧರ್ಮಿಗಳನ್ನಾಗಿ ಮಾಡುವವರು ಯುಗಯುಗಾಂತರ ಗಳಲ್ಲಿಯೂ ನಕ್ಷತ್ರಗಳ ಹಾಗೆ ಹೊಳೆಯುವರು... ನೀನು ಹೋಗಿ ಅಂತ್ಯದವರೆಗೆ ಇರು; ನೀನು ದೀರ್ಘ ನಿದ್ರೆಯನ್ನು ಹೊಂದಿ ಯುಗಸಮಾಪ್ತಿಯಲ್ಲಿ ಎದ್ದು ನಿನಗಾಗುವ ಸ್ವಾಸ್ಥದೊಡನೆ ನಿಲ್ಲುವಿ" (ದಾನಿ. 12: 1–3,13 ; ಸಂಪುಟ III ಪುಟ 83)**

**"ಯೆಹೋವನ ಭಕ್ತರು ಒಬ್ಬರಿಗೊಬ್ಬರು ಮಾತನಾಡಿ ಕೊಳ್ಳಲು ಕರ್ತನು ಕಿವಿಗೊಟ್ಟು ಆಲಿಸಿ ಭಯಭಕ್ತಿಯಿಂದ ತನ್ನ ನಾಮಸ್ಮರಣೆ ಮಾಡುವವರ ಹೆಸರುಗಳನ್ನು ತನ್ನ ಮುಂದೆ ಜ್ಞಾಪಕದ ಪುಸ್ತಕದಲ್ಲಿ ಬರೆಯಿಸಿದನು. ಸೇನಾಧೀಶ್ವರನಾದ ಕರ್ತನು ಇಂತೆನ್ನುತ್ತಾನೆ – ನಾನು ಕಾರ್ಯ ಸಾಧಿಸುವ ದಿನದಲ್ಲಿ ಅವರು ನನಗೆ ಸ್ವಕೀಯ ಜನರಾಗಿರುವರು" (ಮಲಾಕಿ 3: 16–17)**

ತಪ್ಪು ಅರ್ಥಗಳನ್ನು ನೀಡುವ ವಿರೂಪಗೊಂಡ ಧಾರ್ಮಿಕ ಸೂತ್ರಗಳು ಮತ್ತು ಹಾಸ್ಯಾಸ್ಪದ ಕಲ್ಪನೆಗಳು ಮುಖ್ಯವಾಗಿ ದೇವರ ವಾಕ್ಯವೆಂಬ ದೀಪದ ನಡೆಸುವಿಕೆ ಇಲ್ಲದ ಮಾನವ ತತ್ವ ಶಾಸ್ತ್ರಜ್ಞರಿಂದ ಬರುತ್ತವೆ. ಇವರುಗಳು ದೇವರ ಅನೇಕ ಪ್ರಿಯ ಭಕ್ತಜನರ ನಿರ್ಣಯಗಳನ್ನು ದಾರಿ ತಪ್ಪಿಸಿದ್ದಾರೆ ಮತ್ತು ಈ ಹಿಂದಿನ ಮತ್ತು ಕರ್ತನ ಜನರ ನಿಜವಾದ ನಿರೀಕ್ಷೆಗಳ ಬಗ್ಗೆ ಇರುವ ಅನೇಕ ಕೂಲಂಕುಷವಾದ ಹೇಳಿಕೆಗಳನ್ನು ನಿರಾಕರಿಸಿ ಅವುಗಳ ಬಲ, ಸೌಂದರ್ಯ ಮತ್ತು ಶಕ್ತಿಯನ್ನು ಇತರ ಹೆಚ್ಚು ಕಡಿಮೆ ಸಾಂಕೇತಿಕ ಧರ್ಮ ಗ್ರಂಥದಿಂದ ಸೂರೆಮಾಡಿದ್ದಾರೆ ಮತ್ತು ಇವುಗಳು ಸರಳವಾದ ಹೇಳಿಕೆ ನೀಡದಂತೆ ತಮ್ಮ ನಿಜವಾದ ಸ್ಥಾನದಿಂದ ಮತ್ತು ಅರ್ಥದಿಂದ ತಿರುಚಿಸಲ್ಪಟ್ಟಿವೆ. ನಮ್ಮ ತಿಳಿವಳಿಕೆಯ ಕಣ್ಣುಗಳಿಗೆ ಸ್ಪಷ್ಟವೂ ಸರಳವೂ ಆಗುವಂತೆ ಹಾಗೂ ನಂಬಿಕೆ ಮತ್ತು ನಿರೀಕ್ಷೆ ಮತ್ತು ವಿಧೇಯತೆಯ ಹಾದಿ ಹಿಡಿಯುವಂತೆ ನಾವು ಇವುಗಳನ್ನು ಪರೀಕ್ಷಿಸಬೇಕು. ನಂತರದಲ್ಲಿ ನಾವು ನಮ್ಮ ಪ್ರಸ್ತುತ ಜೀವನಕ್ಕೆ ಸೇರಿದ ನಿರೀಕ್ಷೆಗಳಿಗೆ ಅಧಿಕವಾದ ಮತ್ತು ನಮ್ಮ ಭಾಧ್ಯತೆಗಳ ಪ್ರಥಮ ಫಲವಾಗಿ ಅನೇಕ ಇತರ ಆಶೀರ್ವಾದಗಳನ್ನು ಕಂಡುಕೊಳ್ಳುವಂತೆ ಮುಂದುವರೆಯುತ್ತೇವೆ.

## ಪರದೈಸಿನಲ್ಲೊಬ್ಬ ಕಳ್ಳ
## The Thief in Paradise

ಆ ಕಳ್ಳನು ಯೇಸುವಿಗೆ – "ಯೇಸುವೇ, ನೀನು ನಿನ್ನ ರಾಜ್ಯವನ್ನು ಪಡೆದವನಾಗಿ ಬರುವಾಗ ನನ್ನನ್ನು ನೆನೆಸಿಕೋ ಅಂದನು. ಅದಕ್ಕೆ ಯೇಸು – ( ಪಶ್ಚಾತ್ತಾಪ ಪಟ್ಟ ಕಳ್ಳನಿಗೆ) ಈ ಹೊತ್ತೇ ನನ್ನ ಸಂಗಡ ಪರದೈಸಿನಲ್ಲಿರುವಿ ಎಂದು ನಿನಗೆ ಸತ್ಯವಾಗಿ ಹೇಳುತ್ತೇನೆ ಎಂದು ಉತ್ತರ ಕೊಟ್ಟನು" (ಲೂಕ 23: 42,43).

ರಕ್ಷಣೆಯು ನಿತ್ಯಯಾತನೆಯಿಂದ ತಪ್ಪಿಸಿಕೊಂಡು ಸಂತೋಷದ ಪರದೈಸಿಗೆ ಸೇರುವುದಾಗಿದೆ ಎಂದು ಪರಿಗಣಿಸುವವರು ಕೃಪೆಯ ಆಕಸ್ಮಿಕ ಸಂಧರ್ಭಗಳ ಮೇಲೆ ಆತುಕೊಳ್ಳುತ್ತಾರೆ ಮತ್ತು ಇಲ್ಲಿ ಹೇಳಿರುವ "ಆಯ್ಕೆಯ ಸಿದ್ಧಾಂತ'ದಲ್ಲಿ ಇದು ಮಾದರಿಯಾಗಿ ತೋರಿಸಲ್ಪಟ್ಟಿದೆ ಮತ್ತು ಇದರಲ್ಲಿ ನಮ್ಮ ಕರ್ತನಾದ ಯೇಸುವು ಕಳ್ಳನೊಬ್ಬನ ಸಮಾಧಾನಕರ ಮಾತುಗಳಿಂದ ಸಂತೋಷಗೊಂಡು, ಆತನನ್ನು ಪರಲೋಕದ ಭಾದ್ಯತೆಗೆ ಆಯ್ಕೆ ಮಾಡುತ್ತಾನೆ ಮತ್ತು ಅದಕ್ಕೆ ಸಮವಾಗಿ ಮತ್ತೊಬ್ಬ ಕಳ್ಳನು ನಿಷ್ಕಾರುಣ್ಯವಾಗಿ ಮತ್ತು ಬಿಡುಗಡೆ ಇಲ್ಲದಂತೆ ನಿತ್ಯಯಾತನೆ ಹೊಂದಿಕೊಳ್ಳುವಂತೆ ಮಾಡುತ್ತಾನೆ ಎಂದು ಆಲೋಚಿಸುತ್ತಾರೆ. ನಿಜವಾಗಿಯೂ ದೇವರು ರಕ್ಷಣೆಯನ್ನು ಈ ರೀತಿಯಾಗಿ "ಲಾಟರಿ'ಯಂತೆ ಅಥವಾ ಆಕಸ್ಮಿಕ ಅವಕಾಶವನ್ನಾಗಿ ಮಾಡಿರುತ್ತಿದ್ದರೆ, ಇದನ್ನು ನಂಬುವವರು "ಸಭೆಯ ಲಾಟರಿ'ಯ ಬಗ್ಗೆ ಏನೂ ಹೇಳುವಂತಿಲ್ಲ ಮತ್ತು ಈ ಲೋಕದ ಲಾಟರಿಗಳ ಬಗ್ಗೆಯೂ ಹೆಚ್ಚು ಹೇಳುವಂತಿಲ್ಲ. ಆದರೆ, ನಿಜ ಸಂಗತಿ ಇದಾಗಿರುವುದಿಲ್ಲ. ದೇವರ ವಾಕ್ಯಗಳನ್ನು ಬಹಳಷ್ಟು ತಪ್ಪಾಗಿ ಅರ್ಥೈಸಲಾಗಿದೆ. ಇದರ ನಿಜವಾದ ಅರ್ಥ ಸೂಚಿಸುವಂತೆ ನಾವು ಇದರ ಸುತ್ತಮುತ್ತಲನ್ನು ಮತ್ತು ಸಂಬಂಧಗಳನ್ನು ಪರಿಶೀಲಿಸೋಣ.

ಇಲ್ಲಿಯ ಸನ್ನಿವೇಶದಲ್ಲಿ ಕರ್ತನು ದಂಡನೆಗೆ ಒಳಗಾಗಿದ್ದಾನೆ ಮತ್ತು "ನನ್ನ ರಾಜ್ಯವು ಈ ಲೋಕದ್ದಲ್ಲ" ಎಂಬುದಾಗಿ ಆತನು ಹೇಳಿದ್ದರೂ ಕೈಸರನ ಸರ್ಕಾರಕ್ಕೆ ವಿರುದ್ಧವಾಗಿ ದಂಗೆ ಎದ್ದು ತಾನೊಬ್ಬ ರಾಜನೆಂದು ಹೇಳಿಕೊಂಡ ಅಪವಾದ ಆತನ ಮೇಲಿದೆ. ಮಾತ್ರವಲ್ಲದೆ ಆತನ ತಲೆಯ ಮೇಲ್ಭಾಗದ ಶಿಲುಬೆಯ ಮೇಲೆ ಮೂರು ಭಾಷೆಗಳಲ್ಲಿ "ಈತನು ನಜರೇತಿನ ಯೇಸು, ಯೆಹೂದ್ಯರ ಅರಸನು" ಎಂಬುದಾಗಿ ಬರೆದಿದೆ. ಆತನ ಈ ಹೇಳಿಕೆಯನ್ನು ತಿಳಿದವರು ಆತನನ್ನು ಅಪಹಾಸ್ಯಮಾಡುತ್ತಿದ್ದರು ಆದರೆ ಆತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟ ಇಬ್ಬರು ಕಳ್ಳರಲ್ಲಿ ಒಬ್ಬನು ಹಾಗೆ ಮಾಡಲಿಲ್ಲ. ನಿಸ್ಸಂದೇಹವಾಗಿ, ಆತನು ಕ್ರಿಸ್ತನ ಬಗ್ಗೆ ಮತ್ತು ಆತನ ಅದ್ಭುತ ಗುಣಲಕ್ಷಣಗಳ ಬಗ್ಗೆ, ಕಾರ್ಯಗಳ ಬಗ್ಗೆ ಕೇಳಿ ತಿಳಿದಿದ್ದನು. ಆತನು ತನ್ನ ಮನದಲ್ಲಿ ಯೇಸುವಿನ ಬಗ್ಗೆ" ಈತನು

ನಿಜವಾಗಿಯೂ ಒಬ್ಬ ಅಪರೂಪನಾದ ಅದ್ಭುತ ಮಾನವ: ಆತನ ಹೇಳಿಕೆಗೆ ಆಧಾರವಿಲ್ಲವೆಂದು ಯಾರು ತಿಳಿದಿದ್ದಾರೆ? ಈತನು ನಿಜವಾಗಿಯೂ ದೇವರಿಗೆ ಅತಿ ನಿಕಟವಾಗಿ ಜೀವಿಸುವವನಾಗಿದ್ದಾನೆ" ಎಂದು ಹೇಳಿಕೊಂಡು "ನಾನು ಅವನೊಡನೆ ಒಂದೆರಡು ಅನುಕಂಪದ ಮಾತುಗಳನ್ನು ಆಡುವೆನು, ಇದರಿಂದ ಏನೂ ಹಾನಿಯಾಗಲಾರದು" ಎಂದು ನಿರ್ಣಯಿಸಿಕೊಂಡಿದ್ದಿರಬಹುದು. ಮೊದಲಿಗೆ ಆತನು ತನ್ನ ಸಹಚರನಾದ ಮತ್ತೊಬ್ಬ ಕಳ್ಳನನ್ನು ಗದರಿಸುತ್ತಾನೆ ಮತ್ತು ಕರ್ತನ ನಿರಪರಾಧಿತನವನ್ನು ಎತ್ತಿ ತೋರಿಸುತ್ತಾನೆ. ನಂತರದಲ್ಲಿ ಮೇಲ್ಕಾಣಿಸಿದ ಸಂಭಾಷಣೆಗಳು ನೆರವೇರುತ್ತವೆ.

ಈ ಕಳ್ಳನಿಗೆ ಯೇಸುವಿನ ಬಗ್ಗೆ ಸರಿಯಾದ ಮತ್ತು ನಿರ್ದಿಷ್ಟವಾದ ಕಲ್ಪನೆ ಇತ್ತೆಂದು ನಾವು ಊಹಿಸಲಾಗದು. - ಕೇವಲ ಮನಸ್ಸಿನಲ್ಲಿದ್ದದ್ದೇ ಹೊರತು ಹೆಚ್ಚೇನಿಲ್ಲ. ಆತನು ಸದ್ಯದಲ್ಲಿಯೇ ಮರಣವನ್ನಪ್ಪುತ್ತಾನೆ, ನಿರೀಕ್ಷೆಯ ಒಂದು ಹುಲ್ಲುಕಡ್ಡಿ, ಏನೂ ಇಲ್ಲದಿರುವುದಕ್ಕಿಂತ ಎಷ್ಟೋ ವಾಸಿ. ಇದಕ್ಕಿಂತ ಹೆಚ್ಚಿನ ಗಣ್ಯತೆ ನೀಡುವುದು ಎಲ್ಲಾ ಅಪೋಸ್ತಲರ ಮತ್ತು ಭಕ್ತಜನರಿಗಿಂತ ಮುಂದಾಗಿ ಅವನಿಗೆ ವಿಶ್ವಾಸ ಸ್ಥಾನವನ್ನು ನೀಡಿದಂತಾಗುತ್ತದೆ. ಯೇಸುವಿನ ಹಿಂಬಾಲಕರೆಲ್ಲರೂ ಆ ಸಮಯದಲ್ಲಿ ಪಲಾಯನ ಮಾಡಿದ್ದಾರೆ, ದಿಗಿಲುಗೊಂಡಿದ್ದಾರೆ. ಮೂರು ದಿನಗಳ ನಂತರ ಇವರುಗಳು "ನಾವಾದರೋ ಇಸ್ರಾಯೇಲ್ ಜನರನ್ನು ಬಿಡಿಸತಕ್ಕವನು ಈತನೇ ಎಂದು ನಿರೀಕ್ಷಿಸಿಕೊಂಡಿದ್ದೆವು" (ಲೂಕ 24:21) ಎಂದು ಹೇಳುತ್ತಾರೆ.

ಆತನ ಬಿನ್ನಹದ ಅಭಿಪ್ರಾಯದ ಬಗ್ಗೆ ನಮಗೆ ಯಾವುದೇ ಅನುಮಾನಗಳಿಲ್ಲ. ಯೇಸು ಕ್ರಿಸ್ತನು ತನ್ನ ಮಹಿಮಾ ರಾಜ್ಯವನ್ನು ಪಡಕೊಳ್ಳುವಾಗ ತನ್ನ ಮೇಲೆ ಕೃಪೆ ತೋರಿಸಬೇಕೆಂದು, ತನ್ನನ್ನು ಕಾಪಾಡಬೇಕೆಂದು ಬಯಸಿದನು. ಈಗ ಇದಕ್ಕೆ ನಮ್ಮ ಕರ್ತನ ಉತ್ತರವನ್ನು ಗಮನಿಸೋಣ. ಆತನು ನನಗೆ ರಾಜ್ಯವಿಲ್ಲವೆಂದು ಹೇಳಲಿಲ್ಲ. ಬದಲಾಗಿ ಆತನ ಆ ಕಳ್ಳನ ಬಿನ್ನಹವು ಸೂಕ್ತವಾಗಿದೆ ಎಂಬ ಸೂಚನೆಯನ್ನು ನೀಡುತ್ತಾನೆ. "ನಿಜವಾಗಿ" "ಸತ್ಯವಾಗಿ" ಎಂಬ ಭಾಷಾಂತರ ಪದವು ಗ್ರೀಕ್ ಮೂಲ ಪದವಾದ "ಆಮೆನ್"ನಿಂದ ಬಂದುದು. ಇದು "ಹಾಗೆಯೇ ಆಗಲಿ" (ತಥಾಸ್ತು) ಅಥವಾ "ನಿನ್ನ ಕೋರಿಕೆಯನ್ನು ದಯಪಾಲಿಸಲಾಗಿದೆ" ಎಂಬ ಅರ್ಥ ಕೊಡುತ್ತದೆ. "ಈ ಹೊತ್ತೇ (ಇದೊಂದು ಅಂಧಕಾರದ ದಿನದಂದು, ನಾನೊಬ್ಬ ವಂಚಕನಂತೆ ಬಿಂಬಿಸಲ್ಪಟ್ಟು ಒಬ್ಬ ಮಹಾ ಪಾತಕಿಯಂತೆ ಸಾಯುತ್ತಿದ್ದೇನೆ) ನನ್ನ ಸಂಗಡ ಪರದೈಸಿನಲ್ಲಿರುವಿ ಎಂದು ನಿನಗೆ ಸತ್ಯವಾಗಿ ಹೇಳುತ್ತೇನೆ" (ಲೂಕ 23:43) ಎಂದು ಯೇಸು ಅವನಿಗೆ ವಾಗ್ದಾನಮಾಡಿದನು. ಈ ವಾಗ್ದಾನದ ಸಾರಾಂಶವೆಂದರೆ, ಕರ್ತನು ತನ್ನ ರಾಜ್ಯವನ್ನು ಸ್ಥಾಪಿಸುವಾಗ ಅದು "ಪರದೈಸ್' ಆಗಿರುತ್ತದೆ. ಅದರಲ್ಲಿ ಈ ಕಳ್ಳನನ್ನು ನೆನಪುಮಾಡುವುದು ಮಾತ್ರವಲ್ಲ ಆತನು ಸಹಾ ಅದರಲ್ಲಿರುತ್ತಾನೆ. ಇಂಗ್ಲಿಷ್ ಭಾಷೆಯಲ್ಲಿರುವ ವಚನದಲ್ಲಿ, Today ಎಂಬ ಪದದ ಹಿಂದೆ ಇರುವ ಅಲ್ಪವಿರಾಮ (,) ವನ್ನು ನಾವು Today, ನಂತರ ಹಾಕಿರುವುದನ್ನು ನೀವು ಗಮನಿಸಬೇಕು.

ಇದು ನಮ್ಮ ಕರ್ತನ ಮಾತುಗಳನ್ನು ಸಮರ್ಪಕವಾಗಿಯೂ, ಸ್ಪಷ್ಟವಾಗಿಯೂ ಮತ್ತು ಸಮಂಜಸವಾಗಿಯೂ ಮಾಡುತ್ತದೆ. ಆತನು ಬಯಸಿದ್ದಲ್ಲಿ ಆ ಕಳ್ಳನಿಗೆ ಆತನು ಮತ್ತಷ್ಟು ಹೇಳಬಹುದಿತ್ತು. ಆತನು ತಾನು ಪರದೈಸಿಗೆ ಹೋಗುವ ಸದಾವಕಾಶವು ತನ್ನ ಈಡುಬಲಿಯ ಕಾರಣ ಮತ್ತು ಅದನ್ನು ತೆತ್ತದುದರಿಂದ ತನಗೆ ಒದಗಿ ಬಂದಿದೆ ಎಂದು ಹೇಳಬಹುದಿತ್ತು. ತಾನು ಮತ್ತೊಬ್ಬ ಕಳ್ಳನ ಸಲುವಾಗಿಯೂ ಮತ್ತು ಅಲ್ಲಿ ಬಾಯಿಬಿಡುತ್ತಿರುವ, ಪರಿಹಾಸ್ಯ ಮಾಡುತ್ತಿರುವ ಸಮಸ್ತ ಜನರಿಗಾಗಿ, ಈಗಾಗಲೇ ಸಮಾಧಿ ಹೊಂದಿದ, ಮುಂದೆ ಹುಟ್ಟಿಬರಲಿರುವ ಅಸಂಖ್ಯಾತ ಜನರಿಗಾಗಿ ಅಂದರೆ ಅವರೆಲ್ಲರ ಪಾಪಕ್ಕೆ ಈಡುಬಲಿಯಾಗಿ ಸಾಯುತ್ತಿದ್ದೇನೆ ಎಂದೂ ಹೇಳಬಹುದಿತ್ತು. ಇದು ನಮಗೆ ತಿಳಿದದೆ, ಯಾಕೆಂದರೆ ಯೇಸು ಕ್ರಿಸ್ತನು ದೇವರ ಕೃಪೆಯಿಂದ ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇ ಬೇಕಾಯಿತು. ಪ್ರತಿಯೊಬ್ಬರೂ ಸೂಕ್ತ ಸಮಯದಲ್ಲಿ ಏದೇನಿನ ಪರಿಸ್ಥಿತಿ ಹೊಂದಿಕೊಂಡು ಹಿಂತಿರುಗಿ ಬರಲಿ ಎಂಬ ಸದುದ್ದೇಶದಿಂದ ತನ್ನನ್ನೇ ಎಲ್ಲರ ಸಲುವಾಗಿ ಈಡುಬಲಿಯಾಗಿ ಅರ್ಪಿಸಿದನು. ಈ ಏದೇನಿನ ಪರಿಸ್ಥಿತಿಯನ್ನು ಪ್ರಥಮ ಪುರುಷನ ಪಾಪದ ಸಲುವಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು. ಆದರೆ ಕ್ರಿಸ್ತನ ನೀತಿಯುತ ಸಮರ್ಪಣೆಯ ಕಾರಣ ಇದು ಮಾನವರಿಗೆ ಪುನಃ ಸ್ವಾಧೀನ ಪಡಿಸಲಾಯಿತು. (ಇಬ್ರಿಯ 2:9, 1 ತಿಮೋಥೆ 2:5,6 ಮತ್ತು ಅ. ಕೃ. 3:19)

ಈಗಾಗಲೇ ನಾವು ಕಂಡುಕೊಂಡಂತೆ, ಏದೇನ್ ತೋಟವೆಂಬ ಈ ಭೂಮಿಯು ಪೂರ್ಣ ಶಾಪ ವಿಮೋಚನೆಯ ನಂತರ ಹೇಗಿರಬಹುದೆಂಬುದಕ್ಕೆ ಒಂದು ದೃಷ್ಟಾಂತವಾಗಿದೆ – ಅದು ಪರಿಪೂರ್ಣವಾಗಿಯೂ, ರಮಣೀಯವಾಗಿಯೂ ಇರುತ್ತದೆ. "ಪರದೈಸ್' ಎಂಬುದು ಅರೇಬಿಕ್ ಮೂಲ ಪದವಾಗಿದ್ದು ಉದ್ಯಾನವನ ಇಲ್ಲವೆ ತೋಟವನ್ನು ಸೂಚಿಸುತ್ತದೆ. Septuagint ನಲ್ಲಿ ಇದನ್ನು "ದೇವರು ಏದೇನಿನಲ್ಲಿ ಒಂದು ಉದ್ಯಾನವನ (ಪರದೈಸು)ವನ್ನು ಮಾಡಿದನು" (ಆದಿ. 2:8) ಎಂದು ಭಾಷಾಂತರಿಸಲಾಗಿದೆ. ಕ್ರಿಸ್ತನು ತನ್ನ ರಾಜ್ಯವನ್ನು ಸ್ಥಾಪಿಸಿ, ಕೆಡುಕನನ್ನು ಬಂಧಿಸುವುದು ಮುಂತಾದವುಗಳು ನಡೆಯುವಾಗ, ಈ ಭೂಮಿಯು ಕ್ರಮೇಣ ಪರದೈಸು ಆಗುವುದು ಮತ್ತು ಸಮಾಧಿಯಲ್ಲಿರುವ ಆ ಎರಡು ಕಳ್ಳರುಗಳೊಡಗೂಡಿ ಎಲ್ಲರೂ ಅದರೊಳಕ್ಕೆ ಸೇರುವರು. ನಂತರದಲ್ಲಿ ಅದರ ಕಾನೂನುಗಳಿಗೆ ವಿಧೇಯರಾಗಿ ಅವರು ಅದರಲ್ಲಿ ಜೀವಿಸುತ್ತಾ ಸದಾ ಕಾಲವೂ ಸಂತೋಷ ವಾಗಿರಬಹುದು. ಹೀಗಿದ್ದಾಗ್ಯೂ ಆ ಕತ್ತಲೆಯ ಸಮಯದಲ್ಲಿ ಶ್ರಮೆ ಅನುಭವಿಸುತ್ತಿರುವ ಕರ್ತನಿಗೆ ಹೇಳಿದ ಕರುಣೆಯ ಮಾತುಗಳಿಗೆ, ಈ ಅರಸನು ತನ್ನ ಸಹೋದರರೆಂದು ಕರೆದವರಿಗೆ ಒಂದು ಲೋಟ ನೀರನ್ನಾಗಲೀ ಕೊಟ್ಟು ಅಥವಾ ಬೇರೆ ರೀತಿಯಲ್ಲಿ ಕನಿಕರ ತೋರಿಸಿದವರಿಗೆ ಮುಂದೆ ಬರತಕ್ಕ ಬಹುಮಾನವನ್ನು ತಪ್ಪದೆ ನೀಡಲಾಗುವುದು ಎಂಬ ಕರ್ತನ ಮಾತನ್ನು ನಾವು ಶಂಕಿಸುವುದಿಲ್ಲ (ಮತ್ತಾ. 10:42)

ದೇವರ ವಾಕ್ಯಗಳಲ್ಲಿ ಪರದೈಸನ್ನು ಈ ಲೋಕಕ್ಕೆ ಪಾಪವೂ ಶಾಪವೂ ಪ್ರವೇಶಿಸುವ ಮೊದಲು ಮಾನವನು ಆತನ ಸೃಷ್ಟಿಕರ್ತನೊಂದಿಗೆ ಸಾಮರಸ್ಯದಿಂದಿದ್ದ ಪುರಾತನವಾದ

ಆಶೀರ್ವಾದದಾಯಕ ಸ್ಥಿತಿಯನ್ನು ವರ್ಣಿಸಲು ಉಪಯೋಗಿಸಲಾಗಿದೆ. ಮಾನವನು ಕಳೆದುಕೊಂಡ ಈ ಪರದೈಸನ್ನು ಪುನಃ ಪಡಕೊಳ್ಳಲಾಗುವುದು ಎಂದು ವಾಗ್ದಾನ ಮಾಡಲಾಗಿತ್ತು. ಹೆಚ್ಚು ಕಡಿಮೆ ಅನಿಶ್ಚಿತ ರೀತಿಯಲ್ಲಿ ಸಮಗ್ರ ಸೃಷ್ಟಿಯು ಸುವರ್ಣ ಕಾಲವನ್ನು ನಿರೀಕ್ಷಿಸುತ್ತಾ ಅದರ ಪ್ರಾರಂಭಕ್ಕಾಗಿ ಕಾದುಕೊಂಡಿದೆ. ನಮ್ಮ ಕರ್ತನ ಮರಣದ ಮುಖಾಂತರವಾಗಿ ಪರದೈಸಿನ ಪರಿಸ್ಥಿತಿಯು ಮಾನವರಿಗಾಗಿ ವಿಮೋಚಿಸಲಾಗಿದೆ ಎಂಬ ಆಲೋ ಚನೆಯನ್ನು ದೇವರ ವಾಕ್ಯಗಳು ನಮಗೆ ಉಂಟು ಮಾಡುತ್ತವೆ. ಇದರ ಪರಿಣಾಮವಾಗಿ ಕಳೆದುಕೊಂಡಿದ್ದ ಪರದೈಸನ್ನು ಪುನಃ ವಶಪಡಿಸಿಕೊಳ್ಳುವುದು ಆತನ ವೈಭವಯುತ ಪುನಃಸ್ಥಾಪನೆಯ ಭಾಗವಾಗಿದೆ. (ಮತ್ತಾಯ 18:11, ಎಫೆಸ 1:14, ಪ್ರಕ. 2:7)

ಆದರೆ, ಮೇಲೆ ಹೇಳಿದಂತೆ ಅಲ್ಪವಿರಾಮವನ್ನು (,) ಬದಲಾಯಿಸುವ ಹಕ್ಕು ನಮಗೆ ಇದೆಯೋ? ಖಂಡಿತವಾಗಿಯೂ ಇದೆ. ಯಾಕೆಂದರೆ ಸತ್ಯವೇದದಲ್ಲಿನ ಚಿಹ್ನೆ ಹಾಕುವಿಕೆಗಳು ದೈವಪ್ರೇರಿತವಾದವುಗಳಲ್ಲ. ಸತ್ಯವೇದದ ಬರಹಗಾರರು ಯಾವುದೇ ಚಿಹ್ನೆಗಳನ್ನು ಉಪಯೋಗಿಸಲಿಲ್ಲ. ಯಾಕೆಂದರೆ ಅವುಗಳನ್ನು ಕೇವಲ ನಾಲ್ಕು ನೂರ ವರ್ಷಗಳ ಹಿಂದೆಯಷ್ಟೇ ಕಂಡು ಹಿಡಿಯಲಾಯಿತು. ಇದೊಂದು ಆಧುನಿಕ ಕಾಲದ ಅನುಕೂಲತೆ ಮಾತ್ರವೇ ಆಗಿದ್ದು ಇದನ್ನು ದೇವರ ವಾಕ್ಯದ ಇತರ ಭಾಗಗಳೊಂದಿಗೆ ಸಾಮರಸ್ಯ ಹೊಂದುವಂತೆ ಅರ್ಥ ನೀಡುವ ರೀತಿಯಲ್ಲಿ ಉಪಯೋಗಿಸಬೇಕಾಗುತ್ತದೆ.

"ಈದಿನ" ಎಂಬ ಪದವನ್ನು ಆಧುನಿಕ ಸಾಹಿತ್ಯದಲ್ಲಿ ಉಪಯೋಗಿಸಿರುವ ಇದೇ ರೀತಿಯ ನಿದರ್ಶನಗಳು ಮೇಲಿಂದ ಮೇಲೆ ಕಂಡುಬರುತ್ತವೆ. ಈ ಕೆಳಗಿನ ದೇವರ ವಾಕ್ಯಗಳತ್ತ ನಿಮ್ಮ ಗಮನವನ್ನು ಸೆಳೆಯಲಾಗಿದೆ :–

"ಇದಕ್ಕೋಸ್ಕರವಾಗಿಯೇ ನಾನು ಈ ಆಜ್ಞೆಯನ್ನು ನಿಮಗೆ ಈಗ (ಈ ದಿನ) ಕೊಟ್ಟಿದ್ದೇನೆ " (ಧರ್ಮೋ. 15:15)

"ನಾನು ಜೀವಶುಭಗಳನ್ನೂ ಮರಣಾಶುಭಗಳನ್ನು ಈಗ (ಈ ದಿನ) ನಿಮ್ಮ ಮುಂದೆ ಇಟ್ಟಿದ್ದೇನೆ" (ಧರ್ಮೋ. 30:15)

"ನಾನು ಈಗ (ಈ ದಿನ) ನಿಮಗೆ ಬೋಧಿಸುವ ಪ್ರಕಾರ ನೀವು ನಿಮ್ಮ ದೇವರಾದ ಕರ್ತನನ್ನು ಪ್ರೀತಿಸಿ ಆತನು ಹೇಳಿದ ಮಾರ್ಗದಲ್ಲಿ ನಡೆಯಬೇಕು (ಧರ್ಮೋ.30:16)

"ನೀನು ಮಾತ್ರವಲ್ಲದೆ ಈ ಹೊತ್ತು (ಈ ದಿನ) ನನ್ನ ಮಾತುಗಳನ್ನು ಕೇಳುವವರೆಲ್ಲರೂ ಈ ಬೇಡಿಗಳ ಹೊರತು ನನ್ನಂತೆ ಆಗಬೇಕು" (ಅ.ಕೃ 26:29).

ಈ ವಾಕ್ಯಭಾಗದ ಅರ್ಥವು ಸೂಚಿಸಿದ ಚಿಹ್ನೆಗಳನ್ನು ಸಲಹೆಮಾಡುತ್ತದಲ್ಲದೆ ಉಳಿದೆಲ್ಲಾ ದೇವರ ವಾಕ್ಯಭಾಗಗಳೊಂದಿಗೆ ಅದರ ಸಾಮರಸ್ಯವು ನಿರ್ಬಂಧಿಸುವುದನ್ನು ಕೇಳುತ್ತದೆ. ಇದಕ್ಕೆ ಯಾವುದೇ ಸಮಂಜಸವಾದ ಆಧಾರವುಳ್ಳ ವಿರೋಧ ಇರಲಾರದು. ನಮ್ಮ ಕರ್ತನು ಮರಣಿಸಿದ ಕೂಡಲೇ ಪರದೈಸಿಗೆ ಹೋದನು ಎಂದು ಸಲಹೆಮಾಡುವುದು ಸಾಧ್ಯವಾಗದ ಮಾತು. ಯಾಕೆಂದರೆ ಈ ಪರದೈಸು ಇನ್ನೂ ಪುನಃ ಸ್ಥಾಪಿತವಾಗಿರುವುದಿಲ್ಲ. ಇದಕ್ಕೂ ಹೆಚ್ಚಾಗಿ, ನಮ್ಮ ಕರ್ತನ ದೇಹವನ್ನು ಅರಿಮಥಾಯದ ಯೋಸೇಫನ ಸಮಾಧಿಯಲ್ಲಿ ಹೂಣಿಡಲಾಯಿತು ಎಂದು ನಿರ್ದಿಷ್ಟವಾಗಿ ತಿಳಿಸಲಾಗಿದೆ. ಆತನ ಆತ್ಮವು ಅಥವಾ ಅಸ್ತಿತ್ವವು ಶಿಯೋಲಿಗೆ, ಹೇಡ್ಸ್‌ಗೆ (ಮರೆಯಲ್ಪಡುವ ಸ್ಥಿತಿ oblivion), ವಿಸ್ಮೃತಿಗೆ ಹೋಯಿತೆಂದು ಹೇಳಲಾಗಿದೆ. ಆತನು ಮರಣಿಸಿದ್ದಾನೆ. ಈ ಮಧ್ಯಂತರ ಕಾಲದಲ್ಲಿ ಆತನು ಪರದೈಸಿನಲ್ಲಿಯಾಗಲೀ, ಬೇರೆಲ್ಲಿಯಾಗಲೀ ಜೀವಂತನಾಗಿಲ್ಲ. ದೇವರ ಪರಿಶುದ್ಧ ಗ್ರಂಥವು ನಮ್ಮ ಕರ್ತನು ಪುನರುತ್ಥಾನದಲ್ಲಿ ಪರದೈಸಿನಿಂದಾಗಲೀ, ಪರಲೋಕದಿಂದಾಗಲೀ ಇಳಿದು ಬಂದನೆಂದು ಹೇಳುವುದಿಲ್ಲ ಆದರೆ ಆತನು "ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ (ಸತ್ತವರೊಳಗಿಂದ) ಎದ್ದುಬಂದಿರುತ್ತಾನೆ "(1 ಕೊರಿಂಥ 15:4) ಎಂದು ಹೇಳುತ್ತದೆ. ಪುನರುತ್ಥಾನಗೊಂಡ ಮೇಲೆ ನಮ್ಮ ಕರ್ತನು ತಾನೇ ಹೇಳಿದಂತೆ "ಕ್ರಿಸ್ತನು ಶ್ರಮೆಪಟ್ಟು ಸತ್ತು ಮೂರನೆಯ ದಿನದಲ್ಲಿ ಎದ್ದು ಬಂದನು" (ಲೂಕ 24:46). ಆತನು ಮರಿಯಳಿಗೆ "ನಾನು ಇನ್ನೂ ನನ್ನ ತಂದೆಯ ಬಳಿಗೆ ಏರಿ ಹೋದವನಲ್ಲ. ನೀನು ನನ್ನ ಸಹೋದರರ ಬಳಿಗೆ ಹೋಗಿ – ನಾನೂ ನನ್ನ ತಂದೆಯೂ ನಿಮ್ಮ ತಂದೆಯೂ ನನ್ನ ದೇವರೂ ನಿಮ್ಮ ದೇವರೂ ಆಗಿರುವಾತನ ಬಳಿಗೆ ಏರಿಹೋಗುತ್ತೇನೆ ಎಂದು ಅವರಿಗೆ ಹೇಳು" (ಯೋಹಾನ 20:17) ಎನ್ನುತ್ತಾನೆ.

## ಸಂತ ಪೌಲನ ಶ್ರದ್ಧಾಪೂರ್ವಕ ಅಭಿಲಾಷೆ
### St. Paul's Earnest Desire

"ನನಗಂತೂ ಬದುಕುವುದೆಂದರೆ ಕ್ರಿಸ್ತನೇ, ಸಾಯುವುದು ಲಾಭವೇ. ಶರೀರದಲ್ಲೇ ಬದುಕಬೇಕಾದಲ್ಲಿ ಕೆಲಸಮಾಡಿ ಫಲಹೊಂದಲು ನನಗೆ ಅನುಕೂಲವಾಗುವುದು. ಹೀಗಿರಲಾಗಿ ನಾನು ಯಾವುದನ್ನು ಆರಿಸಿಕೊಳ್ಳಬೇಕೋ ನನಗೆ ತೋರದು. ಈ ಎರಡರ ನಡುವೆ ಸಿಕ್ಕಿ ಹಾಕಿಕೊಂಡಿದ್ದೇನೆ. ಇಲ್ಲಿಂದ ಹೋಗಿಬಿಟ್ಟು ಕ್ರಿಸ್ತನ ಜೊತೆಯಲ್ಲಿರಬೇಕೆಂಬುದೇ ನನ್ನ ಅಭಿಲಾಷೆ. ಅದು ಉತ್ತಮೋತ್ತಮ. ಆದರೆ ನಾನಿನ್ನೂ ಶರೀರದಲ್ಲಿ ವಾಸ ಮಾಡಿಕೊಂಡಿರುವುದೇ ನಿಮಗೋಸ್ಕರ ಬಹು ಅವಶ್ಯವಾದದ್ದು". (ಫಿಲಿಪ್ಪಿ 1:21–24)

Diaglott translation ನಲ್ಲಿನ ಇಂಗ್ಲಿಷ್ ಭಾಷೆಯಲ್ಲಿರುವ ಮೇಲಿನ ಮಾತುಗಳಿಗೂ, ಸಾಮಾನ್ಯ ಇಂಗ್ಲಿಷ್ ಭಾಷಾಂತರಕ್ಕೂ ಇರುವ ವ್ಯತ್ಯಾಸವೆಂದರೆ 'depart' ಎಂಬ ಪದದ ಬದಲಾಗಿ 'return' ಎಂಬ ಪದವನ್ನು ಬಳಸಿರುವುದು. ಈ ಬದಲಾವಣೆಯ ಬಗ್ಗೆ ಭಾಷಾಂತರಕಾರರು ನೀಡಿರುವ ಟಿಪ್ಪಣಿ ಏನೆಂದರೆ :–

ಜೀವನ ಅಥವಾ ಮರಣ ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳುವುದು ಉದಾಸೀನತೆಯ ವಿಷಯ ಎಂದು ಆತನಿಗೆ ಕಂಡುಬಂದದ್ದರಿಂದ "To analusai", "loosing again" ಅಥವಾ returning ಇವುಗಳನ್ನೇ ಪೌಲನು ಶ್ರದ್ಧಾಪೂರ್ವಕವಾಗಿ ಬಯಸಿದ್ದು, ಅದು ಸಾಮಾನ್ಯ ಭಾಷಾಂತರದಲ್ಲಿರುವ "depart' ಎಂಬ ಪದವು ಅರ್ಥನೀಡುವಂತೆ ಮರಣ ಅಥವಾ ಅಳಿವು ಅಲ್ಲ. ಆತನು analusai ಗಾಗಿ ಹಂಬಲಿಸಿದನು. ಇದು ಮೂರನೆಯ ವಿಷಯವಾಗಿದ್ದು ಪ್ರಸ್ತಾಪಿಸಿದ ಉಳಿದೆರಡು ವಿಷಯಗಳಿಗಿಂತ ಹೆಚ್ಚು ಇಷ್ಟಪಡುವಂತಾದಾಗಿತ್ತು. Analusai ಎಂಬ ಪದವು

ಲೂಕ 12:36 ಕ್ಕೆ ಸೇರಿದ್ದು ಇದನ್ನು ಹಿಂತಿರುಗಿ ಬರುವುದು (return) ಎಂದು ಅನುವಾದಿಸಲಾಗಿದೆ. – "ನೀವಂತೂ ತಮ್ಮ ಯಜಮಾನನು ಬಂದು ತಟ್ಟಿದ ಕೂಡಲೇ... ಯಾವಾಗ ತೀರಿಸಿಕೊಂಡು ಬರುವನೋ ಎಂದು ಅವನನ್ನು... ಮುಂತಾಗಿ. ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ತಾನು ಹಿಂತಿರುಗಿ ಬರುವ ಬಗ್ಗೆ ಬೋಧಿಸಿದ್ದನು (ಯೋಹಾನ 14:3, 18) ಇದೇ ರೀತಿಯಲ್ಲಿ ದೇವದೂತರುಗಳು ಸಹಾ ಅವರಿಗೆ "ಈ ಯೇಸು ಯಾವರೀತಿಯಲ್ಲಿ ಆಕಾಶದೊಳಕ್ಕೆ ಹೋಗಿರುವುದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ (ಹಿಂದಿರುಗಿ) ಬರುವನು" (ಅ.ಕೃ.1:11) ಎಂದು ಹೇಳಿದ್ದರು. ಪೌಲನು ಈ ಸಿದ್ಧಾಂತವನ್ನು ನಂಬಿದ್ದು ಅದನ್ನೇ ಇತರರಿಗೂ ಬೋಧಿಸುವವನಾಗಿದ್ದು ಪರಲೋಕದಿಂದ ಕರ್ತನ ಹಿಂದಿರುಗುವಿಕೆ (Analusai) ಗಾಗಿ ಎದುರುನೋಡುತ್ತಾ ಕಾಯುತ್ತಿದ್ದನು. – "ಕರ್ತನಾದ ಯೇಸು ಕ್ರಿಸ್ತನು ಅಲ್ಲಿಂದಲೇ ರಕ್ಷಕನಾಗಿ ಬರುವುದನ್ನು ಎದುರುನೋಡುತ್ತಾ ಇದ್ದೇವೆ " (ಫಿಲಿಪ್ಪಿ 3:20, 1 ಥೆಸ. 1:10, 4:16.17), ಆಗಲಾತನು ಸದಾ ಕರ್ತನೊಂದಿಗೆ ಇರಬಹುದಾಗಿದೆ.

Analusai ಎಂಬ ಈ ಗ್ರೀಕ್ ಪದವನ್ನು ಪರೀಕ್ಷಿಸುವಾಗ, ಇದನ್ನು ಪ್ಲೇಟೋ ಎಂಬ ಮಹಾನ್ ಖಗೋಳ ಶಾಸ್ತ್ರಿಯು ಎರಡು ವಿಧವಾಗಿ ಅಂದರೆ ಒಮ್ಮೆ ಯಾವುದಾದರೂ ಒಂದರ depart ನ್ನು ಸೂಚಿಸುವುದಕ್ಕೂ ಮತ್ತೊಮ್ಮೆ return ಅಥವಾ ಹಿಂತಿರುಗುವಿಕೆಯನ್ನು ಸೂಚಿಸುವುದಕ್ಕೂ ಉಪಯೋಗಿಸುತ್ತಿದ್ದನು. ಈ ಪದವು ನೂತನ ಒಡಂಬಡಿಕೆಯಲ್ಲಿ ಎರಡು ಕಡೆಗಳಲ್ಲಿ ಅಂದರೆ ಇಲ್ಲಿ ಮತ್ತು ಲೂಕ 12:36ರಲ್ಲಿ ಬರುತ್ತದೆ. ಎರಡನೆಯ ಸಂಧರ್ಭದಲ್ಲಿ ಇದನ್ನು return ಎಂಬುದಾಗಿ ಭಾಷಾಂತರಿಸ ಲಾಗಿದೆ. ಸ್ಪಷ್ಟವಾಗಿ ಇಲ್ಲಿ ಬೇರೆ ರೀತಿಯಲ್ಲಿ ಭಾಷಾಂತರಿಸಿ ಅರ್ಥವನ್ನು ಕಾಪಾಡಿಕೊಳ್ಳಲು ಸಾಧ್ಯವಿದ್ದಿಲ್ಲ. ನಾವು ಚರ್ಚಿಸುತ್ತಿರುವ ಫಿಲಿಪ್ಪಿ 1:23ರ ಸಂಧರ್ಭದಲ್ಲಿ ಇದನ್ನು return ಎಂಬುದಾಗಿ ಭಾಷಾಂತರಿಸುವುದನ್ನು ನಾವು ಎತ್ತಿಹಿಡಿಯುತ್ತೇವೆ. ಇದಕ್ಕೆ ಸರಳವಾದ ಕಾರಣವೇನೆಂದರೆ, depart ಎಂಬುದನ್ನು ಸೂಚಿಸುವಾಗಲೂ ಇದು ಮತ್ತೊಮ್ಮೆ ಹೊರಡುವ ಅಂದರೆ ಒಬ್ಬರು ಈ ಹಿಂದೆ ಇದ್ದ ಸ್ಥಳಕ್ಕೆ ನಿರ್ಗಮಿಸುವುದು ಆಗಿದೆ.. Analusai ಎಂಬ ಗ್ರೀಕ್ ಪದದಲ್ಲಿ Ana ಎಂಬ ಮೊದಲಿನ ಪದವು return ಎಂಬ ಆಂಗ್ಲ ಪದದಲ್ಲಿನ re ಎಂಬ ಪದಕ್ಕನುಸಾರವಾಗಿ 'ಪುನಃ' (again) ಅರ್ಥ ಸೂಚಿಸುತ್ತದೆ. ಆದುದರಿಂದ depart ಎಂಬುದಾಗಿ ಭಾಷಾಂತರಿಸಿದರೆ ನಾವು re depart ಅಥವಾ depart again ಎಂಬ ಅರ್ಥವುಂಟಾಗುತ್ತದೆ. ಇದು ಸಂತ ಪೌಲನ ವಿಷಯವನ್ನು ಹಾಳುಗೆಡಹುತ್ತದೆ. ಯಾಕೆಂದರೆ ಆತನು ಎಂದೂ ಕ್ರಿಸ್ತನ ಮಹಿಮಾ ಸಮಯದಲ್ಲಿ ಆತನೊಂದಿಗೆ ಇದ್ದಿಲ್ಲ. ಆದುದರಿಂದ ಕ್ರಿಸ್ತನೊಂದಿಗಿರಲು ಪುನಃ ನಿರ್ಗಮಿಸುವುದು (depart again) ಸಾಧ್ಯವಿಲ್ಲ. ಅದರೆ ನಾವು Analusai ಎಂಬ ಪದವನ್ನು ಕರ್ತನಿಗೆ ಅನ್ವಯಿಸುವಂತೆ "re-turning" ಎಂಬುದಾಗಿ ಅನುವಾದಿಸಿದರೆ ಎಲ್ಲಾ ತೊಂದರೆಗಳೂ ನಿವಾರಣೆ ಯಾಗುವಂತೆ ಕಂಡುಬರುತ್ತದೆ.

ಈ ಹೇಳಿಕೆಗೆ ಕಾರಣವಾದ ಸಂಧರ್ಭಗಳನ್ನು ನಾವು ಗಮನಿಸೋಣ. ಅಪೋಸ್ತಲನು ಕೆಲವು ಸಮಯದವರೆಗೆ ರೋಮಿನಲ್ಲಿ ಬಂಧಿಯಾಗಿದ್ದನು. ಕೆಲವೊಂದು ಅರಸರುಗಳು ಆತನನ್ನು ಒಳ್ಳೆಯದಾಗಿ ನೋಡಿಕೊಂಡರೂ ಕೆಲವೊಂದು ಚಂಚಲಚಿತ್ತರ ಕಾರಣ ನಿರಂತರವಾಗಿ ಮರಣ ಶಿಕ್ಷೆಯ ಅಪಾಯದಲ್ಲಿರುತ್ತಿದ್ದನು. ಆತನು ಈ ಪತ್ರಿಕೆಯನ್ನು ಫಿಲಿಪ್ಪಿಯವರು ಆತನಿಗೆ ಕಳುಹಿಸಿದ್ದ ಗಣನೀಯವಾದ ಕಾಣಿಕೆಯ ಸ್ವೀಕೃತಿಯಾಗಿ ಬರೆದನು ಮತ್ತು ಇದರಲ್ಲಿ ಆತನು ತನ್ನ ಸ್ವಂತ ಪರಿಸ್ಥಿತಿಯನ್ನು, ಕರ್ತನ ಕಾರ್ಯದ ಪ್ರಗತಿ ಮುಂತಾದವುಗಳನ್ನು ಅವರಿಗೆ ವಿವರಿಸುವ ಮತ್ತು ಅವರುಗಳು ಕಡೆಯವರೆಗೆ ದೃಢವಾಗಿರುವಂತೆ ಅವರನ್ನು ಅಭಿವೃದ್ಧಿಪಡಿಸುವ ಅವಕಾಶಗಳನ್ನು ಉಪಯೋಗಿಸಿ ಕೊಳ್ಳುತ್ತಿದ್ದಾನೆ.

ಅವರು ಆತನ ಬಿಡುಗಡೆಯ ಪ್ರತೀಕ್ಷೆಯನ್ನು ತಿಳುಕೊಳ್ಳಬೇಕೆಂದಿರುವಾಗ ಆತನು ಅವರಿಗೆ ಶತ್ರುಗಳು ಆತನ ಎರಡು ವರ್ಷಗಳ ಸ್ವಾತಂತ್ರ್ಯವನ್ನು ಕಂಡು (ಅ.ಕೃ. 28:30) ಕ್ರೈಸ್ತತ್ವವನ್ನು ವಿವರಿಸುತ್ತಿದ್ದಾರೆ ಮತ್ತು ಬಹುಶಃ ಈ ಮೂಲಕ ಆತನ ಬಂಧನಗಳಿಗೆ ವೇದನೆಯನ್ನೂ ಮರಣವನ್ನೂ ಉಂಟು ಮಾಡುವವರಾಗಿದ್ದಾರೆ ಎಂದು ಹೇಳುತ್ತಾನೆ (ಫಿಲಿಪ್ಪಿ 1:16–19). ಆದರೆ ಆತನ ಪರವಾಗಿರುವ ಸಭೆಯ ಪ್ರಾರ್ಥನೆಗಳನ್ನು ಗ್ರಹಿಸಿಕೊಂಡು, ನೀರೋ (Nero) ಚಕ್ರವರ್ತಿಯ ಮುಂದೆ ನಡೆಯುವ ವಿಚಾರಣೆಯಿಂದಾಗಿ ಬಿಡುಗಡೆ ಅಥವಾ ಮರಣದ ಮೂಲಕ ತನಗೆ ವಿಮೋಚನೆ ದೊರೆಯಬಹುದೆಂದು ನಿರೀಕ್ಷಿಸುತ್ತಾನೆ. ನಂತರದಲ್ಲಿ ಆತನು ತನ್ನ ಸ್ವಂತ ಇಚ್ಛಾನುಸಾರವಾಗಿ ಜೀವ (ಶ್ರಮೆಯೊಂದಿಗೆ) ಅಥವಾ ಮರಣವನ್ನು (ಶ್ರಮೆಯಿಂದ ವಿಶ್ರಾಂತಿ) ಆಯ್ಕೆ ಮಾಡಿಕೊಳ್ಳುವುದು ಕಷ್ಟವಾಗುತ್ತದೆ ಎಂದು ಹೇಳುತ್ತಾನೆ. ಸಾಧ್ಯವಾಗುವ ಇವೆರಡರಲ್ಲಿ ಆತನಿಗೆ ಯಾವ ಆಯ್ಕೆಯೂ ಇದ್ದಿಲ್ಲ, ಆದರೆ ಆತನಿಗೆ ಒಂದು ಹಂಬಲವಿತ್ತು, ತೀವ್ರತರ ಬಯಕೆ ಇತ್ತು. ಆದರೆ ಇದು ಅಸಾಧ್ಯವೆಂದೂ ಆತನಿಗೆ ಚೆನ್ನಾಗಿ ತಿಳಿದಿತ್ತು. ಆತನಿಗೆ ತಿಳಿದಿದ್ದ ಮತ್ತು ಆತನು ಸಭೆಗೆ ಕಲಿಸಿಕೊಟ್ಟಿದ್ದ ಸಂಗತಿಗಳು (2ಥೆಸ. 2:1–8) ನೆರವೇರಲು ಬಹಳ ಸಮಯ ಹಿಡಿಯುವುದೆಂದು ಆತನು ತಿಳಿದಿದ್ದನು. – ಕ್ರಿಸ್ತನ ಹಿಂದಿರುಗಿವಿಕೆ ಮತ್ತು ಆತನೊಂದಿಗೆ ಇರುವುದು. ನಂತರ ಅಸಾಧ್ಯವಾದವುಗಳನ್ನು ಬಿಟ್ಟು ಸಾಧ್ಯವಾದವುಗಳ ಕಡೆಗೆ ಬರುವಾಗ, ಆತನು ದೇವರಲ್ಲಿ ತಾನು ಸಭೆಗೆ ಮಾಡಬೇಕಾದ ಒಂದು ಕೆಲಸವಿದೆ, ಈ ಕಾರಣ ತನಗೆ ಬಿಡುಗಡೆ ಆಗಲಿದೆ ಎಂಬ ನಿಶ್ಚಿತಾಭಿಪ್ರಾಯವನ್ನು ಹೊಂದಿದ್ದನು. ದೇವರ ವಾಕ್ಯದಲ್ಲಿ ಈ ಬಗ್ಗೆ ಯಾವುದೇ ಪ್ರಸ್ತಾಪ ಇಲ್ಲವಾದರೂ ಆತನು ನೀರೋ ಚಕ್ರವರ್ತಿಯಿಂದ ಬಿಡುಗಡೆ ಹೊಂದಿದನು ಮತ್ತು ಪುನಃ ಬಂಧಿತನಾಗಿ ಮರಣ ಶಿಕ್ಷೆ ಅನುಭವಿಸುವ ವರೆಗೆ ಐದು ವರ್ಷಗಳ ಕಾಲ ಮುಕ್ತನಾಗಿದ್ದನು ಎಂದು ಸಂಪ್ರದಾಯವು ಸಾರಿ ತಿಳಿಸುತ್ತದೆ.

Depart ಎಂಬ ಪದದ ಅರ್ಥವನ್ನು ವಿಶದವಾಗಿರುವ ಪೌಲನಾಗಲೀ, ಲೂಕನಾಗಲೀ ತಮ್ಮ ಬರಹಗಳಲ್ಲಿ ಇತರ ಪದಗಳನ್ನು ಉಪಯೋಗಿಸಿರುವುದು ಇಲ್ಲಿ ಗಮನಾರ್ಹ.

ಲೂಕನು ಅಪೋಸ್ತಲನು ಹೇಳಿದ್ದನ್ನು ಬರಕೊಳ್ಳುವ ಉಕ್ತಲೇಖಕನಾಗಿದ್ದನು ಆತನೊಂದಿಗೆ ಪ್ರಯಾಣ ಮಾಡುವವನಾಗಿದ್ದನು ಮತ್ತು ಆತನು ಅರ್ಥಮಾಡುವ ರೀತಿಯಲ್ಲೇ ಪದಗಳನ್ನು ಬಳಸುತ್ತಿದ್ದನು ಎಂಬುದನ್ನು ನಾವಿಲ್ಲಿ ನೆನಪು ಮಾಡಿಕೊಳ್ಳಬೇಕು. ಆದರೆ, ಯಾರಾದರೂ ಇನ್ನೂ Return ಎಂಬ ಪದಕ್ಕೆ ಬದಲಾಗಿ Depart ಎಂಬುದೇ ಸರಿಯೆಂದು ವಾದ ಮಾಡುವುದಾದರೆ ನಾವು ಅವರಿಗೆ ಈ ರೀತಿಯಾಗಿ ಹೇಳುವವರಾಗಿದ್ದೇವೆ: ಪೌಲನು ತಾನು ಪರಲೋಕಕ್ಕೆ ಅಥವಾ ಬೇರೆಡೆಗೆ ನಿರ್ಗಮಿಸಿ ಕೂಡಲೇ ಕರ್ತನ ಸಂಗಡ ಇರುವಂತೆ ಕರ್ತನ ಎರಡನೆಯ ಬರೋಣವು ಸಧ್ಯದಲ್ಲಿಯೇ ನೆರವೇರಲಿಕ್ಕಿಲ್ಲ ಎಂದು ತನ್ನ ಜ್ಞಾನದಿಂದ ತಿಳಿದಿದ್ದನು ಎಂಬುದು ನಿಸ್ಸಂದೇಹ. ಅಂಥಹ ಬಯಕೆಯು ದೇವರ ಯೋಜನೆಗೆ ಸಾಮರಸ್ಯವಾಗಿರುವುದಿಲ್ಲವೆಂತಲೂ ಆತನು ತಿಳಿದಿದ್ದನು. ಆದುದರಿಂದ, ಅದು ತನ್ನ ಶ್ರದ್ಧಾಪೂರ್ವಕ ಬಯಕೆಯಾಗಿದ್ದರೂ ಅದು ಸಾಧ್ಯವಾಗಬಹುದಾದ ಒಂದು ಸಂಗತಿಯಾಗಿ ಪರಿಗಣಿಸಲ್ಪಡಲಿಲ್ಲ. ಆತನು ಇನ್ನೂ ಸಹಾ ಜೀವಿಸಿ ಶ್ರಮೆಯೊಡನೆ ಸಭೆಯ ಸೇವೆ ಮಾಡುವುದು ಅಥವಾ ತನ್ನ ಕಠಿಣ ಕೆಲಸಗಳಿಂದ ಮುಕ್ತಿಹೊಂದುವಂತೆ ಮರಣವನ್ನಪ್ಪುವುದು ಈ ಎರಡು ಸಾಧ್ಯವಾಗುವ ಸಂಗತಿಗಳ ಬಗ್ಗೆ ನೇರವಾಗಿ ತೀರ್ಪು ಮಾಡದೆ ಬಿಡಲ್ಪಟ್ಟಿದ್ದಾನೆ. –"ಮಹಾ ದೇವರ (ನಮ್ಮ ರಕ್ಷಕನಾದ ಯೇಸು ಕ್ರಿಸ್ತನ) ಪ್ರಭಾವದ ಪ್ರತ್ಯಕ್ಷ್ಯತೆಯನ್ನು ಎದುರು ನೋಡುವವನಾಗಿ" (ತೀತ 2:13) "ದೀನಾವಸ್ಥೆಯುಳ್ಳ ನಮ್ಮ ದೇಹವನ್ನು ರೂಪಾಂತರಪಡಿಸಿ ಪ್ರಭಾವವುಳ್ಳ ತನ್ನ ದೇಹದ ಸಾರೂಪ್ಯವಾಗುವಂತೆ"(ಫಿಲಿ.:3:21) ಮಾಡುವುದನ್ನು ನೋಡಲು ಕಾಯುತ್ತಿರುತ್ತಾನೆ.

## "ಭೂಮಿಯ ಮೇಲಿರುವ ನಮ್ಮ ಮನೆ" ಮತ್ತು "ಪರಲೋಕದಿಂದ ದೊರಕುವ ನಮ್ಮ ನಿವಾಸ

**(2 ಕೊರಿ. 5: 1–10)**

## "Our Earthly House" and "Our House from Heaven"

**(2 Cori. 5:1-10)**

ಅಪೋಸ್ತಲನು ಸ್ವಾಭಾವಿಕ ಮನುಷ್ಯರನ್ನು ಒಳಗೊಳ್ಳದೆ ನೂತನ ಸೃಷ್ಟಿಯವರಿಗೆ ಅವರ ಪರಿಸ್ಥಿತಿಯ ಬಗ್ಗೆ ಬರೆಯುವವನಾಗಿದ್ದಾನೆ. ಆತನು ನೂತನ ಮನಸ್ಸನ್ನು ನೂತನ ಸೃಷ್ಟಿಯನ್ನಾಗಿಯೂ, ಪುರಾತನವಾದ ದೇಹವನ್ನು ಗುಡಾರವನ್ನಾಗಿಯೂ ಗ್ರಹಿಸುತ್ತಾನೆ. ಇವು ಸಾಕಷ್ಟು ಅತೃಪ್ತಿಕರವಾದಾಗ್ಯೂ ಏನೂ ಇಲ್ಲದವುಗಳಿಗಿಂತಲೂ ಉತ್ತಮವಾದುದಾಗಿದೆ. ನೂತನ ಸೃಷ್ಟಿಯು ಅದರಲ್ಲಿ ಮನೆಯಲ್ಲಿದ್ದಂತೆ ಸಮರ್ಪಕತೆಯನ್ನು ಅನುಭವಿಸುವುದಿಲ್ಲ. ಆದರೆ ಸಮರ್ಪಕವಾದ ದೇಹವು ಪುನರುತ್ಥಾನದಲ್ಲಿ ಅವರದಾಗುವಂತೆ ಪ್ರಾಮಾಣಿಕವಾಗಿ ಹಂಬಲಿಸುತ್ತಾರೆ – ಅದು ಅವರ ಶಾಶ್ವತವಾದ ಮನೆ. ಅಥವಾ ನೂತನ ಸೃಷ್ಟಿಗಾಗಿ ದೇವರು ಸಿದ್ಧಪಡಿಸುತ್ತೇನೆಂದು ಹೇಳಿದ ಬಿಡಾರಕ್ಕಾಗಿ (ಯೋಹಾನ 14:2). "ನಾವೀಗ ತಾತ್ಕಾಲಿಕವಾಗಿ ವಾಸಮಾಡುವ ಮನೆಯನ್ನು ವಿಸರ್ಜಿಸಿದರೆ, ನಮಗೆ ದೇವರ ಶಾಶ್ವತವಾದ ಕಟ್ಟಡವಿದೆ ಎಂದು ನಮಗೆ ತಿಳಿದಿದೆ. ಈ ಮನೆಯು ಕೈಯಿಂದ ಕಟ್ಟಿದ್ದಲ್ಲ (ಮಾನವ ಶಕ್ತಿಯಿಂದ ನಿರ್ಮಿಸಿದ್ದಲ್ಲ) ಅದು ಪರಲೋಕದ್ದೂ, ನಿರಂತರವಾದುದೂ ಆಗಿದೆ"

ಪ್ರಸ್ತುತದಲ್ಲಿರುವ ಈ ತಾತ್ಕಾಲಿಕವಾದ ಪ್ರವಾಸದ ಮನೆಯಲ್ಲಿ ನಾವು ಒಂದೆಡೆ ಈ ಲೋಕದ ಕೆಟ್ಟ ಪ್ರಭಾವದಿಂದ ಮತ್ತೊಂದೆಡೆ ಪಿಶಾಚಿಯಿಂದ ಹಿಂಸಿಸಲ್ಪಟ್ಟವರಾಗಿ ಮಾತ್ರವಲ್ಲ, ನಮ್ಮ ಸ್ವಂತ ದೇಹದ ಬಲಹೀನತೆಗಳಿಂದಲೂ ನರಳುವವರಾಗಿದ್ದೇವೆ. ನಾವು ಒಳ್ಳೆಯದನ್ನು ಮಾಡುವಾಗಲೂ ನಮ್ಮೊಡನೆ ಕೆಟ್ಟದ್ದು ಇರುವುದರಿಂದ ನಮ್ಮ ಒಳ್ಳೆಯ ಕೆಲಸಗಳಿಗೆ ಅಡಚಣೆಯುಂಟಾಗುತ್ತವೆ ಮತ್ತು ನಾವು ಹಲವೊಮ್ಮೆ ಒಪ್ಪದ ಕೆಟ್ಟವುಗಳು ತಾನಾಗಿಯೇ ನಮ್ಮೊಳನುಗ್ಗುತ್ತವೆ. ಅವನ್ನು ನಿರಂತರವಾಗಿ ಪ್ರತಿಭಟಿಸಬೇಕಾಗುತ್ತದೆ ಮತ್ತು ಸೋಲಿಸಬೇಕಾಗುತ್ತದೆ. ಅಪೋಸ್ತಲನು ಒಂದೆಡೆ ಹೇಳಿರುವಂತೆ –"ಪ್ರಥಮ ಫಲವಾಗಿರುವ ಪವಿತ್ರಾತ್ಮ ವರವನ್ನು ಹೊಂದಿದ ನಾವಾದರೂ ದೇವಪುತ್ರರ ಪದವಿಯನ್ನು ಅಂದರೆ ದೇಹಕ್ಕೆ ಬರಬೇಕಾದ ವಿಮೋಚನೆಯನ್ನು ಎದುರು ನೋಡುತ್ತಾ ನಮ್ಮೊಳಗೆ ನರಳುತ್ತೇವೆ" (ರೋಮಾ.8:23) ಸಭೆಗೆ ಬರಬೇಕಾದ ಕರ್ತನ ಮಹಿಮೆಯೇ ಅದರ ವಿಮೋಚನೆಯಾಗಿದೆ.

ಆದರೆ, ನಮ್ಮ ನರಳುವಿಕೆಯು ನಾವು ದೇಹವನ್ನು ಬಿಡಬೇಕೆಂಬ ಬಯಕೆಯಿಂದಲ್ಲ. ನಮಗೆ ಸುವಾರ್ತಾ ಯುಗದಲ್ಲೆಲ್ಲಾ ಯಾವುದೇ ದೇಹವಿರಬಾರದೆಂದು ಬಯಸಿ ನಿದ್ರಿಸುವುದಲ್ಲ. ಪುನರುತ್ಥಾನ ದಿನ ಮುಂಜಾವಿನಲ್ಲಿ ಪರಲೋಕದಿಂದ ದೊರಕುವ ನಮ್ಮ ನಿವಾಸವನ್ನು ನಾವು ದೇಹದ ಮೇಲೆ ಧರಿಸಿಕೊಳ್ಳಲು ಕಾಯುವುದಾಗಿದೆ. ಇದುವೇ ನಮ್ಮ ನೂತನ, ಸರ್ವಸಂಪೂರ್ಣವಾದ ಶಾಶ್ವತ ದೇಹವಾಗಿದೆ, ಇದುವೇ ನಮ್ಮ ಮನೆ. ನಾವೀಗ ಆಯ್ಕೆ ಮಾಡಿಕೊಳ್ಳುವುದೇನೆಂದರೆ ಪ್ರಸ್ತುತ ಜೀವಿತದಲ್ಲಿ ಚಿಕ್ಕ ಕಿಡಿಯಾದರೂ ನಂದಿಹೋಗಬಾರದು. ಅವನ್ನು ನುಂಗಿಕೊಂಡು, ಪರಿಪೂರ್ಣವಾದ ಜೀವಿತದ ಪರಿಪೂರ್ಣವಾದ ಪರಿಸ್ಥಿತಿಗಳಿಗೆ ತಕ್ಕಂತೆ ಅದನ್ನು ಹೀರಿ ಕೊಳ್ಳಬೇಕು. ಅದಕ್ಕಾಗಿಯೇ ನಾವು ಪಡಕೊಂಡವರಾಗಿದ್ದೇವೆ. ನಾವು ಪುನರುತ್ಥಾನದ ಜನನವನ್ನು ಪರಿಪೂರ್ಣವಾದ ದೇಹದೊಂದಿಗೆ ಪಡಕೊಳ್ಳಲು ಹಂಬಲಿಸುತ್ತೇವೆ.

"ಈ ಸ್ಥಿತಿಗಾಗಿ ನಮ್ಮನ್ನು ಸಿದ್ಧಮಾಡಿರುವಾತನು ದೇವರೇ; ಆತನು ಪವಿತ್ರಾತ್ಮನನ್ನು ಸಂಚಕಾರವಾಗಿ ಅನುಗ್ರಹಿಸಿದ್ದಾನೆ" (2 ಕೊರಿ. 5:5). ನಾವು ಪುನರುತ್ಥಾನದಲ್ಲಿ ಹೊಂದಿಕೊಳ್ಳುವ ಈ ಪರಿಪೂರ್ಣವಾದ ಸ್ಥಿತಿಯು ದೇವರು ನಮಗೆ ವಾಗ್ದಾನ ಮಾಡಿರುವ ನಮ್ಮ ರಕ್ಷಣೆಯ ಭವ್ಯವಾದ ನೆರವೇರಿಕೆಯಾಗಿದೆ; ಮತ್ತು ನೂತನ ಮನಸ್ಸು, ನೂತನ ಚಿತ್ತ ಇವುಗಳು ಸತ್ಯವಚನದಿಂದ ಪಡಕೊಳ್ಳಲಾಗಿದ್ದು ಇದನ್ನು ನೂತನ ಸೃಷ್ಟಿಯ ಪ್ರಾರಂಭ ಎಂದು ಎಣಿಸಲಾಗುವುದು. ಇದು ಪ್ರಥಮ ಪುನರುತ್ಥಾನ ಸಂಭವಿಸುವಾಗ ದೈವಸ್ವಭಾವದಲ್ಲಿ ಪರಿಪೂರ್ಣಗೊಳಿಸಲಾಗುವುದು. ಪ್ರಸ್ತುತ ಕಾಲದಲ್ಲಿ ನಮಗೆ ದಯ ಪಾಲಿಸಿರುವ ಪವಿತ್ರಾತ್ಮನು ಪೂರ್ವಪಾವತಿಯಾಗಿದೆ, ಹೇಳಬೇಕೆಂದರೆ–ಒಂದು ಶ್ರದ್ಧಾ ಪೂರ್ವಕವಾದ ಅಥವಾ ನಾವು ನಿರೀಕ್ಷಿಸುತ್ತಿರುವ, ಪ್ರಯತ್ನಿಸುತ್ತಿರುವ, ನರಳುತ್ತಿರುವ ಮತ್ತು

ಪ್ರಾರ್ಥಿಸುತ್ತಿರುವ ಭವ್ಯವಾದ ಮತ್ತು ಕೃಪಾ ಪೂರ್ಣವಾದ ಫಲವಾಗಿದೆ.

"ನಾವು ಯಾವಾಗಲೂ ನಂಬಿಕೆಯುಳ್ಳವರಾಗಿದ್ದೇವೆ. ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತೇವಾದುದರಿಂದ ಈ ದೇಹದಲ್ಲಿ ಜೀವಿಸುವವರೆಗೂ (ನಾವು ಮತ್ತು ನಮ್ಮ ಸುತ್ತಮುತ್ತಲಿನ ಪ್ರಸ್ತುತ ಪರಿಸ್ಥಿತಿಯಲ್ಲಿ ಸಂಪೂರ್ಣವಾಗಿ ತೃಪ್ತರಾಗಿದ್ದೇವೆಂದು ಭಾವಿಸುವವರೆಗೂ)– ನಾವು ಕರ್ತನಿಗೆ ದೂರದಲ್ಲಿರುವ ಪ್ರವಾಸಿಗಳಾಗಿ ದ್ದೇವೆಂಬುದನ್ನು ಬಲ್ಲೆವು" (2 ಕೊರಿಂಥ 5:6). ನಾವು ಆತನ ಸನಿಹದಲ್ಲಿದ್ದು "ದೇವರೊಂದಿಗೆ ನಡೆಯುವವರಾಗಿದ್ದರೆ" ನಾವು ಪ್ರಸ್ತುತ ಹೊಂದುವ ಗುಣಧರ್ಮ ಮುಂತಾದವುಗಳ ಬಗ್ಗೆ ಸಂಪೂರ್ಣವಾದ ತೃಪ್ತಿಯನ್ನು ಅನುಭವಿಸುವುದಿಲ್ಲ. ಆದರೆ, ಪ್ರವಾಸಿಗಳಂತೆ, ಅಪರಿಚಿತರಂತೆ ಭಾವಿಸಿಕೊಳ್ಳುವವರಾಗಿದ್ದು ಉತ್ತಮವಾದ ವಿಶ್ರಾಂತಿಯನ್ನು, ಮೇಲಾದ ನಿವಾಸವನ್ನು ಬಯಸುತ್ತೇವೆ. ಇವುಗಳನ್ನು ದೇವರು ತನ್ನನ್ನು ಪ್ರೀತಿಸುವವರಿಗಾಗಿ ಕಾದಿರಿಸಿದ್ದಾನೆ. ಆದರೆ ಅಪೋಸ್ತಲನು ವಿವರಿಸುವಂತೆ ಇದು ನಂಬಿಕೆಯಲ್ಲಿ ನಡೆಯುವವರಿಗೆ ಮಾತ್ರವೇ ನಿಜವಾಗಿರುತ್ತದೆ ಹೊರತು ನೋಡುವವರಾಗಿ ನಡೆಯುವವರಿಗಲ್ಲ.

ಆದರೆ, ನಮಗೆ ಭರವಸೆಯುಂಟು (ದೇವರಲ್ಲಿ ಪೂರ್ಣ ಭರವಸೆ ಇಟ್ಟವರಾಗಿ ನಾವು ವಿಶ್ವಾಸದಲ್ಲಿ ನಡೆಯಲು ಸಂತೋಷಿಸುತ್ತೇವೆ) ಮತ್ತು ನಮ್ಮ ನಿವಾಸದಿಂದಲೂ (ಪ್ರವಾಸಿಗಳಂತೆ, ಅಪರಿಚಿತರಂತೆ, ಮನೆಯಿಲ್ಲದವ ರಾಗಿರುವುದಕ್ಕಿಂತಲೂ) ಹೆಚ್ಚಾಗಿ ಕರ್ತನೊಂದಿಗೆ ಮನೆಯಲ್ಲಿರಲು ನಮ್ಮ ಸಾಂಗತ್ಯದ ಹುಮ್ಮನಿಸಿನಲ್ಲಿರಲು ಸಂತೋಷಿಸುತ್ತೇವೆ.

ಈ ಕಾರಣ ನಾವು ನಮ್ಮ ನಿವಾಸಕ್ಕೆ ಬೇಗ ಬೇಗನೇ ಹತ್ತಿರವಾಗುತ್ತಿದ್ದೇವೋ ಇಲ್ಲವೆ ಪ್ರಸ್ತುತದಲ್ಲಿ ನಾವು ನಿಜವಾಗಿಯೂ ಪ್ರವಾಸಿಗಳಂತೆ, ಅಪರಿಚಿತರಂತೆ ನಮ್ಮ ಮನೆಯಿಂದ ದೂರವಾಗಿದ್ದೇವೋ ಎಂದು ಹೆಣಗುತ್ತಿದ್ದೇವೆ ಮತ್ತು ನಾವು ಕರ್ತನಿಗೆ ಅಂಗೀಕಾರವಾಗುವಂತೆ, ಆತನ ಕೃಪೆ ಮತ್ತು ಆಶೀರ್ವಾದಗಳನ್ನು ಹೊಂದಿಕೊಳ್ಳಲು ಮತ್ತು ಆತನ ಸಾಂಗತ್ಯವನ್ನು ಮತ್ತು ಪ್ರಸನ್ನತೆಯನ್ನು ಗ್ರಹಿಸಿಕೊಳ್ಳಲು ಮತ್ತು ಅಂತ್ಯದಲ್ಲಿ ನಾವು ಆತನಿಂದ ಸ್ವೀಕರಿಸಲ್ಪಡುವುದಕ್ಕಾಗಿಯೂ ಶ್ರಮಿಸುತ್ತಿದ್ದೇವೆ.

"ಪ್ರತಿಯೊಬ್ಬನೂ ತನ್ನ ದೇಹದ ಮೂಲಕ ನಡೆಸಿದ ಒಳ್ಳೆಯದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಸರಿಯಾಗಿ ಪ್ರತಿಫಲವನ್ನು ಹೊಂದುವುದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು" (2 ಕೊರಿಂಥ 5:16). ಈ ಯಾತ್ರೆಯ ಕಾಲವೆಲ್ಲ ನಾವು ಕರ್ತನ ನ್ಯಾಯಾಸನದ ಮುಂದೆ ಕಟಕಟೆಯಲ್ಲಿ ನಿಲ್ಲುವವರಾಗಿದ್ದೇವೆ. ನಾವು ಆತನನ್ನು ಪ್ರೀತಿಸುತ್ತೇವೋ ಇಲ್ಲವೋ ಮತ್ತು ಈ ಸಂಗತಿಗಳು ನೈತಿಕತೆ ಮತ್ತು ಶಾಂತಿಯನ್ನುಂಟುಮಾಡುತ್ತವೆಯೋ, ಎಂಬುದಾಗಿ ಆತನು ನಮ್ಮನ್ನು ಪರೀಕ್ಷಿಸುತ್ತಾನೆ ಮತ್ತು ಹಾಗಾದಲ್ಲಿ ನೈತಿಕತೆಯ ಸಲುವಾಗಿ ನಾವು ಎಷ್ಟರ ಮಟ್ಟಿಗೆ ತ್ಯಾಗಮಾಡಲು ಸಿದ್ಧರಿದ್ದೇವೆಂಬುದನ್ನು ಆತನು ರುಜುವಾತುಪಡಿಸುತ್ತಾನೆ. ಆತನಿಗಾಗಿ, ಸತ್ಯದ ಸಲುವಾಗಿ ನಾವು ಮಾಡುವ ಸ್ವಯಂ ನಿರಾಕರಣೆ ಮತ್ತು ಸ್ವಾರ್ಥತ್ಯಾಗಗಳ ಅಳತೆಯಿಂದ ಆತನು ನಮ್ಮ ಪ್ರೀತಿಯನ್ನು ಅಳೆಯುತ್ತಾನೆ.

ಆದರೆ, ಈ ರೀತಿಯಾಗಿ ದೇಹವನ್ನು ಮನೆಯೆಂಬಂತೆ ಮಾತನಾಡುವುದು ಕ್ರಿಸ್ತನಲ್ಲಿ "ಸಂತರುಗಳು" ಮತ್ತು ನೂತನ ಸೃಷ್ಟಿಯವರ ಬಗ್ಗೆ ಮಾತ್ರವೇ ನಿಜವಾಗಿರುತ್ತದೆ. ಇತರ ಮಾನವ ಜಾತಿಯವರಿಗೆ ಈ ರೀತಿಯಲ್ಲಿ ಸ್ವಭಾವದಲ್ಲಿನ ಇಬ್ಬಗೆತನವಿರದು ಮತ್ತು ಇಂತಹ ಹೇಳಿಕೆಗಳನ್ನು ತಮಗೆ ಸರಿಯಾಗಿ ಅನ್ವಯಿಸಿಕೊಳ್ಳಲಾರರು. ರೋಮಾ. 8:10–11ರಲ್ಲಿ ಹೇಳುವಂತೆ "ಕ್ರಿಸ್ತನು ನಿಮ್ಮಲ್ಲಿದ್ದರೆ ದೇಹವು ಪಾಪದ ದೆಸೆಯಿಂದ ಸತ್ತದ್ದಾಗಿದ್ದರೂ ಆತ್ಮವು ನೀತಿಯು ದೆಸೆಯಿಂದ ಜೀವಸ್ವರೂಪವಾಗಿದೆ. ಯೇಸುವನ್ನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಿದಾತನ ಆತ್ಮನು ನಿಮ್ಮಲ್ಲಿ ವಾಸವಾಗಿದ್ದರೆ ಕ್ರಿಸ್ತಯೇಸುವಿನಲ್ಲಿ ಸತ್ತವರೊಳಗಿಂದ ಎಬ್ಬಿಸಿದಾತನು ನಿಮ್ಮಲ್ಲಿ ವಾಸವಾಗಿರುವ ತನ್ನ ಆತ್ಮನ ಮೂಲಕ ನಿಮ್ಮ ಮರ್ತ್ಯದೇಹಗಳನ್ನು ಸಹಾ ಬದುಕಿಸುವನು" ಸತ್ಯದ ವಾಕ್ಯವನ್ನು ಪಡೆದುಕೊಂಡಿರುವ ಸಂತರುಗಳ ನೂತನ ಸ್ವಭಾವವು ನಿಜವಾಗಿಯೂ ನೂತನ ಚಿತ್ತವಾಗಿದೆ. ಇನ್ನುಮುಂದೆ ಇದನ್ನು ನಿಜವಾದ ವ್ಯಕ್ತಿ ಎಂದು ಸಂಬೋಧಿಸಲಾಗುವುದು ಮತ್ತು ಇದು ಮಾತ್ರವೇ ದೇವರದೆಂದು ಗ್ರಹಿಸಲಾಗುವುದು. ಆತನು ನಮ್ಮನ್ನು ನಮ್ಮ ದೇಹದ ದೆಸೆಯಿಂದ ಅಲ್ಲ, ನಮ್ಮ ಹೃದಯದಲ್ಲಿರುವ ಆತ್ಮನ ದೆಸೆಯಿಂದ ಗುರುತಿಸುತ್ತಾನೆ. ಇದುವೇ ಕ್ರಿಸ್ತನ ಮನಸ್ಸು. ರೋಮಾ. 6:3,4 ವಚನಗಳನ್ನೂ ಗಮನಿಸಿರಿ. ಈ ನೂತನ ಸೃಷ್ಟಿಗಳಲ್ಲಿ "ಹಳೆಯ ಮನುಷ್ಯನು' "ಹೊರಗಣ ವ್ಯಕ್ತಿ'ಯೂ ಇದ್ದಾನೆ. ಆತನು ನಾಶಗೊಳ್ಳುತ್ತಾನೆ ಮತ್ತು "ನೂತನ ವ್ಯಕ್ತಿ'ಅಥವಾ ಹೃದಯದ "ಆಂತರಿಕ ಅಥವಾ ಮರೆಯಾದ ಮನುಷ್ಯ'ನು ದಿನದಿಂದ ದಿನಕ್ಕೆ ನವೀಕರಿಸಲ್ಪಡುತ್ತಾನೆ. (2 ಕೊರಿಂಥ 4:16, ಕೊಲೊಸ್ಸೆ 3:9,10, ಎಫೆಸ 4:23, 24 ಮತ್ತು 1 ಪೇತ್ರ 3:4).

## ರೂಪಾಂತರ ದೃಶ್ಯ
### The Transfiguration Scene

ಮನುಷ್ಯಕುಮಾರನು ತನ್ನ ರಾಜ್ಯವನ್ನು ಹೊಂದಿದವನಾಗಿ ಬರುವವರೆಗೆ ನಿಮ್ಮಲ್ಲಿ ಕೆಲವರು ಮರಣದ ರುಚಿ ಕಾಣುವುದೇ ಇಲ್ಲ ಎಂಬ ಹೇಳಿಕೆಯು ಪೇತ್ರ, ಯಾಕೋಬ ಯೋಹಾನರಿಗೆ ಕೇವಲ ಆರುದಿನಗಳಲ್ಲಿಯೇ ರೂಪಾಂತರ ಪರ್ವತದಲ್ಲಿ ಕೈಗೂಡುವುದೆಂಬುದನ್ನು ಅವರು ಸ್ವಲ್ಪವಾದರೂ ಊಹಿಸದಾದರು. ಆದಾಗ್ಯೂ ಅದು ನೆರವೇರಿತು ಮತ್ತು ಇದು ಸಾಕ್ಷಿಗಳಲ್ಲಿ ಸ್ಪಷ್ಟವಾಗಿ ಮಹತ್ತರವಾದ ಮತ್ತು ವಿನ್ಯಾಸಕರ ಪರಿಣಾಮವನ್ನು ಉಂಟುಮಾಡಿತು. ಅವರಲ್ಲಿ ಒಬ್ಬಾತನು ಈ ಬಗ್ಗೆ – "ನಮ್ಮ ಕರ್ತನಾದ ಯೇಸುಕ್ರಿಸ್ತನ ಶಕ್ತಿಯನ್ನೂ ನಿಮಗೆ ತಿಳಿಯಪಡಿಸಿದ್ದರಲ್ಲಿ ಚಮತ್ಕಾರದಿಂದ ಕಲ್ಪಿಸಿದ ಕಥೆಗಳನ್ನು ನಾವು ಅನುಸರಿಸುವವರಾಗಿರಲಿಲ್ಲ. ಆತನ ಮಹತ್ತನ್ನು ಕಣ್ಣಾರೆ ಕಂಡವರಾಗಿಯೇ ತಿಳಿಯಪಡಿಸಿದೆವು. ಈತನು ಪ್ರಿಯನಾಗಿರುವ ನನ್ನ ಮಗನು ಈತನನ್ನು ಮೆಚ್ಚಿದ್ದೇನೆ ಎಂಬಂಥ ವಾಣಿಯು ಸರ್ವೋತ್ಕೃಷ್ಟ ಪ್ರಭಾವದಿಂದ ಆತನಿಗೆ ಉಂಟಾದುದರಲ್ಲಿ

ಆತನು ತಂದೆಯಾದ ದೇವರಿಂದ ಘನಮಾನಗಳನ್ನು ಹೊಂದಿದನಲ್ಲವೇ. ನಾವು ಪರಿಶುದ್ಧ ಪರ್ವತದ ಮೇಲೆ ಆತನ ಸಂಗಡ ಇದ್ದಾಗ ಆಕಾಶದಿಂದ ಬಂದ ಆ ವಾಣಿಯನ್ನು ನಾವೇ ಕೇಳಿದ್ದೆವು" ( 2 ಪೇತ್ರ 1: 16–18) ಎಂದು ಬರೆಯುತ್ತಾನೆ. ಈ ರೂಪಾಂತರ ದೃಶ್ಯವು ಒಂದು ನೈಜ ಘಟನೆಯಾಗಿರದೆ ಅದೊಂದು "ದಿವ್ಯದರ್ಶನ'ವಾಗಿತ್ತೆಂದು ಅವರು ಪರ್ವತದಿಂದ ಇಳಿದು ಬರುವಾಗ ನಮ್ಮ ಕರ್ತನೇ ಅವರಿಗೆ ವಿವರಿಸಿದ್ದಾನೆ (ಮತ್ತಾಯ 17:9). ಈ ದರ್ಶನದಲ್ಲಿ ಬೇರೆಲ್ಲಾ ದರ್ಶನಗಳಂತೆ, ನೈಜವಲ್ಲದ್ದು ನೈಜವಾಗಿ ಗೋಚರಿಸುತ್ತದೆ. ಯೋಹಾನನಿಗೆ ಪತ್ಮೋಸ್ ದ್ವೀಪದಲ್ಲಿ ಆದ ದರ್ಶನವನ್ನು ಆತನು ಪ್ರಕಟನೆ ಗ್ರಂಥದಲ್ಲಿ ವಿವರಿಸಿದ್ದಾನೆ. ಆತನು ಕಂಡನು, ಕೇಳಿಸಿಕೊಂಡನು ಮತ್ತು ಮಾತನಾಡಿದನು. ಹೀಗಿದ್ದರೂ ಆತನಿಗೆ ಕಂಡುಬಂದ ಸಂಗತಿಗಳೆಲ್ಲವೂ ನೈಜವಾದುದ್ದಲ್ಲ – ಅನೇಕ ತಲೆಗಳುಳ್ಳ, ಅನೇಕ ಕೊಂಬುಗಳುಳ್ಳ ಮೃಗವು ಯಾವುದೂ ಇಲ್ಲ, ಅಲ್ಲಿ ಕಂಡುಬಂದಂತೆ ದೇವದೂತರುಗಳಾಗಲೀ, ಸುರುಳಿಗಳಾಗಲೀ, ಸಿಂಹಾಸನಗಳಾಗಲೀ ಇಲ್ಲ, ನಿಜವಾದ ಘಟಸರ್ಪ ಮುಂತಾದವುಗಳು ಇಲ್ಲ. ಅವುಗಳೆಲ್ಲವೂ ಕೇವಲ ದರ್ಶನ ವಾಗಿತ್ತು. ಇಂತಹ ದರ್ಶನಗಳು ಒಳ್ಳೆಯವುಗಳಾಗಿದ್ದು ನೈಜ ಘಟನೆಗಳಿಗಿಂತಲೂ ಉತ್ತಮವಾಗಿ ಸಂಧರ್ಭಗಳಿಗೆ ಹೊಂದಿಕೊಳ್ಳುವುದಾಗಿತ್ತು.

## ಸತ್ತವರೊಳಗಿಂದ ಮೊದಲಿಗೆ ಎದ್ದುಬರಬೇಕಾದವರು

### "The First that Should Rise from the Dead"

ಮೋಶೆ ಮತ್ತು ಎಲೀಯರು ಆ ಪರ್ವತದ ಮೇಲೆ ವ್ಯಕ್ತಿಗತವಾಗಿ ಹಾಜರಾಗಿರಲಿಲ್ಲ. ಆದರೆ ದರ್ಶನದಲ್ಲಿ ಮಾತ್ರವೇ ಶಿಷ್ಯರುಗಳಿಗೆ ಕಾಣಿಸಿದರು. ನಾವು ಇದನ್ನು ದರ್ಶನವೆಂದು ನಮ್ಮ ಕರ್ತನ ಹೇಳಿಕೆಯಿಂದ ಮಾತ್ರವಲ್ಲ "ಮನುಷ್ಯಕುಮಾರನೇ ಹೊರತು ಮತ್ಯಾರೂ ಪರಲೋಕಕ್ಕೆ ಏರಿ ಹೋದವರಲ್ಲ" (ಯೋಹಾನ 3:13. ಪ್ರಕಟನೆ 2:34) ಎಂಬ ಮಾತುಗಳಿಂದಲೂ ತಿಳಿದುಕೊಳ್ಳಬಹುದು. ಮೋಶೆ ಮತ್ತು ಎಲೀಯರು ಅಲ್ಲಿರಲಿಲ್ಲ ಎಂಬುದೂ ನಮಗೆ ತಿಳಿದದೆ. ಯಾಕೆಂದರೆ ಅವರು ಯಾರೂ ಇನ್ನೂ ಪುನರುತ್ಥಾನ ಹೊಂದಿಕೊಂಡಿರುವುದಿಲ್ಲ. ಯಾಕೆಂದರೆ, ನಮ್ಮ ಕರ್ತನಾದ ಯೇಸು ಮಾತ್ರವೇ "ನಿದ್ರೆಹೋದವರಲ್ಲಿ ಪ್ರಥಮ ಫಲವೂ"(1 ಕೊರಿಂಥ 15:20), "ಸತ್ತವರೊಳಗಿಂದ ಮೊದಲು ಎದ್ದು ಬಂದವನೂ" (ಕೊಲೊಸ್ಸೆ 1:18) ಆಗಿದ್ದಾನೆ.

ಇದಕ್ಕೂ ಹೆಚ್ಚಾಗಿ, ಅಪೋಸ್ತಲನು ಇಬ್ರಿಯರಿಗೆ ಬರೆದಾಗ, ಮೋಶೆ ಮತ್ತು ಪ್ರವಾದಿಗಳು (ಎಲಿಯನೂ ಸೇರಿ) ಹಾಗೂ ಹಿಂದಿನ ಕಾಲದಲ್ಲಿ ಅವರ ಪ್ರಾಮಾಣಿಕತೆ ಮತ್ತು ದೇವರಿಂದ ಅವರುಗಳು ದೇವರಿಂದ ಅಂಗೀಕಾರಗೊಂಡದ್ದು ಇವುಗಳ ಬಗ್ಗೆ ವಿಶಿಷ್ಟವಾಗಿ ಹೇಳುವವನಾಗಿದ್ದಾನೆ. ಆದರೆ ಅವರುಗಳು ಅದುವರೆವಿಗೂ ಪ್ರತಿಫಲವನ್ನು ಪಡೆದಿರಲಿಲ್ಲ ಎಂಬದಾಗಿ ಹೇಳುತ್ತಾನೆ. ಅವರು ಸುವಾರ್ತಾಯುಗದ ಸಭೆಯು ಕ್ರಿಸ್ತನೊಂದಿಗೆ ಆತನ ರಾಜ್ಯದಲ್ಲಿ ಸಹಬಾಧ್ಯಸ್ಥರಾಗುವ ಬಹುಮಾನವನ್ನು ಪಡೆಯುವವರೆಗೂ ಪಡೆದಿರಲಿಲ್ಲ. "ಇವರೆಲ್ಲರೂ ನಂಬಿಕೆಯ ಮೂಲಕ ಒಳ್ಳೇ ಹೆಸರನ್ನು ಸಂಪಾದಿಸಿಕೊಂಡಿದ್ದರೂ ವಾಗ್ದಾನದ ಫಲವನ್ನು ಹೊಂದಲಿಲ್ಲ; ದೇವರು ನಮಗೋಸ್ಕರ ಶ್ರೇಷ್ಠವಾದ ಭಾಗ್ಯವನ್ನು ಏರ್ಪಡಿಸಿ ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದೆಂದು ಸಂಕಲ್ಪಿಸಿದನು" (ಇಬ್ರಿಯ 11:39,40).

ಆದುದರಿಂದ, ಮೋಶೆ ಮತ್ತು ಎಲೀಯರು ನಮ್ಮ ಕರ್ತನೊಡನೆ ಕಾಣಿಸಿಕೊಂಡದ್ದು ಕೇವಲ ಒಂದು ತೋರಿಕೆಯಾಗಿತ್ತು ಮತ್ತು ನಾವು ಇದನ್ನು ವಿಚಾರ ಮಾಡುತ್ತಿದ್ದೇವೆ. ಈ ದರ್ಶನದ ಅರ್ಥ ಮತ್ತು ಸೂಚನೆಗಳೇನು? ನಮ್ಮ ಕರ್ತನು ಮುಂತಿಳಿಸಿದಂತೆ ಮತ್ತು ಪೇತ್ರನು ಅದನ್ನು ಅರ್ಥವಾಡಿಕೊಂಡು ಹೇಳಿದಂತೆ ಇದು ಕ್ರಿಸ್ತನ ಮಹಿಮಾರಾಜ್ಯದ ಸ್ಥಬ್ಧ ಚಿತ್ರವಾಗಿತ್ತೆಂದು ನಾವು ಉತ್ತರಿಸುತ್ತೇವೆ. ಈ ಸ್ಥಬ್ಧ ಚಿತ್ರದಲ್ಲಿ ಆ ಮೂವರು ಶಿಷ್ಯರಿಗೆ ಯಾವುದೇ ಪಾತ್ರವಿದ್ದಿಲ್ಲ. ಅವರು ಕೇವಲ ಸಾಕ್ಷಿಗಳು ಮಾತ್ರ. ಕ್ರಿಸ್ತನು ಕೇಂದ್ರಬಿಂದುವಾಗಿದ್ದನು. ಆತನ ಮುಖಲಕ್ಷಣಗಳೂ, ಉಡುಪುಗಳೂ ಅದ್ಭುತವಾಗಿ ಪ್ರಜ್ವಲಿಸುತ್ತಿದ್ದವು. ಇದು ಆತ್ಮನ ಸ್ವಭಾವಗಳಿಗೆ ಸೇರಿದ ಮಹಿಮೆಯನ್ನು ಪ್ರತಿನಿಧಿಸುತ್ತಿತ್ತು. ಇದನ್ನು ನಮ್ಮ ಕರ್ತನು ಪುನರುತ್ಥಾನದಲ್ಲಿ ಪಡಕೊಂಡನು. "ಇದು ತಂದೆಯ ವ್ಯಕ್ತಿತ್ವದ ವಿಶಿಷ್ಟವಾದ ಸ್ವರೂಪವಾಗಿತ್ತು. ಇದೇ ಆತ್ಮನ ಮಹಿಮೆಯು ಪ್ರಕಟನೆಯ ದರ್ಶನಗಳಲ್ಲಿಯೂ ಪ್ರತಿನಿಧಿತವಾಗಿದೆ. –"ಆತನ ( ನಮ್ಮ ಕರ್ತನ) ತಲೇ ಕೂದಲು ಬಿಳೀ ಉಣ್ಣೆಯಂತೆಯೂ ಹಿಮದಂತೆಯೂ ಬೆಳ್ಳಗಿತ್ತು. ಆತನ ಕಣ್ಣುಗಳು ಬೆಂಕಿಯ ಉರಿಯಂತೆಯೂ ಆತನ ಪಾದಗಳು ಕುಲಿಮೆಯಲ್ಲಿ ಕಾಯಿಸಿದ ತಾಮ್ರದಂತೆಯೂ ಆತನ ಧ್ವನಿಯು ಜಲಪ್ರವಾಹದ ಘೋಷದಂತೆಯೂ ಇದ್ದವು" (ಪ್ರಕಟನೆ 1:15, 2:18) ಕರ್ತನು ತನ್ನ ದ್ವಿತಿಯಾಗಮನದಲ್ಲಿ ದೇಹಧಾರಿ ಯಾಗಿರುವುದಿಲ್ಲ. ಯಾಕೆಂದರೆ ಆತನೇ ಸಾಕ್ಷಿಹೇಳುವಂತೆ "ರಕ್ತಮಾಂಸವು ದೇವರ ರಾಜ್ಯಕ್ಕೆ ಭಾಧ್ಯವಾಗಲಾರವು" (1 ಕೊರಿ. 15:50). ಆತನು ಈಗಲೂ, ಸದಾಕಾಲವೂ ಅತ್ಯುನ್ನತ ಮಟ್ಟದ ದೇವ ಸ್ವಭಾವವುಳ್ಳ ಮಹಿಮಾಶರೀರವನ್ನು ಹೊಂದಿದವನಾಗಿದ್ದಾನೆ. ಈ ರೂಪಾಂತರವು ಶಿಷ್ಯರುಗಳ ಮನದಲ್ಲಿ ಈ ಮಹಿಮೆಯ ಅಸ್ಪಷ್ಟ ಕಲ್ಪನೆಯನ್ನುಂಟು ಮಾಡುವುದಾಗಿತ್ತು.

ಅಪೋಸ್ತಲನು ವಿವರಿಸುವಂತೆ ಮೋಶೆಯು ನಮ್ಮ ಕರ್ತನ ಪೂರ್ವದಲ್ಲಿದ್ದ ಪ್ರಾಮಾಣಿಕ ವಿಜಯಿಗಳನ್ನು ಪ್ರತಿನಿಧಿಸುವವನಾಗಿದ್ದಾನೆ (ಇಬ್ರಿಯ 11:39,40). ಆದರೆ ದೇವರ ರಾಜ್ಯದ ಸ್ಥಾಪನೆಯಾಗುವವರೆಗೆ ಆತನನ್ನು ಸರ್ವ ಸಂಪೂರ್ಣನನ್ನಾಗಿ ಮಾಡಲಿಲ್ಲ. ಎಲೀಯನು ಸುವಾರ್ತಾಯುಗದ ವಿಜಯಶಾಲಿಗಳನ್ನು ಪ್ರತಿನಿಧಿಸುತ್ತಾನೆ (vol II: Chap viii ನೋಡಿರಿ).

## ನೂತನ ಸೃಷ್ಟಿಯ ಪ್ರಸ್ತುತ ಆನಂದಗಳು

### Present Joys of the New Creation

**"ನನ್ನಲ್ಲಿರುವ ಆನಂದವು ನಿಮ್ಮಲ್ಲಿಯೂ ಇರಬೇಕೆಂತಲೂ ನಿಮ್ಮ ಆನಂದವು ಪರಿಪೂರ್ಣವಾಗಬೇಕೆಂತಲೂ ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ" (ಯೋಹಾನ 15: 11)**

ಒಂದು ದೃಷ್ಟಿಕೋನದ ನಿಮಿತ್ತ "ದೇವರ ಪುತ್ರರ ಮನೆಯಿಂದ" ಹೊರಗಿರುವವರು–ತಮ್ಮನ್ನು ಪ್ರತಿಷ್ಠೆ

ಮಾಡಿಕೊಳ್ಳದೇ ಇರುವುದರಿಂದ ರಾಜವಂಶ ಯಾಜಕತ್ವದವರಾದ ನೂತನ ಸೃಷ್ಟಿಯ ಸದಸ್ಯರಾಗದೇ ಇರುವವರು– ಕರ್ತನ ದೇಹದ ಅಂಗಗಳಾಗಿರುವವರು ತಮ್ಮ ಕರ್ತನಂತೆ ತಮ್ಮನ್ನು ಮತ್ತು ತಮ್ಮ ಈ ಭೂಲೋಕದ ಎಲ್ಲಾ ಹಿತಾಸಕ್ತಿಗಳನ್ನು ತಮ್ಮ ಕರ್ತನಿಗೆ ಮತ್ತು ಆತನ ಕಾರಣಗಳಿಗೆ ಸಮರ್ಪಿಸಿಕೊಂಡಿದ್ದಾರೆ ಎಂಬುದಾಗಿ ಅರಿತುಕೊಂಡು, ಅವರುಗಳು ಈ ತ್ಯಾಗದಿಂದ ತಮ್ಮ ಎಲ್ಲಾ ಸುಖಸಂತೋಷಗಳನ್ನು ಕಳೆದುಕೊಂಡಿದ್ದಾರೆ ಎಂದು ಶೀಘ್ರ ಪ್ರವೃತ್ತಿಯಿಂದ ಪರಿಗಣಿಸುತ್ತಾರೆ. ಆದರೆ, ಇದು ದೊಡ್ಡ ತಪ್ಪಾಗಿದೆ ಎಂದು ನೂತನ ಸೃಷ್ಟಿಗಳು ಸಾಕ್ಷಿ ಕೊಡುವವರಾಗಿದ್ದಾರೆ. ಒಮ್ಮೆ ಬಹು ಪ್ರಿಯವೆಂದೆಣಿಸಿದ್ದ ಕೆಲವೊಂದು ಲೌಕಿಕ ಆನಂದಗಳನ್ನು ಒಂದೊಂದಾಗಿಯೇ ತ್ಯಾಗ ಮಾಡಬೇಕಾಗಿ ಬಂದರೂ ಅವುಗಳ ಸ್ಥಳಕ್ಕೆ ಪರಲೋಕದ ಸಂತೋಷಗಳು ಬಂದಿದ್ದು ಅವುಗಳು ತಮ್ಮ ನಷ್ಟಕ್ಕೂ ಮಿಗಿಲಾಗಿ ಭರಿಸಿವೆ ಎಂದು ನೂತನ ಸೃಷ್ಟಿಯ ಎಲ್ಲಾ ಸದಸ್ಯರುಗಳೂ ವಿಭಿನ್ನವಾಗಿ ಬಲ್ಲವರಾಗಿದ್ದಾರೆ. ನಮ್ಮ ಕರ್ತನು ಹೇಳಿದಂತೆ – “ನೀವು ಅಳುತ್ತಾ ಗೋಳಾಡುತ್ತಾ ಇರುವಿರಿ. ಆದರೆ ಲೋಕವು ಸಂತೋಷಿಸುವುದು; ನಿಮಗೆ ದುಃಖವಾಗುವುದು, ಆದರೆ ನಿಮ್ಮ ದುಃಖವು ಹೋಗಿ ಆನಂದ ಬರುವುದು” (ಯೋಹಾನ 16:20). ನಮ್ಮ ಕರ್ತನು ತಳದಲ್ಲಿರುವ ಗಸಿಯನ್ನೂ ಬಿಡದೆ ಹೀರಿ ಕುಡಿದಂತೆ ನೂತನ ಸೃಷ್ಟಿಗಳೂ ಕಹಿಯನ್ನು ಕುಡಿಯಲೇಬೇಕಾಗುವುದು; ಅವರೆಲ್ಲರೂ ಈ ದೇಹದ ದೌರ್ಬಲ್ಯಗಳಿಗಾಗಿ ಅನುಕಂಪವುಳ್ಳವರಾಗಬೇಕು; ಮಿತಿಮೀರಿದ ಪಾಪವನ್ನು ಮತ್ತು ಪಾಪದ ಕಹಿಯನ್ನು ಸುಸ್ಪಷ್ಟವಾಗಿ ಅರಿತುಕೊಳ್ಳಬೇಕು. ಪರಲೋಕದ ತಮ್ಮ ತಂದೆಯ ಬಗ್ಗೆ ಇರುವ ಅವರ ನಿಷ್ಠೆಯ ಬಗ್ಗೆ ಮತ್ತು ಆತನ ಕಾರಣಗಳಿಗಾಗಿ ತಮ್ಮೆಲ್ಲಾ ಲೌಕಿಕ ಹಿತಾಸಕ್ತಿಗಳನ್ನು ತ್ಯಾಗಮಾಡುವ ಇಚ್ಛೆಯ ಬಗ್ಗೆ ಅವರ ಪರೀಕ್ಷೆಯಾಗಬೇಕು ಮತ್ತು ಸರಿಯಾದವುಗಳ ಬಗ್ಗೆ ಅವರ ನಿಷ್ಠೆಯನ್ನು ಕೇಳಲಾಗುವುದು. ಆದರೆ ಈ ಎಲ್ಲಾ ಕಣ್ಣೀರಿನಿಂದ, ದುಃಖದಿಂದ ಮತ್ತು ನಿರಾಸೆಗಳಿಂದ ಆಶೀರ್ವಾದಗಳು ಉಂಟಾಗುತ್ತವೆ. –ಇವು ದೈವಿಕ ಒಪ್ಪಿಗೆಯ ಆಶೀರ್ವಾದಗಳಾಗಿದ್ದು ಸ್ವಾಭಾವಿಕ ಮಾನವನ ಸಂತೋಷಕ್ಕಿಂತಲೂ ಶ್ರೇಷ್ಠವಾದ ಸಂತೋಷವಾಗಿದೆ – ಇವು ಕರ್ತನ ಸಂತೋಷಗಳು, ಪರಲೋಕದ ತಂದೆಯೊಂದಿಗೆ ಸಾಂಗತ್ಯ ಮತ್ತು ಅನ್ಯೋನ್ಯತೆಗಳು ಆಗಿವೆ.

ನಮ್ಮ ಆಶೀರ್ವಾದಕರ ನಿರೀಕ್ಷೆಗಲ್ಲವಾದರೆ ಅಂತಹ ಸಂತೋಷಗಳು ಇರುವುದಿಲ್ಲ. ನಮ್ಮ ಸಂತೋಷಗಳು ಕೇವಲ ಈ ಜೀವನದ ಪರಿಸ್ಥಿತಿಗಳ ಮೇಲೆ ಆತುಕೊಂಡಿದ್ದರೆ, ನಮಗೆ ಯಾವುದೇ ಸಂತೋಷವಿರುತ್ತಿದ್ದಿಲ್ಲ. ಅಪೋಸ್ತಲನು ಹೇಳುವಂತೆ – “ಈ ಜೀವಮಾನದ ಪೂರ್ತಿಗೆ ನಾವು ಕ್ರಿಸ್ತನಲ್ಲಿ ನಿರೀಕ್ಷೆಯಿಟ್ಟುಕೊಂಡದ್ದೇ ಹೊರತು ಮತ್ತೇನೂ ಇಲ್ಲದಿದ್ದರೆ ಎಲ್ಲಾ ಮನುಷ್ಯರಲ್ಲಿಯೂ ನಿರ್ಭಾಗ್ಯರೇ ಸರಿ” ( 1 ಕೊರಿಂಥ 15:19). ಯಾವಾಗ ನಾವು ದೇವರ ವಾಕ್ಯದಲ್ಲಿನ ಅಮೂಲ್ಯ ಮತ್ತು ಉತ್ಕೃಷ್ಟವಾದ ಮಹಾ ವಾಗ್ದಾನಗಳ ಮೇಲೆ ನಮ್ಮ ಭರವಸೆ ನಿರೀಕ್ಷೆಯನ್ನು ಭದ್ರವಾಗಿ ಇಟ್ಟಿರುತ್ತೇವೆಯೋ ಆಗ ನಮ್ಮ ದುಃಖ ಕಣ್ಣೀರಿನ ಬದಲಾಗಿ ಮರುಭೂಮಿಯಲ್ಲಿ ಹೂಗಳು ಅರಳುವಂತೆ ಜೀವಕಳೆ ತುಂಬಿದ ಸಂತೋಷ ಆಶೀರ್ವಾದಗಳು ನಮ್ಮಲ್ಲಿ ಉದ್ಭವಿಸುತ್ತವೆ. ಬಡ ಪ್ರಪಂಚವು ಆ ರೀತಿಯಾಗಿ ಉತ್ಪಾದಿಸಲಾಗಲೀ ಅಥವಾ ಊಹಿಸಲಾಗಲೀ ಸಾಧ್ಯವಿಲ್ಲ. ನಮ್ಮ ಸಂತೋಷಗಳು ನಮ್ಮ ನಿರೀಕ್ಷೆಗಳ ಮೇಲೆ ಆತುಕೊಂಡಿರುವಂತೆ ಅವುಗಳು ನಮ್ಮ ಚಟುವಟಿಕೆಗಳ ಮೇಲೂ ಆತುಕೊಂಡಿರುತ್ತವೆ. ನಮ್ಮನ್ನು ವಾಗ್ದಾನಗಳು ಬಿಟ್ಟಿವೆ ಮತ್ತು ನಿರೀಕ್ಷೆಯು ಈ ವಾಗ್ದಾನಗಳನ್ನು ಗ್ರಹಿಸಿವೆ ಎಂದರೆ ಅಷ್ಟೇ ಸಾಲದು. ದೈವಿಕ ವ್ಯವಸ್ಥೆಯಲ್ಲಿ ಒಳಸೇರಿರುವ ಮತ್ತು ಪ್ರತೀಕ್ಷಿತವಾದ ನಿರೀಕ್ಷೆಯಲ್ಲಿ ಉಕ್ಕಿಬರುವ ಸಂತೋಷವು ನಮ್ಮ ಪ್ರಾರ್ಥನೆಗಳಿಂದ, ಮತ್ತು ಕರ್ತನ ಸೇವೆಯ ಸಂಪೂರ್ಣವಾದ ಚಟುವಟಿಕೆಗಳಿಂದ ಪೋಷಿಸಲ್ಪಡಬೇಕು. ನಮ್ಮ ಕರ್ತನು ಪ್ರಾರ್ಥನೆ ಮತ್ತು ದೀರ್ಘಕಾಲ ಮುಂದುವರೆಯುವ ನಮ್ಮ ಸಂತೋಷ ಬಗ್ಗೆ ಹೀಗೆ ಸೂಚಿಸಿದ್ದಾನೆ

**ಬೇಡಿಕೊಳ್ಳಿರಿ ನಿಮಗೆ ಸಿಕ್ಕುವುದು; ಆಗ ನಿಮ್ಮ ಆನಂದವು ಪರಿಪೂರ್ಣವಾಗುವುದು”** (ಯೋಹಾನ 16:24)

**Ask and ye shall receive, that your Joy may be full** (John 16:24)

ಪ್ರವಾದಿಯು ತನ್ನ ಕೀರ್ತನೆಯಲ್ಲಿ “ನಿನ್ನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ. ನಿನ್ನ ಬಲಗೈಯಲ್ಲಿ ಶಾಶ್ವತ ಭಾಗ್ಯವಿದೆ” (ಕೀರ್ತನೆ 16:11) ಎಂದು ಪ್ರಕಟಿಸಿದ್ದಾನೆ. ಯಾಕೆಂದರೆ, ಪ್ರಾರ್ಥನೆಯು ನಮ್ಮನ್ನು ದೇವರ ಸಮ್ಮುಖಕ್ಕೆ ಬರಮಾಡುವುದು. ಅದು ದೈವಿಕ ಆಶೀರ್ವಾದಗಳಿಗೆ ಮತ್ತು ಸರ್ವೋತ್ಕೃಷ್ಟ ಸಂತೋಷಗಳಿಗೆ ಮಾರ್ಗವನ್ನು ಸಿದ್ಧ ಮಾಡುವುದು. ಕರ್ತನ ಜನರ ಮಾರ್ಗವನ್ನು ಆತನ ಕೃಪಾಸನಕ್ಕೆ ಕೊಂಡೊಯ್ಯುವಂತೆ ತೆರೆಯುವುದು ಸ್ಪಷ್ಟವಾಗಿ ದೇವರ ಚಿತ್ತ ಅಥವಾ ಯೋಜನೆಗಳನ್ನು ಬದಲಾಯಿಸುವ ಉದ್ದೇಶ ಹೊಂದಿಲ್ಲ. ಅಂತಹ ಆಲೋಚನೆಗಳು ಈ ಪ್ರಸ್ತಾಪದ ಎಲ್ಲಾ ಸಮಂಜಸವಾದ ಪರಿಗಣನೆಯಲ್ಲಿ ಅಸಂಬದ್ಧವಾಗಿವೆ. ಈ ಕಾರಣದಿಂದ ನಮ್ಮ ಕರ್ತನು ನಮಗೆ ಬೋಧಿಸುವುದೇನೆಂದರೆ, ಯುಕ್ತವಾದ ಪ್ರಾರ್ಥನೆಯು ದೇವರ ಚಿತ್ತಕ್ಕೆ ವಿರೋಧವಾಗಿ ನಮ್ಮ ಚಿತ್ತವು ನೆರವೇರಬೇಕೆಂಬ ಕೋರಿಕೆಗಳಾಗಿರುವುದಿಲ್ಲ, ಆದರೆ ನಮ್ಮ ಚಿತ್ತವನ್ನು ದೇವರ ಚಿತ್ತಕ್ಕೆ ಒಪ್ಪಿಸಿಕೊಡುವುದಾಗಿದೆ. ಅಪೋಸ್ತಲನು ಹೇಳುವಂತೆ “ನೀವು ಬೇಡಿದರೂ ಬೇಡಿದ್ದನ್ನು ನಿಮ್ಮ ಭೋಗಗಳಿಗಾಗಿ ಉಪಯೋಗಿಸಬೇಕೆಂಬ ದುರಭಿಪ್ರಾಯ ಪಟ್ಟು ಬೇಡಿಕೊಳ್ಳುವುದರಿಂದ ನಿಮಗೆ ದೊರೆಯುವುದಿಲ್ಲ” (ಯಾಕೋಬ 4: 3).

ಇದೇ ರೀತಿಯಲ್ಲಿ ನಮ್ಮ ಕರ್ತನು ಸಹಾ ಎಚ್ಚರಿಸಿ ಹೇಳಿದ್ದೇನೆಂದರೆ – “ನೀನು ಪ್ರಾರ್ಥನೆಮಾಡುವಾಗ ಅಜ್ಞಾನಿಗಳ ಹಾಗೆ ಹೇಳಿದ್ದನ್ನೇ ಸುಮ್ಮಸುಮ್ಮನೆ ಹೇಳಬೇಡ; ಅವರು ಬಹಳ ಮಾತುಗಳನ್ನಾಡಿದರೆ ತಮ್ಮ ಪ್ರಾರ್ಥನೆಯನ್ನು ದೇವರು ಕೇಳುತ್ತಾನೆಂದು ನೆನಸುತ್ತಾರೆ. ಆದುದರಿಂದ ನೀವು ಅವರ ಹಾಗೆ ಆಗಬೇಡಿರಿ. ನೀವು ತಂದೆಯನ್ನು ಬೇಡಿಕೊಳ್ಳುವುದಕ್ಕಿಂತ ಮುಂಚೆಯೇ ನಿಮಗೇನೇನು ಅಗತ್ಯವೆಂಬುದು ಆತನಿಗೆ ತಿಳಿದದೆ... ಹೀಗಿರುವುದರಿಂದ ನೀವು ಏನು ಊಟಮಾಡಬೇಕು, ಏನು ಕುಡಿಯಬೇಕು, ಏನು ಹೊದ್ದುಕೊಳ್ಳಬೇಕು ಎಂದು ಚಿಂತೆಮಾಡಬೇಡಿರಿ. ಇವುಗಳಿಗೆಲ್ಲಾ ಅಜ್ಞಾನಿಗಳು ತವಕಪಡುತ್ತಾರೆ. ಹೀಗಿರುವುದರಿಂದ ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕ ಪಡಿರಿ. ಇವುಗಳ

ಕೂಡ ಅವೆಲ್ಲವೂ ನಿಮಗೆ ದೊರಕುವುವು (ಮತ್ತಾಯ 6:7–8 ಮತ್ತು 31–33)– ಪರಲೋಕದ ನಿಮ್ಮ ತಂದೆಯ ಮೂಲಕ ಆತನ ವಿವೇಕಕ್ಕನುಸಾರವಾಗಿ. ಪುನಃ ನಮ್ಮ ಕರ್ತನು ಹೇಳುವುದೇನೆಂದರೆ – "ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವುದು" (ಯೋಹಾನ 15:7). ಈ ಕೆಳಗಿನ ಷರತ್ತುಗಳೆಲ್ಲವೂ ಮುಖ್ಯವಾಗಿವೆ :

(1) ಪ್ರಾರ್ಥನೆಯನ್ನು ಅರ್ಪಿಸುವವನು ಕ್ರಿಸ್ತನಲ್ಲಿರಬೇಕು – ಆತನ ಪ್ರಾಯಶ್ಚಿತ್ತ ಸಂಧಾನವನ್ನು ಅಂಗೀಕರಿಸುವುದರ ಮತ್ತು ಆತನ ಚಿತ್ತ ಮತ್ತು ಸೇವೆಗೆ ತಮ್ಮನ್ನು ಪ್ರತಿಷ್ಠಿಸಿಕೊಳ್ಳುವುದರ ಮೂಲಕ ಆತನೊಂದಿಗೆ ಅತಿಮಹತ್ವದ ಸಂಬಂಧಗಳನ್ನು ಹೊಂದಿದವರಾಗಿರಬೇಕು. ಇದಕ್ಕಿಂತಲೂ ಹೆಚ್ಚಾಗಿ ಕರ್ತನ ದೇಹದ ಅಂಗವಾಗಿ, ನೂತನ ಸೃಷ್ಟಿಯ ಸದಸ್ಯನಾಗಿ ಇಲ್ಲಿ ಉಲ್ಲೇಖಿಸಿರುವ ಪ್ರಾರ್ಥನೆಯ ವಿಶೇಷ ಪ್ರಯೋಜನಗಳಿಗಾಗಿ ಆತನಲ್ಲಿ ನೆಲೆಗೊಂಡು ಅದರಲ್ಲಿ ಮುಂದುವರೆಯು ವವನಾಗಿರಬೇಕು.

(2) ಆತನು ದೇವರ ವಾಕ್ಯಗಳನ್ನು ತನ್ನಲ್ಲಿ ನೆಲೆಗೊಂಡಿರುವಂತೆ ಇರಬೇಕು; ದೇವರ ಚಿತ್ತಕ್ಕೆ ಸಾಮರಸ್ಯವಾಗುವಂತೆ ಕೇಳಿಕೊಳ್ಳುವ ವಿವೇಕ ಆತನಿಗೆ ಬರಬೇಕಾದಲ್ಲಿ ಆತನು ಸತ್ಯದ ಮತ್ತು ಕೃಪೆಯ ವಾಕ್ಯದಲ್ಲಿ ಭಾಗಿಯಾಗಿರಬೇಕು. ಇವುಗಳನ್ನು ಆತನು ಸಂತೋಷದಿಂದ ದಯಪಾಲಿಸುತ್ತಾನೆ. – ಇಲ್ಲವಾದಲ್ಲಿ ಕ್ರಿಸ್ತನಲ್ಲಿ ಇರುವವನಾದರೂ, ನೂತನ ಸೃಷ್ಟಿ ಆದಾಗ್ಯೂ ಆತನ ತಪ್ಪು ಅಭಿಪ್ರಾಯಗಳಿಂದ ಕೂಡಿದ ಪ್ರಾರ್ಥನೆಗಳಿಗೆ ಪದೇ ಪದೇ ಉತ್ತರ ಸಿಕ್ಕದೇ ಹೋಗಬಹುದು. ಈ ಎರಡೂ ಅರ್ಹತೆಗಳನ್ನು ಹೊಂದಿರುವವರು ಮಾತ್ರವೇ ಪರಲೋಕದ ಕೃಪಾಸಿಂಹಾಸನವನ್ನು ಪೂರ್ಣ ಭರವಸದೊಂದಿಗೆ ಸಮೀಪಿಸು ವವರಾಗಿ ಅವರ ಬಿನ್ನಹಗಳು ಖಂಡಿತವಾಗಿಯೂ ಕರ್ತನ ಸೂಕ್ತ ಸಮಯದಲ್ಲಿ ನೆರವೇರುತ್ತವೆ ಎಂಬ ಪೂರ್ಣ ನಿಶ್ಚಯತ್ವವನ್ನು ಹೊಂದಿಕೊಳ್ಳಬಹುದು. ಅಂಥವರು ಮಾತ್ರವೇ ಆನಂದದ ಪರಿಪೂರ್ಣತೆಯನ್ನು ಗ್ರಹಿಸಬಹುದಾಗಿದೆ.

ಪರಿಶುದ್ಧ ಗ್ರಂಥಗಳು ನಮಗೆ ವಿವರಿಸುವಂತೆ ಪ್ರಾರ್ಥನೆಯು ದೇವರ ಸನ್ನಿಧಿಗೆ ಪ್ರವೇಶಪಡಕೊಳ್ಳುವ ಮತ್ತು ಆತನೊಂದಿಗೆ ಅನ್ಯೋನ್ಯತೆ ಹೊಂದಿಕೊಳ್ಳುವ ಪ್ರಯತ್ನವಾಗಿದೆ. ಹಾಗಾದರೆ, "ಕರುಣೆಯನ್ನು ಹೊಂದುವಂತೆಯೂ, ಆತನ ದಯೆಯಿಂದ ಸಮಯೋಚಿತವಾದ ಸಹಾಯವು ದೊರೆಯುವಂತೆಯೂ" ಯಾರು ಪರಲೋಕದ ಕೃಪಾಸನವನ್ನು ಸಮೀಪಿಸಿಯಾರು? (ಇಬ್ರಿಯ 4:16) ಅಪೋಸ್ತಲನೊಂದಿಗೆ ನಾವು ಇದಕ್ಕೆ ಉತ್ತರಿಸುತ್ತಾ ಲೋಕವು ಸಾಮಾನ್ಯವಾಗಿ ಈ ಪ್ರವೇಶಾಧಿಕಾರವನ್ನು ಹೊಂದುಕೊಳ್ಳುವುದಿಲ್ಲ, ಅದಕ್ಕೆ ಪ್ರಾರ್ಥನೆಯೆಂಬ ಭಾಗ್ಯವಿಲ್ಲ. ನಿಜವಾಗಿಯೂ ಮಿಲಿಯಾಂತರ ಅನ್ಯಜನರು ತಮ್ಮ ವಿವಿಧ ಕಲ್ಪನೆಗಳಿಂದ ಮಾಡಿಕೊಂಡಿರುವ ತಮ್ಮ ದೇವತೆಗಳಿಗೆ ಪ್ರಾರ್ಥನೆಗಳನ್ನು ಅರ್ಪಿಸುವುದು ಸತ್ಯ. ಆದರೆ ಅವರ ಪ್ರಾರ್ಥನೆಗಳು ದೇವರಿಗೆ ಅರ್ಪಿತವಾಗುವುದಿಲ್ಲ. "ದೇವರ ಬಳಿಗೆ ಬರುವವನು ದೇವರು ಇದ್ದಾನೆ, (ಆತನು ಸ್ವಯಂ ಜೀವ ಹೊಂದಿರುವವನು ಎಂದು ಗ್ರಹಿಸಿಕೊಳ್ಳಬೇಕು) ಮತ್ತು ತನ್ನನ್ನು ಹುಡುಕುವವನಿಗೆ (ಆತನನ್ನು ತಿಳಿದುಕೊಳ್ಳಲು ಮತ್ತು ಆತನ ಸೇವೆ ಮಾಡಲು ಬಯಸಬೇಕು) ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವುದು ಅವಶ್ಯ" (ಇಬ್ರಿಯ 11:6). ಕೊರ್ನೇಲ್ಯನು ಈ ಎರಡನೆಯ ಜಾತಿಗೆ ಸೇರಿದವರಲ್ಲಿ ಒಬ್ಬನು. ಆತನು ನಿಜದೇವರನ್ನು ಗ್ರಹಿಸಿದನು ಮತ್ತು ಆತನನ್ನು ಪೂಜ್ಯಭಾವದಿಂದ ಕಂಡುಕೊಂಡನು ಮತ್ತು ಆತನ ಚಿತ್ತವನ್ನು ತಿಳಿದು ಅದರಂತೆ ಮಾಡಲು ಬಯಸಿದನು; ಮತ್ತು ದೇವರ ಯೋಜನೆಯು ಅನ್ಯಜನರಿಗೆ ದೈವಕೃಪೆಯು ದೊರೆಯುವ ಅಗತ್ಯ ಅಭಿವೃದ್ಧಿ ಮಟ್ಟಕ್ಕೆ ತಲುಪಿದಾಗ, ಆತನ ಪ್ರಾರ್ಥನೆಗಳಿಗೂ, ಕಾಣಿಕೆಗಳಿಗೂ ಉತ್ತರ ದೊರೆಯಿತು. ಹೀಗಿದ್ದಾಗ್ಯೂ, ಆತನಿಗೆ ದೇವರೊಂದಿಗೆ ಸಂಪೂರ್ಣವಾದ ಅನ್ಯೋನತೆ ನಿಜವಾದ ಅರ್ಥದಲ್ಲಿ ದೊರಕಲಿಲ್ಲ ಆದರೆ, ಪೇತ್ರನಿಗೆ ಹೇಳಿಕಳಿಸುವಂತೆ ಮತ್ತು ಪೇತ್ರನು "ದೇವರ ವಾಕ್ಯಗಳನ್ನು" ಆತನಿಗೆ ಬೋಧಿಸುವಾಗ ಆತನ ಪರಿಸ್ಥಿತಿಯು ಬೇರೆಡೆ ತಿರುಗಿ, ಬದಲಾಗಿ ಆತನು ದೇವರ ಮಕ್ಕಳ ಸಾಂಗತ್ಯಕ್ಕೆ ಬಂದು ಮಕ್ಕಳ ಕೃಪೆಯನ್ನು ಹೊಂದಿಕೊಳ್ಳಬಹುದು ಮತ್ತು ಪರಲೋಕದ ಕೃಪಾಸನಕ್ಕೆ ಪ್ರವೇಶಾಧಿಕಾರವನ್ನು ಪಡಕೊಳ್ಳಬಹುದೆಂಬ ಸೂಚನೆ ಅವನಿಗೆ ದೊರೆಯಿತು.

ಸಾಮಾನ್ಯವಾಗಿ ಈ ವಿಷಯದ ಬಗ್ಗೆ ಅನೇಕ ಸಡಿಲವಾದ ಕಲ್ಪನೆಗಳು ಬಳಕೆಯಲ್ಲಿವೆ. ಇದರಡಿಯಲ್ಲಿ, ಯಾವುದೇ ವ್ಯಕ್ತಿಯಾಗಲೀ, ಎಲ್ಲಿಯೇ ಇರಲಿ, ಯಾವುದೇ ಸಮಯದಲ್ಲಿಯಾಗಲೀ, ಯಾವುದೇ ಪರಿಸ್ಥಿತಿಯಲ್ಲಿಯಾಗಲೀ ಕೃಪಾಸನವನ್ನು ಸಮೀಪಿಸಬಹುದು. ಆದರೆ ಇದು ತಪ್ಪು ಕಲ್ಪನೆ. ಕೊರ್ನೇಲ್ಯನು ತನ್ನ ಪ್ರಾರ್ಥನಾ ಸೌಕರ್ಯವನ್ನು ಉಪಯೋಗಿಸಲು ಪೇತ್ರನ ವಾಕ್ಯೋಪದೇಶವನ್ನು – ಕರ್ತನ ಪರಿಶುದ್ಧ ರಕ್ತದ ಮೂಲಕ ವಿಮೋಚನೆ ಮತ್ತು ಅದರಿಂದ ಪರಿಣಮಿಸುವ ಸಂಧಾನ ಮತ್ತು ದೇವರ ಮಕ್ಕಳಾಗಲು ದೊರೆಯುವ ಭಾಗ್ಯ ಇವುಗಳ ಬಗ್ಗೆ ಕೇಳುವುದು, ಅದನ್ನು ನಂಬಿ ಅಂಗೀಕರಿಸುವುದು ಹೇಗೆ ಅಗತ್ಯವಾಯಿತೋ ಅಂಥಾಃ ತಿಳುವಳಿಕೆಯು ಪ್ರತಿಯೊಬ್ಬರಿಗೂ ಅಷ್ಟೇ ಅಗತ್ಯವಾಗಿದೆ.

ಅಪೋಸ್ತಲನಾದ ಪೌಲನು ಸಹಾ ಇಂತಹ ಆಲೋಚನೆಯನ್ನೇ ವಿವರಿಸುತ್ತಾ "ಕ್ರಿಸ್ತನು ನಮಗೆ ನೂತನ ಮತ್ತು ಜೀವಿಸುವ ಮಾರ್ಗವನ್ನು ತೆರೆಯಮಾಡಿದ್ದಾನೆ" ಅಥವಾ "ನೂತನ ಜೀವನ ಮಾರ್ಗ" ಪರದೆಯ ಮೂಲಕ – ಅಂದರೆ ಆತನ ಶರೀರವೆಂಬ ತೆರೆ – ನಾವು ಸಹೋದರರಂತೆ ಧೈರ್ಯಗೊಂಡು ಕ್ರಿಸ್ತನ ಪರಿಶುದ್ಧ ರಕ್ತದ ಮೂಲಕ ಅತಿ ಪವಿತ್ರತೆಗೆ ಪ್ರವೇಶಿಸಬಹುದು. ದೇವರ ಮನೆವಾರ್ತೆಯವರ ಮೇಲಿರುವ ಮಹಾ ಯಾಜಕನಿಗೆ ಸಂಬಂಧಿಸಿದ ಅಂತಹ ಸಹೋದರರಿಗೆ ನಿಜವಾದ ಹೃದಯದಿಂದ, ನಂಬಿಕೆಯ ಪೂರ್ಣ ನಿಶ್ಚಯತ್ವದೊಂದಿಗೆ, ತಮ್ಮ ಪಾಪ ಮತ್ತು ಅಪರಾಧಗಳು ಪೂರ್ಣವಾಗಿ ಮರೆಯಾಗುವಂತೆ ಮತ್ತು ಅವರು ಸ್ವತಃ ತಂದೆಯಿಂದ ಅಂಗೀಕರಿಸಲ್ಪಡಲು ಸಭೆಯಾಗಿ ಕೂಡಿಬರುವಂತೆ ಬೋಧಿಸಲಾಗಿದೆ (ಇಬ್ರಿಯ 10:17–22). ಇದೇ ಅಪೋಸ್ತಲನು ಪುನಃ ನಮ್ಮ ನಿರ್ಬಲಾವಸ್ಥೆಯಲ್ಲಿಯೂ ನಮ್ಮನ್ನು ತಲುಪಬಹುದಾದ ಮಹಾಯಾಜಕನು ನಮಗಿದ್ದಾನೆ.

"ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ, ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ" (ಇಬ್ರಿಯ 4:15,16) ಎಂದು ಪ್ರಕಟಿಸಿದ್ದಾನೆ.

ಕೇವಲ ಪ್ರತಿಷ್ಠೆಗೊಂಡ ವರ್ಗದವರು, ಉಪ ಯಾಜಕ ವರ್ಗಕ್ಕೆ ಸೇರಿದವರು, ನೂತನ ಸೃಷ್ಟಿಗಳು ಮಾತ್ರವೇ ಈ ರೀತಿಯಾಗಿ ಕೃಪಾಸಿಂಹಾಸನವನ್ನು ಧೈರ್ಯ ಮತ್ತು ಭರವಸೆಗಳೊಂದಿಗೆ ಸಮೀಪಿಸುವಂತೆ ಪ್ರೋತ್ಸಾಹಿಸಲ್ಪಡುತ್ತಾರೆ. ಬಹು ಸ್ಪಷ್ಟವಾಗಿ ಯಾರು ಪ್ರಾಯೋಗಿಕ ನಿಜವಾದ ಅರ್ಥದಲ್ಲಿ ವಿಶ್ವಾಸದ ಕುಟುಂಬಕ್ಕೆ ಸೇರಿದ್ದಾರೋ ಅಂಥವರು ಕೆಲಮಟ್ಟಿಗೆ ಪ್ರಾರ್ಥನೆಯ, ಕೃತಜ್ಞತಾ ಸ್ತುತಿ ಅರ್ಪಿಸುವ ಮತ್ತು ಸ್ತೋತ್ರಾರ್ಹ ಪ್ರಾರ್ಥನೆಗಳನ್ನು ಮಾಡುವ ಭಾಗ್ಯವನ್ನು ಹೊಂದಿಕೊಂಡು ದೈವ ಶಾಂತಿಯಲ್ಲಿ, ಸಂಧಾನ ಪ್ರಾಯಶ್ಚಿತ್ತದ ಮೂಲಕ ಪಾಪಪರಿಹಾರವನ್ನು ಗ್ರಹಿಸುವುದರಲ್ಲಿ ಸಂತೋಷಿಸಬಹುದು. ಆದರೆ, ಧೈರ್ಯದೊಡನೆ ಅಥವಾ ಬೇರೊಂದು ರೀತಿಯಲ್ಲಿ ಮಹಾಪರಿಶುದ್ಧ ಸನ್ನಿಧಿಗೆ ಬರುವ ಭಾಗ್ಯ ಅವರದಲ್ಲ. ಕೇವಲ ತಮ್ಮನ್ನು ಪ್ರತಿಷ್ಠಿಸಿಕೊಂಡವರು, ನೂತನ ಸೃಷ್ಟಿಗಳು, ಯಾಜಕೋದ್ಯೋಗಕ್ಕೆ ಸೇರಿದ ಸದಸ್ಯರುಗಳು ಪ್ರಾರ್ಥನೆಯ ಮೂಲಕ ದೇವರ ಸನ್ನಿಧಿಯಲ್ಲಿ ಈ ವಿಶೇಷ ಅರ್ಥದಲ್ಲಿ ಪ್ರವೇಶಿಸುವ ಭಾಗ್ಯ ಹೊಂದಿರುತ್ತಾರೆ; ಆದುದರಿಂದ ಅವರುಗಳು ಮಾತ್ರವೇ ಒಡೆಯನು ವಾಗ್ದಾನಮಾಡಿದ ಆನಂದದ ಪರಿಪೂರ್ಣತೆಯನ್ನು ಅನುಭವಿಸುತ್ತಾರೆ. ಈ ಕಾರಣದಿಂದ ನಾವು ಅವಿಶ್ವಾಸಿಗಳಿಗೆ ಪ್ರಾರ್ಥನೆಯ ಔಚಿತ್ಯತೆಯನ್ನು ಸಲಹೆಮಾಡದೇ ಮೊದಲಿಗೆ ಪೇತ್ರನು ಕೊರ್ನೇಲ್ಯನಿಗೆ ನೀಡಿದಂತೆ ಅವರಿಗೆ ವಾಕ್ಯೋಪದೇಶವನ್ನು ನೀಡಬೇಕು. ಆ ಮೂಲಕ ಅವರು ದೇವರ ಸನ್ನಿಧಾನದಲ್ಲಿ ನಿಲ್ಲುವ ಮೊದಲೇ ತಾವು ಯಾರನ್ನು ನಂಬುತ್ತಿದ್ದೇವೆಂದು ತಿಳಿದಿರಬೇಕು. ಪರಂತು, ಕರ್ತನಾದ ಯೇಸುಕ್ರಿಸ್ತನನ್ನು ನಂಬಿದವರೆಲ್ಲರೂ ಆತನ ಮೂಲಕವೇ ತಂದೆ ದೇವರಿಗೆ ಪ್ರಾರ್ಥನೆ ಮಾಡುವಂತೆ, ಕೃತಜ್ಞತಾಸ್ತೋತ್ರ, ಬಿನ್ನಹಗಳನ್ನು ಅರ್ಪಿಸುವಂತೆ ನಾವು ಪ್ರೋತ್ಸಾಹಿಸುತ್ತೇವೆ. ಅಂಥವರಿಗೆ ಅವರ ನೀತಿ ನಿರ್ಣಯದ ಸ್ಥಾನವು ದೇವರ ಚಿತ್ತದ ನೆರವೇರಿಕೆಯಲ್ಲ, ಆದರೆ ದೇವರ ಸನ್ನಿಧಾನವನ್ನು ಸಮೀಪಿಸುವ ಸರಿಯಾದ ಕ್ರಮದ ಆರಂಭ ಎಂಬುದನ್ನು ಮುಕ್ತವಾಗಿ ಅರ್ಥ ಮಾಡಿಕೊಳ್ಳಲು ಬಿಡಬೇಕು. ಇದು ಆ ಸಮೀಪಿಸುವಿಕೆಯ ಮೊದಲ ಹೆಜ್ಜೆ ಆಗಿದೆ. ದೇವರಚಿತ್ತಕ್ಕೆ ಪೂರ್ಣವಾಗಿ ಪ್ರತಿಷ್ಠಿಸಿಕೊಳ್ಳುವ ಎರಡನೆಯ ಹೆಜ್ಜೆಯನ್ನು ಪ್ರಾರ್ಥನೆಯ ಯುಕ್ತವಾದ ಭಾಗ್ಯವನ್ನು, ದೇವರೊಂದಿಗೆ ಅನ್ಯೋನ್ಯತೆ ಮತ್ತು ಅವುಗಳಿಗೆ ಹೊಂದಿಕೊಂಡಿರುವ ಪರಿಪೂರ್ಣ ಆನಂದ ಇವುಗಳನ್ನು ಅನುಭವಿಸುವವರು ತೆಗೆದುಕೊಳ್ಳಬೇಕು.

ಎರಡನೆಯ ಹೆಜ್ಜೆಯನ್ನು ತೆಗೆದುಕೊಳ್ಳುವುದರಲ್ಲಿ ಸೋಲುವುದು ದೇವರ ಕೃಪೆಯನ್ನು (ನೀತಿನಿರ್ಣಯವನ್ನು) ಹೊಂದಿಕೊಳ್ಳಲು ವ್ಯರ್ಥ ವಿಫಲತೆಯ ಪ್ರವೃತ್ತಿಯನ್ನು ಅರ್ಥೈಸುತ್ತದೆ – ದೇವರ ಕೃಪೆಯನ್ನು ವ್ಯರ್ಥ ಮಾಡಿಕೊಳ್ಳಬೇಡಿರೆಂದು ಎಚ್ಚರಿಸುತ್ತೇವೆ" (2 ಕೊರಿಂಥ 6:1). ಕೆಲವು ಕಾಲದವರೆಗೆ ಈ ರೀತಿಯಲ್ಲಿ ಪ್ರಾರ್ಥನೆಯ ಆನಂದವನ್ನು ಅನುಭವಿಸಿದವರು, ತಮ್ಮನ್ನು ಕರ್ತನಿಗೆ ಪೂರ್ಣ ಪ್ರತಿಷ್ಠೆಯನ್ನು ಮಾಡಿಕೊಳ್ಳಲು ನಿರಾಕರಿಸಿದಲ್ಲಿ ಅಂಥವರು ಪ್ರಾರ್ಥನೆಯ ಬಗ್ಗೆ ಯೋಗ್ಯರೀತಿಯ ಶಂಕೆಯನ್ನು ತಾಳುತ್ತಾರೆ – ನಿರಂತರವಾಗಿ ದೈವಿಕ ಸೌಕರ್ಯವನ್ನು ಪಡಕೊಳ್ಳುವುದು ಮತ್ತು ಹೆಚ್ಚಿನದನ್ನು ಬೇಡಿಕೊಳ್ಳುವುದು ಸರಿಯಲ್ಲ ಎಂಬ ಭಾವನೆಯನ್ನು ಹೊಂದುತ್ತಾರೆ ಮತ್ತು ಇದರೊಂದಿಗೆ ಅವರ ಹೃದಯಗಳನ್ನು ಕರ್ತನಿಗೆ ಪ್ರತಿಷ್ಠಿಸಿಕೊಳ್ಳುವ ತಮ್ಮ ಸಮಂಜಸವಾದ ಸೇವೆಯನ್ನು ತಡೆಹಿಡಿಯುತ್ತಾರೆ. ಪರಿಶುದ್ಧ ಗ್ರಂಥಗಳಲ್ಲಿ ಪ್ರತಿಷ್ಠೆಯ ವರ್ಗವನ್ನು ಕರ್ತನ ಕನ್ಯೆ ಎಂಬುದಾಗಿ ವಿಶ್ಲೇಷಿಸಿರುವುದರಿಂದ ಸಾದಾರಣವಾಗಿ ವಿಶ್ವಾಸಿ ಮನೆಯವರಿಗೆ ಪರಿಗ್ರಹಣ ಮಾಡಿಕೊಳ್ಳುವ ಸೌಕರ್ಯವು ಲಭ್ಯವಾಗಿತ್ತು. ನೂತನ ಸೃಷ್ಟಿಯು ಕರ್ತನು ಪರಿಗ್ರಹಿಸಿದ ಕನ್ಯೆಯಂತೆ ತಮ್ಮ ಹೃದಯ, ನಾಲಿಗೆ, ಎಲ್ಲಾ ಶಕ್ತಿ ಮತ್ತು ಚೈತನ್ಯವನ್ನು ತನ್ನ ಒಡೆಯನಿಗೆ ಮತ್ತು ಆತನ ಸೇವೆಯಲ್ಲಿ ಶರಣಾಗಿಸಿರುವುದರಿಂದ ಆತನಿಂದ ಆಶೀರ್ವಾದಗಳನ್ನು, ಸೌಕರ್ಯಗಳನ್ನು, ಸಂರಕ್ಷಣೆಯನ್ನು, ಮೇಲ್ವಿಚಾರಿಕೆಯನ್ನು ಮತ್ತು ಆತನು ತಾನು ಪರಿಗ್ರಹಿಸಿದ ಕನ್ಯೆಗೆ (Bride) ಸಂತೋಷವಾಗಿ ವಾಗ್ದಾನ ಮಾಡಿದ ಬಹುಮಾನಗಳನ್ನು ಅವರು ಸಮಂಜಸವಾಗಿ, ಕೃತಜ್ಞತಾಪೂರ್ವಕವಾಗಿ ಅಂಗೀಕರಿಸಿ ಕೊಳ್ಳುತ್ತಾರೆ.

ಒಬ್ಬ ಕನ್ಯೆಯು ತನ್ನ ಕನ್ಯಾರ್ಥಿಯನ್ನು ತಿರಸ್ಕರಿಸಿ ಆತನಿಗೆ ತನ್ನ ಕೈ ಮತ್ತು ಹೃದಯವನ್ನು ನೀಡಲು ನಿರಾಕರಿಸಿದ ಮೇಲೆ ನಂತರದಲ್ಲಿ ಆತನು ಈ ಮೊದಲೆ ನೀಡ ಬಯಸಿದ್ದ ತನ್ನ ಪಾಲನೆಗೆ, ಸಂರಕ್ಷಣೆಗೆ, ಆಶೀರ್ವಾದ ಮತ್ತು ಸೌಕರ್ಯಗಳಿಗೆ ಹಾಗೂ ಸಂತೋಷಗಳಿಗೆ ಆತನೆಡೆಗೆ ಯುಕ್ತವಾಗಿ ನೋಡಲಾರಳೋ, ಅದರಂತೆ ದೇವರ ಕೃಪೆಯನ್ನು ತಮ್ಮ ಎಲ್ಲವುಗಳನ್ನು ಕರ್ತನಿಗೆ ಸಮರ್ಪಿಸಲು ನಿರಂತರವಾಗಿ ತಿರಸ್ಕರಿಸಿದವರು, ಯಾವುದೇ ಯೋಗ್ಯತೆಯಿಂದ ಪುನಃ ಆತನೆಡೆಗೆ ನೋಡಲಾರರು ಮತ್ತು ತಮ್ಮ ಶ್ರದ್ಧಾಪೂರ್ವಕವಾಗಿ, ಪ್ರತಿಷ್ಠಿಸಿಕೊಂಡವರಾಗಿ ತನ್ನನ್ನು ಪ್ರೀತಿಸಿದವರಿಗೆ ಮಾಡಿದ ಆಶೀರ್ವಾದಗಳನ್ನು ಹೊಂದಿಕೊಳ್ಳಲಾರರು. ಕರ್ತನ ಕೈಗಳಿಂದ ಕೇವಲ ಪಾಪ ಪರಿಹಾರವನ್ನು ಅಂಗೀಕರಿಸಿದವರಿಗೂ ಮತ್ತು ಆ ಸಮರ್ಥನೆಯನ್ನು ಉಪಯೋಗಿಸಿಕೊಂಡು ತಮ್ಮನ್ನು ಕರ್ತನಿಗೆ ಪ್ರತಿಷ್ಠಿಸಿಕೊಂಡು ಆತನೊಂದಿಗೆ ಪೂರ್ಣವಾದ ಸಂಬಂಧ ಇಟ್ಟುಕೊಂಡವರಿಗೂ ಇರುವ ವ್ಯತ್ಯಾಸವನ್ನು ಸರಿಯಾಗಿ ಗ್ರಹಿಸಬೇಕು. ನಂಬಿಗಸ್ತರಾದ ವಿವಿಧ ವರ್ಗಗಳ ನಡುವೆ ದೈವಿಕವಾಗಿ ಎಳೆಯಲ್ಪಟ್ಟ ಈ ಗೆರೆಗಳು ಹೆಚ್ಚು ಸ್ಪಷ್ಟವಾಗಿ ಯಾರೂ ಗ್ರಹಿಸಿಲ್ಲವೆಂಬುದು ಎಂಬುದು ಸತ್ಯ. ವಿಶ್ವಾಸಿಗಳಿಗೂ ಅವಿಶ್ವಾಸಿಗಳಿಗೂ ಇರುವ ವ್ಯತ್ಯಾಸವನ್ನು ತೀವ್ರವಾಗಿ ತೀರ್ಮಾನಿಸಬೇಕು. ಮೊದಲಿನ ಎಲ್ಲರನ್ನು "ವಿಶ್ವಾಸದ ಮನೆಯ" ಸಹೋದರರು ಎಂದು ಪರಿಗಣಿಸಬೇಕು. ಆದರೆ ಎರಡನೆಯವರನ್ನು ಹಾಗಲ್ಲ. ಪುನಃ ತಮ್ಮ ಪ್ರತಿಷ್ಠೆಮಾಡಿಕೊಂಡಿರುವ ವಿಶ್ವಾಸಿಗಳಿಗೂ, ಪ್ರತಿಷ್ಠೆ ಮಾಡಿಕೊಳ್ಳದವರಿಗೂ ಇರುವ ವ್ಯತ್ಯಾಸವನ್ನು ಸ್ಪಷ್ಟವಾಗಿ ಕಂಡುಹಿಡಿಯಬೇಕು ಮತ್ತು ಮೊದಲಿನವರನ್ನು ಸಭೆಯೆಂದು, ನೂತನ ಸೃಷ್ಟಿಯೆಂದು ರಾಜವಂಶಯಾಜಕ ವರ್ಗದವರೆಂದು ಗ್ರಹಿಸಬೇಕು. ಇವರಿಗೆ ಮಿಗಿಲಾದ ಮತ್ತು ಅಮೂಲ್ಯವಾದ

ವಾಗ್ದಾನಗಳು ಸಲ್ಲುತ್ತವೆ. ಈ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಗ್ರಹಿಸಿಕೊಂಡಾಗ ಇವುಗಳು ಈ ಕೆಳಗಂಡಂತೆ ಪ್ರಯೋಜನಕಾರಿಯಾಗಿವೆ

(1) ಅನ್ವೇಷಣೆಗಳ ಮೂಲಕ ಹೆಚ್ಚಾದುದನ್ನು ಅನುಸರಿಸುವಂತೆ ಮತ್ತು ಹೆಚ್ಚಾದ ಸುಸ್ಪಷ್ಟತೆಗೆ ನಡಿಸುವಲ್ಲಿ ಈ ಪ್ರಪಂಚಕ್ಕೆ ಪ್ರಯೋಜನಕಾರಿಯಾಗಿದೆ

(2) ಪ್ರತಿಷ್ಠಿಸಿಕೊಂಡಿಲ್ಲದ ವಿಶ್ವಾಸಿಗಳಿಗೂ ಅನುಕೂಲಕಾರಿಯಾಗಿದೆ. ಅವರು ಪೂರ್ಣ ಪ್ರತಿಷ್ಠೆಗೆ ಮುಂದಾಗದ ಹೊರತು ಅವರುಗಳು ಈ ಪ್ರಪಂಚದ ಯಾವುದೇ ಅರ್ಥದಲ್ಲಿ ಮುಂಬರುವ ಮಹಿಮೆಗಳಲ್ಲಾಗಲೀ, ಅಥವಾ ಪ್ರಸ್ತುತ ಸೌಕರ್ಯ ಮತ್ತು ಸಂತೋಷಗಳಲ್ಲಿ ಇತರ ಭಕ್ತ ಜನರೊಡನೆ ಜೊತೆ ವಾರಸುದಾರರಾಗಲು ಸಾಧ್ಯವಿಲ್ಲ ಎಂಬ ತಿಳುವಳಿಕೆಗೆ ಅವರನ್ನು ನಡೆಸುತ್ತದೆ. (3) ನಾವು ನಂಬುವಂಥವುಗಳು ಪ್ರತಿಷ್ಠೆಗೊಳ್ಳದವರಿಗೆ ಸಹಾ ಉತ್ತೇಜನಾಕರವಾದ ಪರಿಣಾಮವನ್ನುಂಟುಮಾಡುತ್ತದೆ ಮತ್ತು ಅವರು ತಮ್ಮನ್ನು ಪ್ರತಿಷ್ಠಿಸಿಕೊಳ್ಳದೆ ಹೇಗಾದರೂ ಕ್ರಿಸ್ತನನ್ನು ನಂಬುವುದರಿಂದ ತಮ್ಮನ್ನು ದೇವರ ಮಕ್ಕಳಾಗುವಂತೆ ಮಾಡುತ್ತದೆ ಮತ್ತು ಪ್ರಸ್ತುತ ಮತ್ತು ಮುಂದಣ ಜೀವಿತದ ಮೇಲೆ ಹಿಡಿತವುಳ್ಳ ಶ್ರೀಮಂತವಾದ ದೈವಿಕ ವಾಗ್ದಾನಗಳಲ್ಲಿ ಪಾಲುತೆಗೆದುಕೊಳ್ಳುವುದು ಸಾಧ್ಯ ಎಂಬ ತಮ್ಮ ಆಧಾರವಿಲ್ಲದ ಊಹೆಗಳನ್ನು ತೊರೆದುಬಿಡುವ ಸಕರಾತ್ಮಕವಾದ ನಿರ್ಣಯವನ್ನು ಕೈಗೊಳ್ಳುವಂತೆ ನಡಿಸುತ್ತದೆ.

ಜಜ್ಜಿದ ದಂಟನ್ನು ನಾವು ಮುರಿಯುವುದಿಲ್ಲ ಮತ್ತು ಆರಿಹೋಗುತ್ತಿರುವ ದೀಪವನ್ನು ನಂದಿಸುವುದಿಲ್ಲ; ಆದರೆ ಜಜ್ಜಿದ ದಂಟು ದೇವರ ಪ್ರಸ್ತುತ ಅಥವಾ ಮುಂದಣ ಆಶೀರ್ವಾದಗಳಲ್ಲಿ ಯುಕ್ತವಾಗಿ ಪಾಲುಹೊಂದಬೇಕಾದರೆ, ಅವರು ತಮ್ಮ ಮೇಲೆ ದೈವಿಕ ಷರತ್ತಿಗನುಸಾರವಾಗಿ ದೈವಿಕಭಾಗ್ಯವನ್ನು ಗಳಿಸಬೇಕು-ಅವರು ಜಜ್ಜಿದ ದಂಟಾಗಿರುವುದು ಕೊನೆಗೊಳ್ಳಬೇಕಾದರೆ ಮತ್ತು ಕರ್ತನ ಸೇವೆಯಲ್ಲಿ ಉಪಯುಕ್ತವಾಗಬೇಕಾದರೆ ಅವರು ತಮ್ಮನ್ನು ಸಂಪೂರ್ಣವಾಗಿ ಪ್ರತಿಷ್ಠಿಸಿಕೊಳ್ಳಬೇಕು. ಉರಿಯುತ್ತಿರುವ ನಂಬಿಕೆಯವರನ್ನು ನಾವು ನಂದಿಸುವುದಿಲ್ಲ, ಆದರೆ ಅದು ಬೆಂಕಿಯ ಜ್ವಾಲೆಯಾಗುವಂತೆ ಪವಿತ್ರವಾದ ಪ್ರೀತಿಯೆಂಬ ಗಾಳಿಯನ್ನು ಬೀಸುತ್ತೇವೆ. ಇದು ದೈವಿಕ ಆಹ್ವಾನಕ್ಕೆ ಅನುಸಾರವಾಗಿ ಪೂರ್ಣವಾದ ಸ್ವಯಂ ಪ್ರತಿಷ್ಠೆಗೆ, ಸಂಪೂರ್ಣವಾದ ತ್ಯಾಗಕ್ಕೆ ಪ್ರೇರೇಪಿಸುತ್ತದೆ. ಈ ರೀತಿಯಲ್ಲಿ ಪ್ರಸ್ತುತವಾದ ಮತ್ತು ಮುಂಬರಲಿರುವ ಸಂತೋಷದಲ್ಲಿ ಭಾಗವಹಿಸುವಂತೆ ಮಾಡುತ್ತದೆ.

ನಾವೀಗಾಗಲೇ ಗಮನಿಸಿರುವಂತೆ, ನಂಬಿಗಸ್ತರಗಳ ಮಕ್ಕಳು ದೈವಿಕ ನೀತಿನಿರ್ಣಯದ ಕೃಪೆಯಲ್ಲಿ ಭಾಗಿಗಳಾಗಿದ್ದಾರೆಂದು ಎಣಿಸಲ್ಪಟ್ಟಿದ್ದಾರೆ ಎಂದು ಅಪೊಸ್ತಲನು ಪ್ರಕಟಿಸಿದ್ದಾನೆ. ಅವರು ಇನ್ನುಮುಂದೆ ಅಪವಿತ್ರರಲ್ಲ, ಅಶುದ್ಧರಲ್ಲ, ಆದರೆ ಪ್ರಾಯೋಗಿಕವಾಗಿ ನೀತಿನಿರ್ಣಯ ಹೊಂದಿದ್ದಾರೆ. ಈ ಸ್ಥಿರವಾದ ನಿರ್ಣಯವು ಮತ್ತು ದೈವಿಕ ಪಾಲನೆ ಮತ್ತು ಅನುಗ್ರಹಗಳೊಂದಿಗಿನ ಇದರ ಸಂಬಂಧವು ಜನನದಿಂದ ವಿವೇಕಯುಕ್ತ ವಯಸ್ಸಿನವರೆಗೆ ಮುಂದುವರೆಯುತ್ತದೆ; ಅಂತಹ ಮಕ್ಕಳು ಸ್ಪಷ್ಟವಾಗಿ ಪ್ರಾರ್ಥನೆಯ ವಿಷಯದಲ್ಲಿ ನೀತಿನಿರ್ಣಯ ಹೊಂದಿದವರೊಡನೆ ಯುಕ್ತವಾಗಿ ಸೌಕರ್ಯಗಳನ್ನು ಹೊಂದಿಕೊಳ್ಳುತ್ತಾರೆ ಮತ್ತು ಅದೇ ಪ್ರಮಾಣದಲ್ಲಿ ಉಂಟಾಗುವ ಸಂತೋಷ ಮತ್ತು ಆಶೀರ್ವಾದಗಳನ್ನು ಹೊಂದಿಕೊಳ್ಳುತ್ತಾರೆ. ಬಾಲ್ಯಾವಸ್ಥೆಯ ಪ್ರಾರಂಭದಿಂದಲೇ ಅವರಿಗೆ ತಮ್ಮ ತಂದೆತಾಯಿಗಳ ದೇವರು ತಮ್ಮ ದೇವರೆಂದು ಗೌರವಿಸಲು, ಕಲಿಸಬೇಕು. ತಂದೆತಾಯಿಗಳು ಕ್ರಿಸ್ತನ ಮೂಲಕ ದೇವರಲ್ಲಿ ಸ್ಥಿರವಾಗಿರುವಂತೆ ಮಕ್ಕಳು ಸಹಾ ಪರೋಕ್ಷವಾಗಿ ತಂದೆತಾಯಿಗಳ ಮೂಲಕವಾಗಿ ಕ್ರಿಸ್ತನೊಂದಿಗೆ ಸ್ಥಿರವಾಗಿದ್ದಾರೆ ಎಂಬ ತಿಳುವಳಿಕೆಯನ್ನು ಅವರಿಗೆ ಆರಂಭದ ಪ್ರಾಯದಲ್ಲಿಯೇ ನೀಡಬೇಕು. ಪ್ರತಿಯೊಂದು ಕ್ರೈಸ್ತ ಮನೆಯಲ್ಲಿನ ಪ್ರತಿಷ್ಠೆ ಹೊಂದಿದ ತಂದೆ ಅಥವಾ ತಾಯಿ ಇಲ್ಲವೇ ತಂದೆತಾಯಿಗಳು ಒಂದು ಅರ್ಥದಲ್ಲಿ ತಾವು ತಮ್ಮ ಕುಟುಂಬದ ಯಾಜಕರಾಗಿದ್ದೇವೆಂದು ಗ್ರಹಿಸಬೇಕು ಮತ್ತು ಮಗುವು ಕರ್ತನಿಗೆ ಪ್ರಾರ್ಥನೆಮಾಡುವಂತೆ ಸರಿಯಾದ ರೀತಿಯಲ್ಲಿ ಅದನ್ನು ಪ್ರೋತ್ಸಾಹಿಸಬೇಕು. ಕುಟುಂಬದ ಹಿತಾಸಕ್ತಿಗಳೂ ಪ್ರತಿಷ್ಠಿಸಿಕೊಂಡ ನೂತನ ಸೃಷ್ಟಿಯ ಸದಸ್ಯರಾದ ತಂದೆ ಅಥವಾ ತಾಯಿಗಳ ಕಾರಣ ದೈವಿಕ ಮೇಲ್ವಿಚಾರಣೆಗೆ ಒಳಗಾಗಿದೆ ಎಂಬ ಪಾಠವನ್ನು ನಿರ್ಲಕ್ಷಿಸಬಾರದು. ಮಗುವು ತನ್ನ ಮನಸ್ಸು ಮತ್ತು ನಿರ್ಣಯಗಳು ಸರಿಯಾಗಿ ವಿಸ್ತರಿಸಿಕೊಂಡು ಅನುಮತಿಸುವಾಗ ತನ್ನನ್ನು ದೇವರಿಗೆ ಸಂಪೂರ್ಣವಾಗಿ ಪ್ರತಿಷ್ಠಿಸುವ ಕಾಲವನ್ನು ಯೋಗ್ಯವಾಗಿ ಪ್ರತೀಕ್ಷಿಸುವಂತೆ, ಮತ್ತು ಆ ರೀತಿಯಾಗಿ ವಾಗ್ದಾನಮಾಡಿದ ಸೌಭಾಗ್ಯ ಮತ್ತು ಸಂತೋಷಗಳನ್ನು ಅನುಭವಿಸುವಂತಾಗಲು ಅದಕ್ಕೆ ಸರಿಯಾದ ರೀತಿಯಲ್ಲಿ ಕಲಿಸಿಕೊಡಬೇಕು.

ಮೇಲಿನ ವಾಕ್ಯ ಭಾಗದಲ್ಲಿ ಕ್ರಿಸ್ತನಲ್ಲಿನ ನೂತನ ಸೃಷ್ಟಿಗಳು ಲೌಕಿಕ ಸಂಗತಿಗಳನ್ನು ಬಯಸಬಾರದೆಂದು, ಅವುಗಳ ಬಗ್ಗೆ ಆಸಕ್ತಿವಹಿಸುವುದಾಗಲೀ, ಪ್ರಾರ್ಥಿಸುವುದಾಗಲೀ ಮಾಡಬಾರದೆಂದು ಬೋಧಿಸಲಾಗಿದೆ – ನಾವು ಏನು ಊಟ ಮಾಡಬೇಕು? ಏನು ಕುಡಿಯಬೇಕು, ಯಾವ ರೀತಿಯ ಉಡುಪನ್ನು ಧರಿಸಬೇಕು ಎಂಬಿವುಗಳ ಬಗ್ಗೆ. ಆದರೆ ಇವುಗಳ ಬಗ್ಗೆ ತಂದೆಯಾದ ದೇವರ ವಿವೇಕ ಮತ್ತು ಪ್ರೀತಿಯಲ್ಲಿ ನಂಬಿಕೆ ಇರಿಸುವ ಬಗ್ಗೆ ಅವರುಗಳಿಗೆ ಸೂಚಿಸಿರುವುದೇನೆಂದರೆ, ತಂದೆಯು ಒಂದು ವಿಷಯದಲ್ಲಿ ಪ್ರಾರ್ಥಿಸುವ ಬಗ್ಗೆ ಸಂತೋಷಿಸುತ್ತಾನೆ ಮತ್ತು ಇದರ ಬಗ್ಗೆ ಆತನು ಅವರ ಬಿನ್ನಹಗಳಿಗೆ ಉತ್ತರಿಸಲು ಹೆಚ್ಚಾಗಿ ಸಂತೋಷಿಸುತ್ತಾನೆ. ಅವರು ವಿಶೇಷವಾಗಿ ಬಯಸಬೇಕಾಗಿರುವ ಮತ್ತು ಪ್ರಾರ್ಥಿಸಬೇಕಾಗಿರುವ ಒಂದು ಸಂಗತಿ ಯಾವುದೆಂದರೆ ದೇವರ ಆತ್ಮ, ಕ್ರಿಸ್ತನ ಆತ್ಮ, ಸತ್ಯದ ಆತ್ಮ, ಸ್ವಸ್ಥ ಬುದ್ಧಿಯ ಆತ್ಮ, ಪ್ರೀತಿಯ ಆತ್ಮ' ಈ ಬಗ್ಗೆ ಕರ್ತನ ಮಾತುಗಳೇನೆಂದರೆ "ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೇಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪವಿತ್ರಾತ್ಮ ವರವನ್ನು ಕೊಡುವನಲ್ಲವೇ ?" (ಲೂಕ 11:13)

ನಮ್ಮ ಎಲ್ಲಾ ಬಿನ್ನಹಗಳಿಗೆ ಉತ್ತರ ಸಿಗಬೇಕಾದರೆ ಅವುಗಳ ತಳಹದಿ ಏನಾಗಿರಬೇಕು ಎಂಬುದರ ಬಗ್ಗೆ ನಮಗೆ

ಇಲ್ಲಿ ನಿಶ್ಚಿತವಾದ ಮಾಹಿತಿ ದೊರೆಯುತ್ತದೆ. ಆದುದರಿಂದ ನಾವು ಅಕ್ರಮವಾದ ಯಾವುದನ್ನೂ ಕೇಳಿಕೊಳ್ಳದಂತೆ ಪ್ರಾರ್ಥಿಸಬೇಕು. ನಮ್ಮ ಒಲಮೆಯು ಮೇಲಿನವುಗಳ ಮೇಲೆ ನೆಟ್ಟಿರಬೇಕೇ ಹೊರತು ಕೆಳಗಿರುವವುಗಳ ಮೇಲೆ ಅಲ್ಲ – ನಮ್ಮ ಈ ಲೋಕದ ವಸ್ತ್ರಗಳಿಗಿಂತ ಹೆಚ್ಚಾಗಿ ಕ್ರಿಸ್ತನ ನೀತಿಯೆಂಬ ವಸ್ತ್ರ ಮತ್ತು ನಮ್ಮ ಮುಂದಣ ಮಹಿಮಾ ವಸ್ತ್ರ, ನಾವು ನಮ್ಮ ಕರ್ತನಂತೆ ಯಾವಾಗ ಆಗುತ್ತೇವೆ ಮತ್ತು ಯಾವಾಗ ಅವನಿರುವಂತೆ ಅವನನ್ನು ನೋಡುತ್ತೇವೆ ಎಂಬಿವುಗಳು ಹೆಚ್ಚು ಅವಶ್ಯ. ನಮ್ಮ ವಾತ್ಸಲ್ಯವು ಆತ್ಮೀಕ ಆಹಾರದ ಬಗ್ಗೆ, ಪರಲೋಕದಿಂದ ಇಳಿದು ಬಂದ ಜೀವಕರವಾದ ರೊಟ್ಟಿಯ ಮೇಲೆ, ಮತ್ತು ಕ್ರಿಸ್ತನು ಕೇಂದ್ರವೂ ತಿರುಳೂ ಆಗಿರುವ ದೇವರು ವಾಗ್ದಾನ ಮಾಡಿದವುಗಳ ಬಗ್ಗೆ ಇರಬೇಕು. ಇವುಗಳನ್ನೇ ನಾವು ಬಯಸಬೇಕು ಮತ್ತು ವಿನಿಯೋಗಿಸಬೇಕು; ನಮ್ಮ ಪ್ರಾರ್ಥನೆಯ ತಾತ್ಪರ್ಯವೂ ಇವೇ ಆಗಿರಬೇಕು. ಈ ರೀತಿಯಾಗಿ ನಮ್ಮ ಕಾಯುವಿಕೆಗಳು, ಪ್ರಾರ್ಥಿಸುವುದು ಮತ್ತು ಪ್ರತಿನಿತ್ಯದ ಕೋರಿಕೆಗಳು ಇವೆಲ್ಲವೂ ಪೂರ್ಣವಾಗಿ ಹೊಂದಿಕೆಯಾಗುತ್ತವೆ. ಅದೂ ಅಲ್ಲದೆ, ನಮ್ಮ ನೂತನ ಸೃಷ್ಟಿಗಳು ಮತ್ತು ದೈಹಿಕವಾಗಿ ನಮ್ಮ ಪ್ರಿಯರಾದವರಿಗೆ, ಮತ್ತು ಈ ಲೋಕದ ಎಲ್ಲಾ ಕುಟುಂಬಗಳಿಗೆ ಇರುವ ದೈವಿಕ ಅನುಗ್ರಹದ ಉದ್ದ, ಅಗಲ, ಎತ್ತರ ಮತ್ತು ಆಳ ಇವುಗಳು ತಿಳಿದ ಸಮಯದಿಂದ ಕೋರಿಕೆಗಳ ಸ್ಥಾನವನ್ನು ಹೆಚ್ಚಾಗಿ ವಂದನಾರ್ಪಣೆಯು ತೆಗೆದುಕೊಳ್ಳಬೇಕು. ದೇವರು ಈಗಾಗಲೇ ವಾಗ್ದಾನ ಮಾಡಿರುವುದಕ್ಕಿಂತ ಹೆಚ್ಚಾದದ್ದನ್ನು ನಾವೇನು ಬಯಸಬಹುದು?

ಖಂಡಿತವಾಗಿಯೂ ನಾವು ನೂತನ ಸೃಷ್ಟಿಯವರಿಗೆ ವಾಗ್ದಾನ ಮಾಡಿರುವ ಭವಿಷ್ಯದಲ್ಲಿನ ಮಹಿಮೆಗಿಂತ ಹೆಚ್ಚಾಗಿ ಏನನ್ನೂ ಕೇಳಿಕೊಳ್ಳಲು ಸಾಧ್ಯವಿಲ್ಲ; ಅಥವಾ ನಾವು ಅದೇ ವರ್ಗದವರ ಪ್ರಸ್ತುತ ಆನಂದದ ಬಗ್ಗೆ ಹೆಚ್ಚೇನೂ ಕೇಳಿಕೊಳ್ಳಲಾಗದು. ವಿವೇಚನೆಯು ಕಲ್ಪನೆಮಾಡಬಹುದಾದ ಪ್ರತಿಯೊಂದು ಅನುಗ್ರಹವೂ, ಪ್ರತಿಯೊಂದು ಬೇಕುಗಳು, ಪ್ರತಿಯೊಂದು ಅಗತ್ಯತೆಗಳೆಲ್ಲವೂ ಈಗಾಗಲೇ ನಮಗಾಗಿ ಪೂರ್ವ ನಿರೀಕ್ಷಣೆ ಮಾಡಲಾಗಿದ್ದು ಅವುಗಳನ್ನು ಒದಗಿಸಲಾಗಿದೆ –ತೆಗೆದುಕೊಳ್ಳುವುದಕ್ಕಾಗಿ ನಮಗೆ ನೀಡಲಾಗಿದೆ. ಯಾವ ರೀತಿ ತೆಗೆದುಕೊಳ್ಳುವುದು ಹಾಗೂ ಈ ದೈವಾನುಗ್ರಹವನ್ನು ನಮ್ಮದಾಗಿಸಿಕೊಳ್ಳುವುದು ಎಂಬುದರ ಬಗ್ಗೆ ವಿವೇಕದ ಕೊರತೆ ನಮಗಿದೆ. ಆದಕಾರಣ, ಕೃತಜ್ಞತೆ ಅರ್ಪಿಸುವುದರಿಂದ ನಾವು ಕೇವಲ ನಮ್ಮ ಸಂತೋಷವು ಪರಿಪೂರ್ಣವಾಗಿದ್ದು ನಾವು ಅದರಲ್ಲಿ ಭಾಗವಹಿಸುವಂತಾಗಲು ಕೇಳಿಕೊಳ್ಳುತ್ತೇವೆ. ಆದುದರಿಂದ ನಮ್ಮ ಬೇಡಿಕೆಗಳು ಪವಿತ್ರಾತ್ಮ ಮತ್ತು ಮೇಲಿನಿಂದ ಬರುವ ಜ್ಞಾನ ಇವುಗಳಿಂದ ನಮ್ಮನ್ನು ತುಂಬಿಸುವ ಬಗ್ಗೆ ಇರಬೇಕಾಗುತ್ತದೆ.

ದೇವರ ಅನುಗ್ರಹವು ಈಗಾಗಲೇ ವ್ಯವಸ್ಥೆ ಮಾಡಿರುವುದಕ್ಕಿಂತ ಹೆಚ್ಚಾಗಿ ನಾವು ಈ ಪ್ರಪಂಚದ ಪರವಾಗಿ ಮತ್ತೇನು ಬೇಡಬಹುದು? ಏನೂ ಇಲ್ಲ! ದೇವರ ವಾಕ್ಯದಲ್ಲಿ ವಾಗ್ದಾನಮಾಡಿರುವ ಭವ್ಯವಾದ "ಸರಿಪಡಿಸುವ (ಪುನಃವಶ) ಸಮಯವು" (times of Restitution) ಅತ್ಯಂತ ವಿವೇಕಿಗಳು ಎಂದೂ ಮಾಡದ ಅತ್ಯಂತ ವೈಭವಪೂರ್ವ ನಿರೀಕ್ಷಣೆ ಅಥವಾ ನಿರೀಕ್ಷೆ ಇವುಗಳನ್ನು ನೆರವೇರಿಸುತ್ತದೆ. ಆದುದರಿಂದ, ನಾವು ದೇವರನ್ನು ವಂದಿಸಬಹುದು ಮತ್ತು ಆತನ ಒಳ್ಳೆಯತನವನ್ನು ಒಪ್ಪಿಕೊಳ್ಳಬಹುದು, ಅದರೊಂದಿಗೆ ಸಹಕರಿಸಲು ಬಯಸಬಹುದು ಮತ್ತು ನಮ್ಮ ವಿವೇಕದ ಅಗತ್ಯತೆಯನ್ನು ಗ್ರಹಿಸಿಕೊಳ್ಳಬಹುದು. ಆ ಕಾರಣದಿಂದಲೇ, ನಾವು ದೇವರ ಪವಿತ್ರಾತ್ಮ ಮತ್ತು ಶಕ್ತಿಯನ್ನು –"ಮೇಲಿನಿಂದ ಬರುವ ಜ್ಞಾನ" ಆಮಂತ್ರಿಸುವುದು. "ನಿಮ್ಮಲ್ಲಿ ಯಾರಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ, ಅದು ಅವನಿಗೆ ದೊರೆಯುವುದು" (ಯಾಕೋಬ 1:5). ಈ ಜ್ಞಾನದಿಂದ ನಾವು ನಮ್ಮ ನಡತೆಯನ್ನು ಸರಿಪಡಿಸಿ ಕೊಳ್ಳಬಹುದಾಗಿದೆ. ಇತರರಿಗೆ ಸಹಾಯವಾಗುವ ರೀತಿಯಲ್ಲಿ ಮಾತನಾಡಬಹುದು ಮತ್ತು ಕಾರ್ಯವೆಸಗಬಹುದು, ಮತ್ತು ಈ ದೆಸೆಯಲ್ಲಿಯೇ ನಮ್ಮ ಪ್ರಾರ್ಥನೆಗಳು ಇರಬೇಕು, ನಾವು ದೇವರೊಂದಿಗೆ ಆತನು ಈಗಾಗಲೇ ಗುರುತಿಸಿರುವ ಆತನ ಉದಾರವಾದ, ಪರೋಪಕಾರದ ಮಾರ್ಗದಲ್ಲಿ ಸಹಕರಿಸಬೇಕು. ಇದಕ್ಕೂ ಉತ್ತಮವಾದುದನ್ನು ಕೇಳಿಕೊಳ್ಳುವುದು ಅಸಂಬದ್ಧ.

ದೇವರ ಸನ್ನಿಧಿಗೆ ಪ್ರವೇಶಾಧಿಕಾರ ಪಡಕೊಳ್ಳುವ ಈ ಮಹತ್ತ್ವವಾದ ಭಾಗ್ಯವು, ವಿಶ್ವಾಸದಿಂದ ಮಹಾ ಪವಿತ್ರ ಸ್ಥಾನವನ್ನು ಪ್ರವೇಶಿಸುವುದು, ಆತನ ಕೃಪಾಸನವನ್ನು ಸಮೀಪಿಸುವುದು, ಆತನ ಕರುಣೆಯನ್ನು ಹೊಂದಿಕೊಳ್ಳುವುದು ಮತ್ತು ಅಗತ್ಯದ ಎಲ್ಲಾ ಸಮಯಗಳಲ್ಲಿ ಸಹಾಯಗಳನ್ನು ಕಂಡುಕೊಳ್ಳುವುದು ಇವುಗಳನ್ನು ನಮಗೆ ಸುತ್ತುವರಿದಿರುವ ವಿವಿಧ ಪರಿಸ್ಥಿತಿಗಳಿಗೆ ಹೊಂದಿಸಿಕೊಳ್ಳಬಹುದು.

ನಾವು ವೈಯುಕ್ತಿಕವಾಗಿ ಕರ್ತನೊಂದಿಗಿರುವುದು ಮತ್ತು ಆತನ ಅನ್ಯೋನತೆಯನ್ನು ಬಯಸುವುದು ಇವುಗಳು ನಮ್ಮ ವ್ಯಕ್ತಿಗತ ಅನುಕೂಲತೆಗಳಿಗಾಗಿ; ಆತನ ಕರುಣೆಯಿಂದ ಆತನೊಂದಿಗಿನ ಈ ಅನ್ಯೋನತೆಯು, ಚಂಚಲಗೊಳಿಸುವ ಸಂಗತಿಗಳಿಂದ ಬೇರೆಯಾಗಿರುವುದು ಇವುಗಳಲ್ಲಿ ಇತರರ ಸಹವಾಸದಿಂದ ದೂರವುಳಿದಾಗ ಮಾತ್ರವೇ ಆನಂದಿಸಬಹುದು. ಎಲ್ಲಿ ಇದು ಅಸಾಧ್ಯವಾಗುವುದೋ, ನಮ್ಮ ಮೊಣಕಾಲುಗಳನ್ನೂರುವ ಅವಕಾಶಗಳು ಎಲ್ಲಿ ಬಾರದಿರುವುದೋ ಮತ್ತು ಎಲ್ಲಿ ನಮ್ಮ ಸ್ವರಗಳನ್ನು ಪಿಸುಗುಟ್ಟುವಷ್ಟಾದರೂ ಏರಿಸಲಾಗದೋ ಅಲ್ಲಿ ನೂತನ ಸೃಷ್ಟಿಗಳು ಮಾನಸಿಕವಾಗಿ ತಮ್ಮ ತಂದೆಯೊಂದಿಗೆ ಅನ್ಯೋನ್ಯತೆ ಹೊಂದುವ ಭಾಗ್ಯವನ್ನು ಪಡಕೊಂಡಿದ್ದಾರೆ. ರಸ್ತೆಯ ಮೇಲಿರುವಾಗ, ಗೊಂದಲಗಳು, ತುಮುಲಗಳು ಸುತ್ತುವರೆದಿರುವಾಗ, ಹೃದಯವು ತನ್ನಷ್ಟಕ್ಕೇ ಮೇಲಕ್ಕೆ ಎತ್ತಲ್ಪಟ್ಟು ಕೃಪಾಸನದಿಂದ ಜ್ಞಾನ ಮತ್ತು ಶಕ್ತಿಯನ್ನು ಬೇಡಿಕೊಳ್ಳುವುದು. ಈ ಭಾಗ್ಯಗಳು ಎಷ್ಟೊಂದು ಆಶೀರ್ವಾದಕರವಾದವುಗಳು! ಇವನ್ನು ಹೆಚ್ಚಾಗಿ ಉಪಯೋಗಿಸಿಕೊಳ್ಳುವವರು ಇವುಗಳಲ್ಲಿ ಹೆಚ್ಚಾಗಿ ಆನಂದಿಸುತ್ತಾರೆ. ಅವುಗಳು ಲೌಕಿಕ ಸಂಗತಿಗಳಿಗಿಂತ ಹೆಚ್ಚು ಜನಪ್ರಿಯವಾದಾಗ ಮತ್ತಷ್ಟು ಅಮೂಲ್ಯವಾಗುತ್ತವೆ,

ಕುಟುಂಬ ವಲಯದಲ್ಲಿ ಪ್ರಾರ್ಥಿಸುವುದೆಂದರೆ, ಈ ಲೋಕದಿಂದ ದೂರವಾಗಿ ದೇವರ ಸನ್ನಿಧಿಗೆ "ರಹಸ್ಯವಾದ ಏಕಾಂತ ಕಿರುಕೋಣೆ'ಯಲ್ಲಿ ಹೋಗುವುದು. ಇದು

ಯಾವಾಗಲೂ ಸಾಧ್ಯವಾಗಲಾರದು. ಆದರೆ, ಅವಕಾಶವಿರುವಲ್ಲಿ ಇದನ್ನು ಕಡೆಗಣಿಸಬಾರದು. ಹೀಗಿದ್ದಾಗ್ಯೂ, ಅನುಕೂಲಕರ ಸಂದರ್ಭಗಳು ಒದಗಿ ಬಾರದೇ ಇರುವಾಗ, ನಿಸ್ಸಂದೇಹವಾಗಿ ದೇವರು ಕಾರ್ಯಾಚರಣೆಗಿಂತ ಹೆಚ್ಚಾಗಿ ನಮ್ಮ ಚಿತ್ತವನ್ನು ಗಣನೆಗೆ ತೆಗೆದುಕೊಳ್ಳುತ್ತಾನೆ ಮತ್ತು ಅದೇ ರೀತಿಯಲ್ಲಿ ಆಶೀರ್ವಾದಗಳನ್ನು ದಯಪಾಲಿಸುತ್ತಾನೆ. ಕುಟುಂಬ ವೇದಿಯ ಮತ್ತು ಪ್ರಾರ್ಥನೆಯ ಪ್ರಭಾವವು ದೂಪದೋಪಾದಿಯಲ್ಲಿ ಏರಿ, ಅಲ್ಲಿಂದ ಪರಲೋಕದ ತಂದೆಯಿಂದ ಅಂಗೀಕಾರವಾಗಿ ಆತನ ಕೃಪೆ, ಕರುಣೆ, ಶಕ್ತಿ ಮತ್ತು ಆಶೀರ್ವಾದಗಳ ಸ್ವೀಕೃತಿ ದೊರೆಯುತ್ತದೆ ಮತ್ತು ಇವುಗಳು ಆತನ ಕುಟುಂಬ ಸೇವೆ ಮಾಡುವ ರಾಜವಂಶಸ್ಥ ಯಾಜಕನಿಗೆ ಮಾತ್ರವಲ್ಲ, ಕುಟುಂಬದ ಎಲ್ಲಾ ಸದಸ್ಯರುಗಳಿಗೂ ಹೆಚ್ಚುವರಿ ಆಶೀರ್ವಾದಗಳನ್ನು ತರುವುದು ಖಚಿತ. ದೇವರಲ್ಲಿ ಪೂಜ್ಯ ಭಾವನೆ, ಆತನೆಡೆಗೆ ಜವಾಬ್ದಾರಿ, ಮತ್ತು ಆತನ ಪ್ರೀತಿಯ, ಸಂರಕ್ಷಣಾ ಪಾಲನೆಯ ಗ್ರಹಿಕೆ ಇವುಗಳೂ ಆ ಕುಟುಂಬದೊಡನೆ ದಿನವೆಲ್ಲಾ ಸಾಗುತ್ತವೆ. ಸಾಯಂಕಾಲದಲ್ಲಿ ಮತ್ತೊಮ್ಮೆ ಕುಟುಂಬವಾಗಿ ಕೂಡಿಕೊಂಡು ಆತನ ದೈವಿಕ ಕೃಪೆ ಕರುಣೆಗಳನ್ನು ನೆನಪುಮಾಡಿಕೊಂಡು ವಂದನೆಗಳನ್ನು ಅರ್ಪಿಸುವುದಾದರೆ, ಆ ವಿಧವೆಯ ಪಾತ್ರೆಯಲ್ಲಿ ಎಣ್ಣೆಯು ಬತ್ತದೆ ತುಂಬಿ ಹರಿದಂತೆ (2 ಅರಸು 4: 1–7) ಆಶೀರ್ವಾದಗಳು ಹರಿಯುತ್ತಿರುತ್ತವೆ.

ಕ್ರೈಸ್ತ ಸಭೆಯಲ್ಲಿ ಮಾಡುವ ಪ್ರಾರ್ಥನೆಯು ಕರ್ತನ ಕುಟುಂಬವು ಈ ಲೋಕದಿಂದ ದೂರವಾಗಿ 'ರಹಸ್ಯವಾದ ಏಕಾಂತ ಕಿರುಕೋಣೆ'ಯೊಳಗೆ –ದೇವರ ಸನ್ನಿಧಿಗೆ ಹೋದಂತೆ. ಇದು ಅದರ ಪ್ರಗತಿಗೆ, ಅದರ ಆರೋಗ್ಯಕ್ಕೆ, ಅದರ ಆತ್ಮೀಕ ಬೆಳವಣಿಗೆಗೆ ಬಹಳ ಮಹತ್ವವಾದ ಅಗತ್ಯವಾಗಿದೆ. ಇದನ್ನು ನಿರ್ಲಕ್ಷಿಸಿದಲ್ಲಿ, ಶಕ್ತಿಯ ನಷ್ಟ, ಸೌಕರ್ಯ ಮತ್ತು ಸೇವೆಯ ನಷ್ಟ ಮತ್ತು ಅವಕ್ಕೆ ಅನುರೂಪವಾದ ಸಂತೋಷದ ನಷ್ಟ ಇವುಗಳು ಉಂಟಾಗುತ್ತವೆ. ಬಾಸ್ಟನ್ ದಿನಪತ್ರಿಕೆಯೊಂದರಲ್ಲಿ ಒಂದು ಧಾರ್ಮಿಕ ಕೂಟದ ಬಗ್ಗೆ "ಡಾ॥ ... ಎಂಬುವವರು ಈ ವರೆಗೆ ಬಾಸ್ಟನ್ ಶೋತೃಗಳಿಗೆ ಯಾರೂ ಮಾಡದ ರೀತಿಯಲ್ಲಿ ಅತ್ಯಂತ ಸುಂದರವಾದ ವಾಕ್ಚಾತುರ್ಯದಿಂದ ಕೂಡಿದ ಪ್ರಾರ್ಥನೆಯೊಂದನ್ನು ಮಾಡಿದರು" ಎಂಬ ವರದಿಯ ಬಗ್ಗೆ ನಾವು ಸಂಪೂರ್ಣವಾಗಿ ಅನುಕಂಪಕ್ಕೆ ಹೊರತಾಗಿದ್ದೇವೆ. ಇದರಲ್ಲಿ ದೇವರಿಗೆ ಮಾಡಿದ ಪ್ರಾರ್ಥನೆಗಿಂತ ಹೆಚ್ಚಾಗಿ ಆ ಶೋತೃಗಳಿಗೆ ಮಾಡಿದ ಪ್ರಾರ್ಥನೆಯೇ ಬಹಳ ಹೆಚ್ಚಾಗಿತ್ತು! ದೈವಿಕ ಗ್ರಂಥಗಳು ಕರ್ತನ ಜನರ ನಡುವೆ ಸಾರ್ವಜನಿಕವಾದ ಎಲ್ಲರೂ ಕೇಳಬಹುದಾದ ಪ್ರಾರ್ಥನೆಗಳನ್ನು ಪ್ರೋತ್ಸಾಹಿಸುವುದು ಮಾತ್ರವಲ್ಲ, ಆದರೆ ಅದೇ ಸಮಯದಲ್ಲಿ ಪ್ರಾರ್ಥನೆ ಮಾಡುವವನು ತನ್ನ ಸೇವೆಯ ಸಂಬಂಧದಲ್ಲಿ ಶ್ರೋತೃಗಳನ್ನು ನೆನಪು ಮಾಡಬೇಕು ಮತ್ತು ಆರಾಧನೆಯನ್ನು ನೆರವೇರಿಸುವಾಗ ಅದನ್ನು ಕೇಳಿಸಿಕೊಳ್ಳುವವರು ಸಹಾ ಎಲ್ಲರಿಗೆ ಕೇಳುವಂತಾಗಲೀ, ಅಥವಾ ತನ್ನ ಮನದಲ್ಲಿ "ಆಮೆನ್' ಎಂದು ಹೇಳತಕ್ಕದ್ದಾಗಲಿ. ( 1 ಕೊರಿ. 14: 13–17 )

ಪೌಲನು ನೂತನ ನಗರವೊಂದಕ್ಕೆ ತನ್ನ ಸುವಾರ್ತೆಯೊಂದಿಗೆ "ಪ್ರಾರ್ಥನೆ ಮಾಡುವ ಸ್ಥಳ'ವನ್ನು ಹುಡುಕಿಕೊಂಡು ಹೋಗುವಂತೆ ಮೇಲಿನಿಂದ ಬಂದ ಜ್ಞಾನವೇ ಆತನಿಗೆ ಮಾರ್ಗದರ್ಶನ ಮಾಡಿತು (ಅ.ಕೃ 16:13). ಪ್ರಾರ್ಥನೆ ಮತ್ತು ದೇವರ ಪ್ರೀತಿ ಇವೆರಡೂ ಆತನ ಜನರಲ್ಲಿ ಹೆಚ್ಚಾಗಿ ಅವರ ಸಂತೋಷವು ಪರಿಪೂರ್ಣವಾಗುವಂತೆ ಅವರಲ್ಲಿ ಒಬ್ಬರು ಮತ್ತೊಬ್ಬರಿಗಾಗಿ, ಒಬ್ಬರು ಮತ್ತೊಬ್ಬರೊಡನೆ ಪ್ರಾರ್ಥಿಸುವವರಾದರು. ಹೀಗಿದ್ದಾಗ್ಯೂ ಅನೇಕ ಕೂಟಗಳನ್ನು ಕರ್ತನ ಜನರು ದೇವರ ವಾಕ್ಯಧ್ಯಾನಕ್ಕಾಗಿ ಮತ್ತು ಪ್ರತಿಯೊಬ್ಬರ ಭಕ್ತಿವರ್ಧನೆಗಾಗಿ ನಡಿಸಬಹುದು. ಆದರೂ ಧ್ಯಾನದ ಮೇಲೆ ದೈವಾಶೀರ್ವಾದವನ್ನು ಬೇಡಿಕೊಳ್ಳದೆ ಯಾವುದೇ ಆರಾಧನೆಯು ಯೋಗ್ಯವಾದ ರೀತಿಯಲ್ಲಿ ಪ್ರಾರಂಭವಾಗಿದೆ ಎಂದು ಪರಿಗಣಿಸಬಾರದು ಮತ್ತು ದೇವರನ್ನು ಆತನ ಸೌಭಾಗ್ಯ ಮತ್ತು ಆಶೀರ್ವಾದಗಳಿಗಾಗಿ ವಂದಿಸದ ಹೊರತು ಯಾವುದೇ ಕೂಟವು ಸರಿಯಾಗಿ ಮುಕ್ತಾಯಗೊಂಡಿದೆ ಎಂದೂ ಹೇಳಲಾಗದು. ಆತನ ವಾಕ್ಯದ ಕೃಪೆಯು ಶ್ರದ್ಧಾಪೂರ್ವಕವಾದ ಬಯಕೆಯಿಂದ ಕೇಳಿಸಿಕೊಂಡು ಆತನ ಚಿತ್ತಕ್ಕೆ ವಿಧೇಯರಾಗಿ ಅದರಂತೆ ನಡೆಯ ಬಯಸುವವರಿಗೆ ನಿಜವಾಗಿಯೂ ಆತ್ಮೀಕ ಆಹಾರವಾಗಿದೆ.

## ನಂಬಿಕೆಯು ಆತ್ಮನ ಫಲವೂ ಮತ್ತು ನೂತನ ಸೃಷ್ಟಿಯ ಬಾಧ್ಯತೆಯ ಪಾಲೂ ಆಗಿದೆ.

## Faith a Fruit of the Spirit and a Part of the Present Inheritance of the New Creation

ನಾವು ದೇವರ ಮಕ್ಕಳಾಗುವ ಮುನ್ನ – ಹೌದು, ನಮ್ಮ ನೀತಿನಿರ್ಣಯಕ್ಕೂ ಮುಂಚೆ, ನಾವು ದೇವರ ಶಾಂತಿಯನ್ನು ಮತ್ತು ಆತನಿಂದ ಪಾಪ ಕ್ಷಮಾಪಣೆಯನ್ನು ಹೊಂದಿಕೊಳ್ಳುವ ಮುನ್ನವೇ ನಂಬಿಕೆಯು ನಮ್ಮದಾಗಬೇಕು. ಯಾಕೆಂದರೆ, ನಾವು ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ. ನಾವು ಪವಿತ್ರಾತ್ಮನನ್ನು ಪಡಕೊಳ್ಳುವ ಮುಂಚೆಯೇ ನಮಗಿದ್ದ ಈ ನಂಬಿಕೆಯು ಆತ್ಮನ ಫಲವಾದ, ಪ್ರತಿಫಲದ ನಂಬಿಕೆಯಾಗಲಾರದು. ದೇವರ ಮತ್ತು ಆತನ ವಾಗ್ದಾನಗಳ ಬಗ್ಗೆ ನಮ್ಮ ಮನಸ್ಸಿನ ಕ್ರಿಯೆಗಳು ಮತ್ತು ಕಾರ್ಯಾಚರಣೆಗಳೇ ನಂಬಿಕೆಯಾಗಿದೆ. ಅಜ್ಞಾನದ ಕಾರಣವೋ ಇಲ್ಲವೆ ತಮ್ಮ ಮನಸ್ಸಿನ ಪತನದಿಂದಾಗಿಯೋ ಯಾರು ದೇವರಲ್ಲಿ ತಮ್ಮ ಭರವಸೆಯನ್ನು ಕಾರ್ಯಗತಗೊಳಿಸುವುದಿಲ್ಲವೋ ಅಂಥವರು ಸುವಾರ್ತಾ ಯುಗದ ಹಂಚಿಕೆಗಳಿಗನುಸಾರವಾಗಿ ಆಶೀರ್ವಾದಗಳನ್ನು ಹೊಂದಿಕೊಳ್ಳುವುದು ಅಸಾಧ್ಯ. ಆದರೆ, ಬರಲಿರುವ ಮಿಲೇನಿಯಂ ಧರ್ಮಯುಗದ ಆಶೀರ್ವಾದದಲ್ಲಿ ಪಾಲುಗಾರರಾಗುವುದನ್ನು ಅಡ್ಡಿಪಡಿಸುವ ಪರಿಸ್ಥಿತಿಯಲ್ಲಲ್ಲ. ಸುವಾರ್ತಾಯುಗದ ಈ ಕರೆಯು ನಂಬಿಕೆಯ ಮೂಲಕ ನಡೆಯುವವರಿಗೆ ಮಾತ್ರ, ನೋಟದಿಂದಲ್ಲ – ಯಾರು ಆ ರೀತಿಯಲ್ಲಿ ನಡೆಯಲಾರರೋ ಅಂಥವರು ಈಗ ದೇವರೊಂದಿಗೆ ನಡೆಯಲಾರರು. "ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸಲು ಸಾಧ್ಯವಿಲ್ಲ". ಪ್ರಾರಂಭದಲ್ಲಿ ಆ ರೀತಿಯ ನಂಬಿಕೆಯಿಲ್ಲದವರು ಪ್ರಸ್ತುತ ಸಮಯದಲ್ಲಿ ಯಾವುದೇ ಆರಂಭವನ್ನು ಮಾಡಲಾರರು; ಮತ್ತು ಪ್ರಾರಂಭದಲ್ಲಿ ನಂಬಿಕೆಯುಳ್ಳವರು ಸಹಾ ಅದು ಬೆಳೆದು ಅಭಿವೃದ್ಧಿ ಹೊಂದದ ಹೊರತು ಅವರು ಜಯಿಸುವ ಶಕ್ತಿಯ ಕೊರತೆ ಯುಳ್ಳವರಾಗುತ್ತಾರೆ. ಯಾಕೆಂದರೆ – "ಲೋಕವನ್ನು ಜಯಸುವಂಥದು ನಮ್ಮ ನಂಬಿಕೆಯೇ" (1 ಯೋಹಾನ 5:4).

ನಂಬಿಕೆ ಮತ್ತು ಅಂಧಶ್ರದ್ಧೆ ಇವುಗಳಲ್ಲಿನ ಅಗಾಧವಾದ ವ್ಯತ್ಯಾಸಗಳನ್ನು ನಾವು ಗ್ರಹಿಸಬೇಕಾಗುವುದು. ಕೊಟ್ಯಾಂತರ ಜನರು ಅಂಧಶ್ರದ್ಧೆ, ಮೂಢ ನಂಬಿಕೆಗಳನ್ನು ಹೊಂದಿದವರೂ ಆಗಿದ್ದಾರೆ. ಅಂಥವರು ಸಾವಿರದೊಂದು ಅಸಮಂಜಸವಾದ ಸಂಗತಿಗಳನ್ನು, ಯಾವುದೇ ಸಾಕ್ಷಿಗಳಿಲ್ಲದೆ ಸುಲಭವಾಗಿ ನಂಬಿಬಿಡುತ್ತಾರೆ. ಈ ಮೂಢ ನಂಬಿಕೆಯುಳ್ಳವರು ನಂಬಬಾರದವುಗಳನ್ನು ನಂಬುವುದು ಮಾತ್ರವಲ್ಲ ಇಂಥವರು ಅನ್ಯಜನರ ನಾಡಿನಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಅವರಲ್ಲಿ ಲಕ್ಷಾಂತರ ಜನರು ಕ್ರೈಸ್ತ ಹೆಸರುಗಳನ್ನು ಹೊಂದಿರುತ್ತಾರೆ ಮತ್ತು ಯಾವುದಾದರೂ ಪಂಗಡಕ್ಕೆ ಸೇರಿದವರಾಗಿರುತ್ತಾರೆ. ಇಂತಹ ಮೂಡನಂಬಿಕೆಗಳನ್ನು, ಸುಲಭವಾಗಿ ನಂಬುವುದನ್ನು ಖಂಡಿಸಬೇಕು, ದೂಷಿಸಬೇಕು, ದೂರವಿರಿಸಬೇಕು ಮತ್ತು ಸೋಲಿಸಬೇಕು. ನಿಜವಾದ ನಂಬಿಕೆಯನ್ನು ಪ್ರೋತ್ಸಾಹಿಸಬೇಕು, ಹೆಚ್ಚಿಸಿಕೊಳ್ಳಬೇಕು, ಬಲಪಡಿಸಿಕೊಳ್ಳಬೇಕು ಮತ್ತು ಬೆಳೆಯುವಂತೆ ಮಾಡಬೇಕು. ದೇವರ ಮೇಲಣ ಭಕ್ತಿಯೆಂದರೆ ಆತನ ವಾಗ್ದಾನಗಳ ಮೇಲೆ ಬೆಳೆಸಿಕೊಳ್ಳುವ ವಿಶ್ವಾಸ, ಭರವಸೆ, ನಂಬಿಕೆಗಳೇ ಹೊರತು ಮಾನವ ಸಂಪ್ರದಾಯಗಳ ಮೇಲೆ, ತತ್ವಜ್ಞಾನದ ಮೇಲೆ ಅಥವಾ ಊಹಾಪೋಹಗಳ ಮೇಲೆ ಅಲ್ಲ.

ದೇವರು ಆತನ ಹೆಸರು ಅಭಿಪ್ರಾಯ ನೀಡುವಂತೆ ಸ್ವಯಂ ಇರುವಾತನು, ಸರ್ವ ಶಕ್ತನು, ಮಹಾಜ್ಞಾನಿಯೂ, ನ್ಯಾಯಾಧಿಪತಿಯೂ ಮತ್ತು ಸರ್ವ ಸೃಷ್ಟಿಯನ್ನು ಪ್ರೀತಿಮಾಡುವವನೂ ಆಗಿದ್ದಾನೆ. ಆತನನ್ನು ಯಾರು ಧೃಢನಿಶ್ಚಯದಿಂದ ಹುಡುಕುತ್ತಾರೋ ಅವರಿಗೆ ಆತನು ಪ್ರತಿಫಲವನ್ನು ನೀಡುವವನಾಗಿದ್ದಾನೆ ಎಂದು ನಾವು ನಂಬುವುದಾದಲ್ಲಿ, ಅದರ ಪರಿಣಾಮವಾಗಿ ನಾವು ಆತನನ್ನು ಹುಡುಕುತ್ತೇವೆ; ಆತನನ್ನು ತಿಳಿದುಕೊಳ್ಳಲು ಮತ್ತು ಆತನ ವಾಕ್ಯಗಳನ್ನು ಅರ್ಥಮಾಡಿಕೊಳ್ಳಲು ಬಯಸುತ್ತೇವೆ; ಮತ್ತು ಈ ರೀತಿಯಾಗಿ ತಿಳಿದು ಅರ್ಥಮಾಡಿಕೊಳ್ಳುವುದರಿಂದ ನಮಗೆ ಅದರಲ್ಲಿ ಭರವಸೆ ಮೂಡುತ್ತದೆ, ಅದರಲ್ಲಿ ಭರವಸೆ ಮೂಡುವಾಗ ನಾವು ನಮ್ಮ ಜೀವನ ಕ್ರಮವನ್ನು ಅದರಂತೆ ನಿರ್ದೇಶಿಸಿಕೊಳ್ಳುತ್ತೇವೆ. ವಿಶ್ವಾಸದ ಈ ಆರಂಭವು ದೇವರ ಅನುಗ್ರಹದಡಿ ಕ್ರಿಸ್ತನನ್ನು ದೇವರೊಡನೆ ಮರು ಅನ್ಯೋನ್ಯತೆ ಹೊಂದುವ ಮತ್ತು ಆತನ ಕೃಪೆಗೆ ಹಿಂದಿರುಗುವ ನೂತನ ಮತ್ತು ಜೀವವುಳ್ಳ ಮಾರ್ಗವನ್ನಾಗಿ ನಮಗೆ ಸೂಚಿಸುತ್ತದೆ. ಈ ವಿಶ್ವಾಸವು ಕ್ರಿಸ್ತನನ್ನು ಗ್ರಹಿಸುವುದರಿಂದ, ಮತ್ತು ತನ್ನನ್ನೇ ವಿಧೇಯತೆಯಲ್ಲಿ ತೊಡಗಿಸಿಕೊಳ್ಳುವುದರಿಂದ ವೃದ್ಧಿಗೊಳ್ಳುತ್ತದೆ ಮತ್ತು ಕರ್ತನ ಆಶೀರ್ವಾದಗಳು ಇದರ ಮೇಲೆ ಹೆಚ್ಚಾಗಿ ಬರುತ್ತದೆ ಮತ್ತು ನೂತನ ಸೃಷ್ಟಿಯನ್ನು ಅಂಗೀಕರಿಸುವುದರ ಮತ್ತು ಅದರ ಸದಸ್ಯತ್ವ ಹೊಂದುವ ಷರತ್ತು ಮತ್ತು ನಿಯಮಗಳ ಬಗ್ಗೆ ಜ್ಞಾನೋದಯವನ್ನುಂಟು ಮಾಡುತ್ತದೆ. ಬೆಳೆಯುತ್ತಿರುವ ನಂಬಿಕೆಯು ದೇವರ ವಾಗ್ದಾನಗಳನ್ನು ಗ್ರಹಿಸುತ್ತದೆ – ದೇವರ ಬಾಧ್ಯಸ್ಥರಾಗುವ ಮತ್ತು ಕರ್ತನೂ ವಿಮೋಚಕನೂ ಆದ ಕ್ರಿಸ್ತನೊಂದಿಗೆ ಜೊತೆ ವಾರಸುದಾರರಾಗುವುದನ್ನು ಗ್ರಹಿಸುವಂತೆ ಮಾಡುತ್ತದೆ. ಇದರ ಫಲಿತಾಂಶವೆಂದರೆ ಆತ್ಮನ ಆಶೀರ್ವಾದ – ಹುಟ್ಟುವಿಕೆ, ಪುತ್ರರೆನಿಸಿಕೊಂಡು ಅಭಿಷೇಕ ಹೊಂದುವ ಸೌಭಾಗ್ಯ.

ಮುಂದುವರೆದ ಪರಿಣಾಮವೆಂದರೆ, ದೇವದರ್ಶನ ಗುಡಾರದ ಪವಿತ್ರಸ್ಥಾನದ ಬಂಗಾರದ ದೀಪಸ್ಥಂಭದ ಬೆಳಕಿನೊಂದಿಗೆ ಹೆಚ್ಚಾದ ಜ್ಞಾನೋದಯವುಂಟಾಗಿ ನಂಬಿಕೆ ಕಣ್ಣುಗಳು ಅದಿಲ್ಲದೆ ನೋಡಲಾಗದವುಗಳನ್ನು ನೋಡಲು ಶಕ್ತರನ್ನಾಗ ಮಾಡುವುದು – ಬೆಳಕಿನ ಬಗ್ಗೆ, ಹುಳಿಯಿಲ್ಲದ ರೊಟ್ಟಿಯ ಬಗ್ಗೆ, ಬಂಗಾರದ ದೂಪಸ್ಥಂಭದ ದೂಪದ ಬಗ್ಗೆ ಮತ್ತು ತೆರೆಯ ಆಚೆ ಬದಿಯಲ್ಲಿರುವ ಕೃಪಾಸನದ ಬಗ್ಗೆ ಮಹಾ ಯಾಜಕನ ವಿಶೇಷ ಸೇವೆಯನ್ನು ಗ್ರಹಿಸುವುದು. ಜೀವವುಳ್ಳ, ವಿಧೇಯತೆಯ ನಂಬಿಕೆಯು ದೇವರ ವಾಕ್ಯಗಳಲ್ಲಿ ಪ್ರಕಟಿಸಿರುವಂತೆ ಕ್ರಮೇಣವಾಗಿ ಈ ವಿವಿಧ ರೀತಿಯ ದೈವಕೃಪೆ ಮತ್ತು ಆಶೀರ್ವಾದ ಲಕ್ಷಣಗಳನ್ನು ಹೊಂದಿಕೊಂಡು ಅದು ಬಲದಿಂದ ಬಲಕ್ಕೆ, ಸ್ಪಷ್ಟತೆಯಿಂದ ಸ್ಪಷ್ಟತೆಗೆ ಬೆಳೆಯುತ್ತಾ ಕಡೆಗೆ ನೂತನ ಮನಸ್ಸಿನ ಪ್ರಾಥಮಿಕ ಭಾಗವಾಗಿ ಬಿಡುತ್ತದೆ. ಈ ಅನುಕೂಲಕರ ಅಂಶದಿಂದ ಈ ಹಿಂದೆ ಅದು ನೋಡಲಾಗದ ಸಂಗತಿಗಳನ್ನು ನೋಡುತ್ತದೆ. ಈ ಬಗ್ಗೆ ಅಪೋಸ್ತಲನು – "ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥ ದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ" (1ಕೊರಿ. 2:9) ಎಂದು ಬರೆಯುತ್ತಾನೆ.

ಆತ್ಮನಿಂದ ಉದಾಹರಿಸಲ್ಪಟ್ಟ ವಾಗ್ದಾನದ ಮಾತುಗಳ ಮೂಲಕ ಇದು ಮಿಗಿಲಾದ ಮಹತ್ತರ ಮತ್ತು ಅಮೂಲ್ಯವಾದ ಸಂಗತಿಗಳನ್ನು, ಪರಲೋಕದ ಸಂಗತಿಗಳನ್ನು, ಪ್ರಥಮ ಪುನರುತ್ಥಾನದಲ್ಲಿ ಪಡಕೊಳ್ಳಲಿರುವ ಮಹಿಮಾ ಸಂಗತಿಗಳನ್ನು, ಆಗ ಸ್ಥಾಪಿತವಾಗಲಿರುವ ದೇವರ ರಾಜ್ಯವನ್ನು – ಈ ಲೋಕದ ಎಲ್ಲಾ ಕುಟುಂಬಗಳಿಗೆ ಆಶೀರ್ವಾದಗಳನ್ನು ತರುವ ನೀತಿವಂತರ ಆಳ್ವಿಕೆಯನ್ನು– ಪಾಪದ ಪರಾಜಯ ಮತ್ತು ದೇವರ ಮಹಿಮೆಯೊಂದಿಗೆ ಸಹಕರಿಸದ ಪ್ರತಿ ವ್ಯಕ್ತಿ ಮತ್ತು ಸಂಗತಿಗಳ ನಾಶನವನ್ನು, ದೇವರ ಪ್ರೀತಿ ನಿಯಮಕ್ಕೆ ಅನುಸಾರವಾಗಿ ತೋರಿಸುತ್ತದೆ. ನೂತನ ಸೃಷ್ಟಿಯು ಇವೆಲ್ಲವೂ ವಿಶ್ವಾಸದ, ತಿಳುವಳಿಕೆಯ ಕಣ್ಣುಗಳ ಮೂಲಕ ನೋಡುತ್ತದೆ. ಈ ಕಣ್ಣುಗಳು ಸ್ವಾಭಾವಿಕ ಮನುಷ್ಯನಿಗೆ ಅಸ್ಪಷ್ಟವಾದ ಮತ್ತು ಅನಿಶ್ಚಿತವಾದ ಇದರಲ್ಲಿನ ಅನೇಕ ಸಂಗತಿಗಳನ್ನು ಈ ಕಣ್ಣುಗಳು ನೋಡುತ್ತವೆಂದು ಅಪೋಸ್ತಲನು ಭರವಸೆ ನೀಡುವವನಾಗಿದ್ದಾನೆ.– ಯಾಕೆಂದರೆ "ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು, ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ" (1 ಕೊರಿಂಥ 2:9,10).

ಇನ್ನೂ ನೋಡದಿರುವ ಸಂಗತಿಗಳ ಬಗ್ಗೆ ಆತ್ಮನಿಂದ ಹುಟ್ಟಿದ ಈ ನಂಬಿಕೆಯು ನೂತನ ಸೃಷ್ಟಿಯ ಬಾಧ್ಯತೆಗಳ ಪ್ರಸ್ತುತ ಭಾಗವಾಗಿದೆ. ಇದು ಅಂತಿಮವಾಗಿ ಇದರ ಪ್ರತಿಯೊಂದು ನಿರೀಕ್ಷೆ ಮತ್ತು ಸಂತೋಷಗಳೊಂದಿಗೆ ಜೊತೆಗೂಡಿದೆ – ಮುಂಬರಲಿರುವ ಮಹಿಮೆಯ ಸಾಧ್ಯವಾದ ಪೂರ್ವ ಸವಿಯನ್ನು ಮಾತ್ರವೇ ಇದು ನೀಡುವುದಾಗಿದೆ. ನಿಜವಾಗಿಯೂ, ಅಪೋಸ್ತಲನು ಹೇಳುವಂತೆ ಈ ಬುನಾದಿಯ ಮೇಲೆ ನಮ್ಮ ಎಲ್ಲಾ ನಿರೀಕ್ಷೆಗಳು ಮತ್ತು ಸಂತೋಷಗಳು ಕಟ್ಟಲ್ಪಡುವುದಾಗಿದೆ. – "ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ

ಭರವಸದಿಂದಿರುವುದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳುಕೊಳ್ಳುವುದೂ ಆಗಿದೆ" (ಇಬ್ರಿಯ 11:1). ಇದರಿಂದ ನಾವಿನ್ನೂ ನೋಡದ ಸಂಗತಿಗಳು ನಮ್ಮ ಮನಸ್ಸಿಗೆ, ನಾವು ನೋಡಿದ ಸಂಗತಿಗಳಷ್ಟೇ ಸುಸ್ಪಷ್ಟ ಸಂಗತಿಗಳಾಗಿ ಬಿಡುತ್ತವೆ. ಹೌದೆಂದು ಅಪೋಸ್ತಲನು ಹೇಳುತ್ತಾನೆ, ಈ ದೃಷ್ಟಿಕೋನದಿಂದ ನಾವು ನಮ್ಮ ಪ್ರಾಕೃತಿಕ ಕಣ್ಣುಗಳಿಂದ ನೋಡುವ ಸಂಗತಿಗಳು ಐಹಿಕವಾದವುಗಳೆಂದೂ, ನಾವು ನಮ್ಮ ಪ್ರಾಕೃತಿಕ ಕಣ್ಣುಗಳಿಂದ ನೋಡಲಾಗದಿದ್ದರೂ, ನಮ್ಮ ವಿಶ್ವಾಸದ ಕಣ್ಣುಗಳಿಂದ ನೋಡುವವುಗಳು ಸಹಾ ಸತ್ಯವಾದುವುಗಳು, ಸುಸ್ಪಷ್ಟವಾದವುಗಳು ಮತ್ತು ನಿತ್ಯನಿರಂತರವಾದವುಗಳೂ ಆಗಿವೆ ಎಂದು ತಿಳಿದುಕೊಳ್ಳಬೇಕಾಗುವುದು.

ನಮ್ಮ ಪ್ರಸ್ತುತವಾದ ಪ್ರಾಪ್ತಿಗೆ ಮತ್ತು ನಮ್ಮ ಪ್ರಸ್ತುತ ಬಾಧ್ಯತೆಗಳನ್ನು ಉಳಿಸಿಕೊಳ್ಳುವುದಕ್ಕೆ, ಬರಲಿರುವ ಆಶೀರ್ವಾದಗಳ ಪೂರ್ವಭಾವಿಯಾಗಿ ಸವಿ ನೋಡಲು ನಂಬಿಕೆಯು ಎಷ್ಟು ಅಗತ್ಯ ಎಂಬುದನ್ನು ಅಪೋಸ್ತಲನಾದ ಯಾಕೋಬನು ಈ ಮಾತುಗಳ ಮೂಲಕ ಸ್ಪಷ್ಟವಾಗಿ ತೋರಿಸಿದ್ದಾನೆ –"ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆ ಆಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ, ಅದು ಅವನಿಗೆ ದೊರಕುವುದು; ದೇವರು ಹಂಗಿಸದೆ ಎಲ್ಲರಿಗೂ ಉದಾರ ಮನಸ್ಸಿನಿಂದ ಕೊಡುವವನಾಗಿದ್ದಾನೆ. ಸ್ವಲ್ಪವೂ ಸಂಶಯ ಪಡದೆ ನಂಬಿಕೆಯಿಟ್ಟು ಕೇಳಿಕೊಳ್ಳಬೇಕು. ಸಂದೇಹ ಪಡುವವನೋ ಗಾಳಿಯಿಂದ ಬಡಿಯಲ್ಪಟ್ಟ ಸಮುದ್ರದ ತೆರೆಯಂತೆ ಅಲೆಯುತ್ತಿರುವನು. ಆ ಮನುಷ್ಯನು ತಾನು ಕರ್ತನಿಂದ ಏನಾದರೂ ಹೊಂದುವನೆಂದು ಭಾವಿಸದೆ ಇರಲಿ; ಅವನು ಎರಡು ಮನಸ್ಸುಳ್ಳವನೂ ತನ್ನ ನಡತೆಯಲ್ಲೆಲ್ಲಾ ಚಂಚಲನೂ ಆಗಿದ್ದಾನೆ" (ಯಾಕೋಬ 1:5–8). ನಂಬಿಕೆಯಲ್ಲಿ ಬಲಗೊಳ್ಳದೆ ಜಯಶಾಲಿಗಳಾಗುವುದು ಎಷ್ಟರ ಮಟ್ಟಿಗೆ ಅಸಾಧ್ಯ ಎಂಬುದನ್ನು ಅಪೋಸ್ತಲನು ಇಲ್ಲಿ ತೋರಿಸಿಕೊಡುವವನಾಗಿದ್ದಾನೆ. ಆದುದರಿಂದ ಪರಿಶುದ್ಧ ಗ್ರಂಥವು ನಂಬಿಕೆಯಲ್ಲಿ ಬೆಳೆಯುವುದನ್ನು ಎಲ್ಲೆಡೆ ಮನಸ್ಸಿಗೆ ನಾಟುವಂತೆ ಬೋಧಿಸುತ್ತದೆ. ಅಪೋಸ್ತಲರಂತೆ ಕರ್ತನ ಜನರೆಲ್ಲರೂ ಇದಕ್ಕಾಗಿ "ಕರ್ತನೇ, ನಮ್ಮ ವಿಶ್ವಾಸವನ್ನು ಹೆಚ್ಚಿಸು" ಎಂದು ಪ್ರಾರ್ಥಿಸಬೇಕು. ಹೀಗೆ ಬೇಡುವಾಗ ಅವರು ಈ ಪ್ರಾರ್ಥನೆಯ ಪೂರೈಸುವಿಕೆಗೆ ಸಂಕಲ್ಪಿಸಿರುವ ಸಾಧನವನ್ನು ಉಪಯೋಗಿಸಬೇಕು. ಅವರ ಪ್ರಾರ್ಥನೆಯು ಶ್ರದ್ಧಾಪೂರ್ವಕವಾಗಿದ್ದರೆ ಆ ಸಾಧನವನ್ನು ಅವರು ಪ್ರಾಮಾಣಿಕವಾಗಿ ಉಪಯೋಗಿಸಬೇಕು – ಅವರು ತಮ್ಮ ಪ್ರಾರ್ಥನೆಯಲ್ಲಿ ದೇವರನ್ನು ಬಯಸಬೇಕು, ಆತನ ವಾಕ್ಯಗಳನ್ನು ತಿಳುಕೊಳ್ಳಲು ಬಯಸಬೇಕು, ಅದಕ್ಕೆ ವಿಧೇಯರಾಗಲು ಬಯಸಬೇಕು, ಆತನ ಸೇವೆಯನ್ನು ಬಯಸಬೇಕು ಮತ್ತು ಅದರಲ್ಲಿ ಸಂತೋಷಿಸಬೇಕು, ಆತ್ಮನ ಎಲ್ಲಾ ಕೃಪೆಯನ್ನು ಧರಿಸಿಕೊಳ್ಳಲು ಬಯಸಬೇಕು. ಇವು ಅವರ ಮನೋವೃತ್ತಿಯಾದಲ್ಲಿ ಅವರಲ್ಲಿ ಬಲವಾದ ವಿಶ್ವಾಸವುಂಟಾಗುವುದು, ನಂಬಿಕೆಯಲ್ಲಿ ಪೂರ್ಣ ಭರವಸಗಳು ಉಂಟಾಗುವುವು – ಹೀಗೆ ನೀವು ಮಾಡಿದರೆ ಎಂದಿಗೂ ಎಡಹುವುದಿಲ್ಲ ಮತ್ತು ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ನಿತ್ಯ ರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಾಳವಾಗಿ ಅನುಗ್ರಹಿಸುವನು" ( 2 ಪೇತ್ರ 1: 10, 11) ■

* * * * * *

## ನೂತನ ಸೃಷ್ಟಿಯ ಜೀವದ ಹಾಡು

ನನ್ನ ಜೀವನವು ಕೊನೆಯಿಲ್ಲದ ಹಾಡಿನಲ್ಲಿ ಹರಿಯುತ್ತಿದೆ;
ಭೂಮಿಯ ಆಕ್ರಂಧನಕ್ಕಿಂತ ಮೇಲೆ
ನಾನು ದೂರವಲ್ಲದ ಸವಿಯಾದ ಸಂಗೀತವನ್ನು ಕಂಡೆ,
ಅದು ನೂತನ ಸೃಷ್ಟಿಯ ಜಯಕಾರ ಮಾಡುತ್ತಿದೆ;
ಎಲ್ಲಾ ತರದ ಗೊಂದಲಮಯ ಹೋರಾಟದ ನಡುವೆ
ಗುನುಗುನಿಸುವ ಆ ಹಾಡು ಕೇಳುತಿದೆ ನನಗೆ;
ನನ್ನಾತ್ಮದಲ್ಲಿ ಅದರ ಪ್ರತಿಧ್ವನಿಯು ಕಂಡುಬರುತಿದೆ,
ಹಾಡದೆ ನಾ ಹೇಗಿರಲಿ?

ನನ್ನೆಲ್ಲಾ ಸಂತೋಷ ಮತ್ತು ಸೌಖ್ಯತೆ ಸತ್ತರೇನು!
ನನ್ನ ಕರ್ತನು ನನ್ನ ವಿಮೋಚಕನು ಜೀವಿಸುತ್ತಾನೆ
ಕಾರ್ಗತ್ತಲು ನನ್ನಾವರಿಸಿದರೇನು!
ಹಾಡುಗಳನ್ನು ರಾತ್ರಿಯಲ್ಲೂ ಕೊಡುತ್ತಾನೆ.
ನನ್ನ ಅಂತರಂಗದಲ್ಲಿರುವ ಶಾಂತಿಯನ್ನು
ಯಾವ ಬಿರುಗಾಳಿಯೂ ಕದಲಿಸಲಾರದು,
ಆಶ್ರಯದಾತನನ್ನು ಅಂಟಿಕೊಂಡಿರುವಾಗ;
ಯಾಕಂದರೆ ಕ್ರಿಸ್ತೇಸುವು ಭೂಮ್ಯಾಕಾಶಗಳ ಒಡೆಯನು
ಹಾಡದೆ ನಾ ಹೇಗಿರಲಿ?

ನಾ ಕಣ್ಣೆತ್ತಿ ನೋಡಲು ಮೋಡವು ಕರಗಿದೆ,
ನೀಲಾಕಾಶವನ್ನು ನೋಡುತಿರುವೆ; ಮತ್ತು
ದಿನದಿಂದ ದಿನಕೆ ಹಾದಿ ಸುಗಮವಾಗುತಲಿದೆ
ಯಾಕಂದರೆ ನಾನದನ್ನು ಪ್ರೀತಿಸುವುದನ್ನು
ಮೊದಲು ಕಲಿತೆ; ಕ್ರಿಸ್ತನಲ್ಲಿರುವ ಶಾಂತಿ
ನನ್ನ ಹೃದಯವನ್ನು ನೂತನಪಡಿಸಿದೆ
ಚಿಲುಮೆಯು ಎಂದೂ ಉಕ್ಕುತ್ತಿದೆ;
ಎಲ್ಲವೂ ನನ್ನದು ಯಾಕಂದರೆ ನಾನು ಆತನವನು
ಹಾಡದೆ ನಾ ಹೇಗಿರಲಿ?